ಗುರುವಾರ, ಅಕ್ಟೋಬರ್ 26, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 296 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಸಮಕಾಲೀನ ಶೈಕ್ಷಣಿಕ ಬೇಡಿಕೆಗಳನ್ನು ಪೂರೈಸುತ್ತ, ದೇಶದ ಪ್ರಗತಿಯಲ್ಲಿ ಮಹತ್ವದ ಪಾತ್ರವಹಿಸಿ, ಸುವರ್ಣ ಸಂಭ್ರಮದಲ್ಲಿರುವ ಪ್ರತಿಷ್ಠಿತ ಸಂಸ್ಥೆ ಐಐಎಂಬಿ ನಡೆದುಬಂದ ಹಾದಿ



ಆಳ-ಅಗಲ
ಸಿರಿವಂತ ದೇಶಗಳತ್ತ ಭಾರತೀಯರ ವಲಸೆ
ವಿಜಯಪುರ ಜಿಲ್ಲೆಗೆ ಬಸವೇಶ್ವರರ ಹೆಸರು? 6
ರಸಗೊಬ್ಬರ ಸಬ್ಸಿಡಿಗೆ ₹22,303 ಕೋಟಿ 10

ಸೆನ್ಸೆಕ್ಸ್	ನಿಫ್ಟಿ	₹/$
64,049	19,122	83.17

1 ಎನ್‌ಸಿಇಆರ್‌ಟಿಯಿಂದ ರಚಿಸಲಾದ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿಯಿಂದ ಶಿಫಾರಸು

2 ಮೊಘಲರು ಮತ್ತು ಸುಲ್ತಾನರ ವಿರುದ್ಧದ ವಿಜಯವನ್ನು ಪಠ್ಯಕ್ರಮದಲ್ಲಿ ಉಲ್ಲೇಖಿಸಿಲ್ಲ ಎಂಬ ಅಭಿಮತ

3 ಬೇರೆ ಬೇರೆ ಯುದ್ಧಗಳಲ್ಲಿನ 'ಹಿಂದೂ ವಿಜಯ'ವನ್ನು ಪ್ರಮುಖವಾಗಿ ಚಿತ್ರಿಸುವಂತೆ ಸಲಹೆ ನೀಡಿದ ಸಮಿತಿ

ಪಠ್ಯದಿಂದ 'ಇಂಡಿಯಾ'ಕ್ಕೆ ಕೊಕ್?

ನವದೆಹಲಿ (ಪಿಟಿಐ): ಒಂದರಿಂದ ಹನ್ನೆರಡನೆಯ ತರಗತಿವರೆಗಿನ ಎಲ್ಲ ಪಠ್ಯಪುಸ್ತಕಗಳಲ್ಲಿ 'ಇಂಡಿಯಾ' ಎಂಬ ಹೆಸರಿನ ಬದಲು 'ಭಾರತ' ಎಂಬ ಹೆಸರನ್ನು ಬಳಸಬೇಕು ಎಂದು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ರಚಿಸಿದ್ದ ಉನ್ನತ ಮಟ್ಟದ ಸಮಿತಿ ಶಿಫಾರಸು ಮಾಡಿದೆ.

ಪಠ್ಯಕ್ರಮದಲ್ಲಿ 'ಪುರಾತನ ಇತಿಹಾಸ'ದ ಬದಲಿಗೆ 'ಶಾಸ್ತ್ರೀಯ ಇತಿಹಾಸ'ವನ್ನು ಅಳವಡಿಸಬೇಕು, ಎಲ್ಲ ವಿಷಯಗಳಲ್ಲಿಯೂ 'ಭಾರತೀಯ ಜ್ಞಾನ ವ್ಯವಸ್ಥೆ'ಯನ್ನು (ಐಕೆಎಸ್) ಅಳವಡಿಸಬೇಕು ಎಂಬ ಶಿಫಾರಸನ್ನು ಕೂಡ ಮಾಡಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಸಿ.ಐ. ಇಸಾಕ್ ತಿಳಿಸಿದ್ದಾರೆ.

ಆದರೆ, ಸಮಿತಿಯ ಶಿಫಾರಸು ಆಧರಿಸಿ ಯಾವುದೇ ತೀರ್ಮಾನ ಆಗಿಲ್ಲ ಎಂದು ಎನ್‌ಸಿಇಆರ್‌ಟಿ ಅಧ್ಯಕ್ಷ ದಿನೇಶ್ ಸಕಲಾನಿ ತಿಳಿಸಿದ್ದಾರೆ. 'ಎಲ್ಲ ತರಗತಿಗಳ ಪಠ್ಯಪುಸ್ತಕಗಳಲ್ಲಿಯೂ ಭಾರತ ಎಂಬ ಪದವನ್ನು ಬಳಸಲು ಸಮಿತಿಯು ಸರ್ವಸಮ್ಮತಿಯ ಶಿಫಾರಸು ಮಾಡಿದೆ' ಎಂದು ಇಸಾಕ್ ಅವರು ಹೇಳಿದ್ದಾರೆ.

'ಭಾರತ ಎಂಬುದು ಬಹಳ ಹಳೆಯ ಹೆಸರು. ಏಳು ಸಾವಿರ ವರ್ಷಗಳಷ್ಟು ಹಳೆಯದಾದ ವಿಷ್ಣು ಪುರಾಣದಂತಹ ಪುರಾತನ ಪಠ್ಯಗಳಲ್ಲಿ ಭಾರತ ಪದವನ್ನು ಬಳಸಲಾಗಿದೆ' ಎಂದು ಇಸಾಕ್ ತಿಳಿಸಿದ್ದಾರೆ.

ಜಿ20 ಶೃಂಗಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆಗಳಲ್ಲಿ 'ಪ್ರೆಸಿಡೆಂಟ್ ಆಫ್ ಇಂಡಿಯಾ' ಬದಲು 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಕೇಂದ್ರ ಸರ್ಕಾರವು ನಮೂದಿಸಿತ್ತು. ನಂತರ, ಜಿ20 ಶೃಂಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಸನದ ಎದುರಿನ ನಾಮಫಲಕದಲ್ಲಿ 'ಇಂಡಿಯಾ' ಬದಲು 'ಭಾರತ' ಎಂದು ಬರೆಯಲಾಗಿತ್ತು.

'ಸಂಯಮ ಕಳೆದುಕೊಂಡ ಬಿಜೆಪಿ'

ಇಸಾಕ್ ನೇತೃತ್ವದ ಸಮಿತಿಯ ಶಿಫಾರಸು ರಾಜಕೀಯ ವಿವಾದಕ್ಕೆ ಕಾರಣವಾಗಿದೆ.

'ಇಂಡಿಯಾ' ಗುಂಪು ರಚನೆಯಾದಾಗಿನಿಂದ ಬಿಜೆಪಿಯು ಸಂಯಮ ಕಳೆದುಕೊಂಡು ಪ್ರತಿಕ್ರಿಯಿಸುತ್ತಿದೆ. 'ಇಂಡಿಯಾ' ಒಕ್ಕೂಟವು ತನ್ನ ಹೆಸರನ್ನು 'ಭಾರತ' ಎಂದು ಬದಲಿಸಿಕೊಂಡರೆ, ಬಿಜೆಪಿಯವರು ದೇಶದ ಹೆಸರನ್ನು ಜಂಬೂದ್ವೀಪ ಎಂದು ಅಥವಾ ಆರ್ಯಾವರ್ತ ಎಂದು ಬದಲಿಸುವರೇ ಎಂದು ಆರ್‌ಜೆಡಿ ಸಂಸದ ಮನೋಜ್ ಝಾ ಪ್ರಶ್ನಿಸಿದ್ದಾರೆ.

'ಎನ್‌ಸಿಇಆರ್‌ಟಿ ಈ ಕೆಲಸ ಮಾಡುತ್ತಿದೆ. ಆದರೆ ಸಂವಿಧಾನದ 1ನೆಯ ವಿಧಿಯಲ್ಲಿ ಇಂಡಿಯಾ ಅಂದರೆ ಭಾರತ ಎಂದು ಹೇಳಲಾಗಿದೆ. ಇದು ಕೂಡ ಬಿಜೆಪಿಗೆ ವರ್ಜ್ಯವೇ' ಎಂದು ಝಾ ಕೇಳಿದ್ದಾರೆ.

'ಇಂಡಿಯಾ ಗುಂಪಿನ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭೀತಿ ಇದೆ ಎಂಬುದನ್ನು ಇದು ತೋರಿಸುತ್ತದೆ. ಅವರ ಮೈತ್ರಿಕೂಟವನ್ನು ಪಕ್ಷಗಳು ತೊರೆಯುತ್ತಿವೆ. ಹೆಸರು ಬದಲಾಯಿಸುವ ಬದಲು ನಿರುದ್ಯೋಗ, ಹಣದುಬ್ಬರ ಮತ್ತು ಭ್ರಷ್ಟಾಚಾರದಂತಹ ವಿಷಯಗಳ ಬಗ್ಗೆ ಗಮನಹರಿಸಬೇಕು' ಎಂದು ಎಎಪಿ ನಾಯಕಿ ಪ್ರಿಯಾಂಕಾ ಕಕ್ಕರ್ ಹೇಳಿದ್ದಾರೆ.

'ತಪ್ಪುಗಳು ಹಾಗೂ ಕೆಟ್ಟ ಆಡಳಿತದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿಯು ಹೆಸರು ಬದಲಾವಣೆಯ ರಾಜಕೀಯದ ಮೊರೆ ಹೋಗುತ್ತಿದೆ' ಎಂದು ಡಿಎಂಕೆ ವಕ್ತಾರ ಸರವಣನ್ ಅಣ್ಣಾದೊರೈ ಹೇಳಿದ್ದಾರೆ.

'ಕಾಲ ಪಕ್ವವಾಗಿಲ್ಲ'

ಹೊಸ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳ ರಚನೆಯ ಕೆಲಸವು ನಡೆದಿದೆ. ಈ ಉದ್ದೇಶಕ್ಕಾಗಿ ತಜ್ಞರನ್ನು ಒಳಗೊಂಡ ಪಠ್ಯಕ್ರಮ ಗುಂಪುಗಳನ್ನು ರಚಿಸಲಾಗುತ್ತಿದೆ. ಹೀಗಾಗಿ, ಮಾಧ್ಯಮಗಳಲ್ಲಿ ಈಗ ಪ್ರಕಟವಾಗಿರುವ, ಪ್ರಸಾರವಾಗಿರುವ ವಿಷಯದ ಬಗ್ಗೆ ಪ್ರತಿಕ್ರಿಯೆ ನೀಡುವುದಕ್ಕೆ ಕಾಲ ಪಕ್ವವಾಗಿಲ್ಲ ಎಂದು ಎನ್‌ಸಿಇಆರ್‌ಟಿಯು ಎಕ್ಸ್ ವೇದಿಕೆಯ ಮೂಲಕ ತಿಳಿಸಿದೆ.

ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಬಂದ ನಂತರ 'ಇಂಡಿಯಾ' ಪದ ಬಂದಿದೆ. ಪ್ಲಾಸಿ ಕದನದ ನಂತರದಲ್ಲಿ ಈ ಪದದ ಬಳಕೆ ಶುರುವಾಯಿತು
ಸಿ.ಐ. ಇಸಾಕ್, ಅಧ್ಯಕ್ಷ,ರಾಷ್ಟ್ರೀಯ ಪಠ್ಯಕ್ರಮ ಮತ್ತು ಶಿಕ್ಷಣ ಕಲಿಕಾ ಪರಿಕರ ಸಮಿತಿ

ಶಿಫಾರಸು ಸಂವಿಧಾನಕ್ಕೆ ಅಗೌರವ ತೋರಿದೆ. 'ಇಂಡಿಯಾ ಅಂದರೆ ಭಾರತ' ಎಂದು ಸಂವಿಧಾನ ಹೇಳಿದೆ. ಎರಡೂ ಪದಗಳನ್ನು ಪರ್ಯಾಯವಾಗಿ ಬಳಸಬಹುದು
ಜಿಗ್ನೇಶ್ ಮೇವಾನಿ
ಗುಜರಾತ್‌ನ ಕಾಂಗ್ರೆಸ್ ಶಾಸಕ

7ನೇ ಪುಟ ನೋಡಿ

ರಾಮನಗರ: ವಿವಾದ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರ ಬೆಂಗಳೂರಿನ ಭಾಗ' ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯಿಂದ ರಾಜಕೀಯ ವಲಯದಲ್ಲಿ ಉಂಟಾದ ವಿವಾದ ತಾರಕಕ್ಕೆ ಏರಿದೆ.

'ಕುಮಾರಸ್ವಾಮಿಗೆ ಸಾಮಾನ್ಯ ಪರಿಜ್ಞಾನ ಇಲ್ಲ. ಎಲ್ಲ ವಿಚಾರಗಳು ವಿಧಾನಸಭೆ ಅಧಿವೇಶನದಲ್ಲಿ ಚರ್ಚೆಯಾಗಲಿ. ಬಹಿರಂಗ ಚರ್ಚೆಗೂ ನಾನು ಸಿದ್ಧ' ಎಂದು ಶಿವಕುಮಾರ್ ಸವಾಲು ಹಾಕಿದ್ದಾರೆ.

'ಈ ಜನ್ಮವಷ್ಟೇ ಅಲ್ಲ, ಇನ್ನೂ ಏಳು ಜನ್ಮ ಎತ್ತಿ ಬಂದರೂ ರಾಮನಗರ ಜಿಲ್ಲೆಯನ್ನು ಛಿದ್ರ ಮಾಡಲು ಸಾಧ್ಯವಿಲ್ಲ. ಇದನ್ನು ಶಿವಕುಮಾರ್ ಅರ್ಥಮಾಡಿಕೊಳ್ಳಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. 'ಕನಕಪುರವನ್ನು ಬೆಂಗಳೂರಿಗೆ ಸೇರಿಸುವ ಪ್ರಸ್ತಾವ ಬಂದರೆ ಸಂಪುಟ ಸಭೆ ತೀರ್ಮಾನ ಮಾಡಲಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 6

ಹಮಾಸ್ ದಾಳಿ ಪ್ರಚೋದನೆ ಇಲ್ಲದೇ ಆಗಿದ್ದಲ್ಲ: ಗುಟೆರಸ್

ವಿಶ್ವಸಂಸ್ಥೆ (ಪಿಟಿಐ): ಹಮಾಸ್ ನಡೆಸಿರುವ ದಾಳಿಯು 'ಯಾವುದೇ ಪ್ರಚೋದನೆ ಇಲ್ಲದೆ ಆಗಿದ್ದಲ್ಲ' ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರು ನೀಡಿರುವ ಹೇಳಿಕೆಯು ಇಸ್ರೇಲ್‌ನ ಕೋಪಕ್ಕೆ ಕಾರಣವಾಗಿದೆ. ಗುಟೆರಸ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು, ಈ ಹೇಳಿಕೆಗೆ ಕ್ಷಮೆ ಯಾಚಿಸಬೇಕು ಎಂದು ಅದು ಆಗ್ರಹಿಸಿದೆ.

ಗುಟೆರಸ್

ಇಸ್ರೇಲ್–ಗಾಜಾ ಪರಿಸ್ಥಿತಿ ಕುರಿತು ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಚಿವರ ಮಟ್ಟದ ಸಭೆಯಲ್ಲಿ ಪಾಲ್ಗೊಂಡಿದ್ದ ಇಸ್ರೇಲ್ ವಿದೇಶಾಂಗ ವ್ಯವಹಾರಗಳ ಸಚಿವ ಎಲಿ ಕೊಹೆನ್ ಅವರು ಗುಟೆರಸ್ ಅವರನ್ನು ಮಂಗಳವಾರ ಮಧ್ಯಾಹ್ನ ಭೇಟಿ ಮಾಡಬೇಕಿತ್ತು. ಆದರೆ, ಗುಟೆರಸ್ ಅವರು ಭದ್ರತಾ ಮಂಡಳಿಗೆ ನೀಡಿದ ಈ ಹೇಳಿಕೆಯ ಕಾರಣದಿಂದಾಗಿ, ಇಸ್ರೇಲ್ ಸಚಿವರು ಭೇಟಿಯನ್ನು ರದ್ದು ಮಾಡಿದರು.

ಗುಟೆರಸ್ ಅವರು ಭಯೋತ್ಪಾದನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂದು ಇಸ್ರೇಲ್ ಆರೋಪಿಸಿದೆ. ಭದ್ರತಾ ಮಂಡಳಿಯನ್ನು ಉದ್ದೇಶಿಸಿ ಗುಟೆರಸ್ ಅವರು, 'ಹಮಾಸ್ ನಡೆಸಿರುವ ದಾಳಿಯು ಪ್ರಚೋದನೆ ಇಲ್ಲದೆ ಆಗಿರುವುದಲ್ಲ ಎಂಬುದನ್ನು ಗುರುತಿಸಬೇಕಿರುವುದು ಮಹತ್ವದ್ದು. ಪ್ಯಾಲೆಸ್ಟೀನ್ ಜನರ ಜಾಗವನ್ನು 56 ವರ್ಷಗಳಿಂದ ಉಸಿರುಗಟ್ಟಿಸುವ ರೀತಿಯಲ್ಲಿ ಆಕ್ರಮಿಸಿಕೊಳ್ಳಲಾಗಿದೆ' ಎಂದು ಹೇಳಿದ್ದರು.

ಇಸ್ರೇಲ್–ಹಮಾಸ್ ನಡುವಿನ ಸಮರದಲ್ಲಿ ಜನರು ಭಾರಿ ಸಂಖ್ಯೆಯಲ್ಲಿ ಜೀವ ಕಳೆದುಕೊಳ್ಳುತ್ತಿರುವುದು ಕಳವಳಕಾರಿ
ಆರ್. ರವೀಂದ್ರ, ವಿಶ್ವಸಂಸ್ಥೆಯಲ್ಲಿ ಭಾರತದ ಉಪ ಶಾಶ್ವತ ಪ್ರತಿನಿಧಿ

7ನೇ ಪುಟ ನೋಡಿ

ಲಾಕೆಟ್ ಒಪ್ಪಿಸಿದ ದರ್ಶನ್, ನಿಖಿಲ್ ಕುಮಾರಸ್ವಾಮಿ

ಹುಲಿ ಉತ್ಪನ್ನ ಶೋಧ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲಿ ಉಗುರು, ಹಲ್ಲು, ಚರ್ಮ ಬಳಕೆ ಮಾಡುತ್ತಿರುವವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲು ಮುಂದಾಗಿರುವ ಅರಣ್ಯ ಇಲಾಖೆ, ದೂರುಗಳು ಮಾತ್ರವಲ್ಲದೆ, ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಮಾಹಿತಿ ಆಧರಿಸಿ ರಾಜ್ಯದ ವಿವಿಧೆಡೆ ಶೋಧ ಕಾರ್ಯಾಚರಣೆ ಆರಂಭಿಸಿದೆ.

ಹುಲಿ ಉಗುರನ್ನು ಒಳಗೊಂಡಿರುವ ಲಾಕೆಟ್ ಧರಿಸಿದ ಆರೋಪದ ಮೇಲೆ ಚಿತ್ರನಟ ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಚಿತ್ರನಟ ಹಾಗೂ ಜೆಡಿಎಸ್ ಯುವ ಮುಖಂಡ ನಿಖಿಲ್ ಕುಮಾರಸ್ವಾಮಿ ಮನೆಗಳಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದಾರೆ.

'ದರ್ಶನ್ ಮತ್ತು ನಿಖಿಲ್ ಕುಮಾರಸ್ವಾಮಿ ಕೊರಳಲ್ಲಿ ಧರಿಸುತ್ತಿದ್ದ ಲಾಕೆಟ್‌ಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಎರಡೂ ಪ್ರತಿಕೃತಿಗಳು ಎಂಬುದು ಪರಿಶೀಲನೆಯಲ್ಲಿ ಕಂಡುಬಂದಿದೆ' ಎಂದು ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರ ತಿಳಿಸಿದರು.

ಲಾಕೆಟ್ ತಂದುಕೊಟ್ಟ ಜಗ್ಗೇಶ್ ಪತ್ನಿ

ರಾಜ್ಯಸಭಾ ಸದಸ್ಯರೂ ಆಗಿರುವ ಚಿತ್ರನಟ ಜಗ್ಗೇಶ್ ಕೂಡ ಹುಲಿಯ ಉಗುರುಗಳನ್ನು ಒಳಗೊಂಡ ಚಿನ್ನದ ಲಾಕೆಟ್ ಧರಿಸಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಜಗ್ಗೇಶ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ಆಗ್ರಹವೂ ಕೇಳಿಬಂದಿತ್ತು.

ಅರಣ್ಯ ಇಲಾಖೆಯ ಅಧಿಕಾರಿಗಳ ತಂಡವು ಮಲ್ಲೇಶ್ವರದಲ್ಲಿರುವ ಜಗ್ಗೇಶ್ ಅವರ ಮನೆಯಲ್ಲಿ ತಪಾಸಣೆಗಾಗಿ ಬುಧವಾರ ಸಂಜೆ ತೆರಳಿತ್ತು. ಅವರು ಮನೆಯಲ್ಲಿರಲಿಲ್ಲ. ಜಗ್ಗೇಶ್ ಅವರ ಪತ್ನಿ ಪರಿಮಳಾ ಅವರು ಹುಲಿಯ ಉಗುರುಗಳಿರುವ ಚಿನ್ನದ ಲಾಕೆಟ್ ಅನ್ನು ಅಧಿಕಾರಿಗಳಿಗೆ ಒಪ್ಪಿಸಿದರು.

'ಜಗ್ಗೇಶ್ ಅವರ ಮನೆಯಲ್ಲಿ ನಾವು ತಪಾಸಣೆ ನಡೆಸಿಲ್ಲ. ಅವರ ಪತ್ನಿ ಹುಲಿ ಉಗುರುಗಳಿರುವ ಲಾಕೆಟ್ ಒಪ್ಪಿಸಿದ್ದಾರೆ. 40 ವರ್ಷ ಹಳೆಯದು ಎಂದು ಅವರು ಮಾಹಿತಿ ನೀಡಿದ್ದಾರೆ. ಅದರ ವಯಸ್ಸನ್ನು ಖಚಿತಪಡಿಸಿಕೊಳ್ಳಲು ಡೆಹ್ರಾಡೂನ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಹುಲಿ ಉಗುರು ಎಂದು ಖಚಿತವಾದಲ್ಲಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಡಿಸಿಎಫ್ ರವೀಂದ್ರ ಸುದ್ದಿಗಾರರಿಗೆ ತಿಳಿಸಿದರು.

6ನೇ ಪುಟ ನೋಡಿ

ಮೂಲನಿಧಿ: ನಿವಾಸಿಗಳ ಸಂಘಕ್ಕೆ ವರ್ಗಾಯಿಸಲು ಕೆ–ರೇರಾ ಆದೇಶ

• ಸ್ನೇಹ ರಮೇಶ್

ಬೆಂಗಳೂರು: ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳಿಗೆ 'ಮೂಲನಿಧಿ'ಯನ್ನು (ಕಾರ್ಪಸ್ ಫಂಡ್) 60 ದಿನಗಳಲ್ಲಿ ವರ್ಗಾಯಿಸಬೇಕು ಎಂದು ಬಿಲ್ಡರ್‌ಗಳಿಗೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ಆದೇಶಿಸಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿರುವ 'ಅಸೋಸಿಯೇಷನ್ ಆಫ್ ಎ ಸೀನಿಯರ್ಸ್' ನಿವಾಸಿಗಳ ಸಂಘ ದಾಖಲಿಸಿದ್ದ ಪ್ರಕರಣದಲ್ಲಿ, ಕಾರ್ಪಸ್ ಫಂಡ್ ಅನ್ನು ನಿವಾಸಿಗಳ ಸಂಘಕ್ಕೆ ವರ್ಗಾಯಿಸುವಂತೆ ಸೂಚಿಸಿದೆ.

ಕರ್ನಾಟಕ ರಿಯಲ್ ಎಸ್ಟೇಟ್ (ನಿಯಮಗಳು ಮತ್ತು ಅಭಿವೃದ್ಧಿ) ಕಾಯ್ದೆ 2016 ಪ್ರಕಾರ, ಪ್ರಮೋಟರ್ ಅಥವಾ ಬಿಲ್ಡರ್‌ಗಳು ಮಾಲೀಕರ ಸಂಘ ಸ್ಥಾಪನೆಗೆ ಉತ್ತೇಜಿಸಬೇಕು. ಆ ಸಂಘಕ್ಕೆ ಕಾರ್ಪಸ್ ಫಂಡ್ ಅನ್ನು ವರ್ಗಾಯಿಸಬೇಕು. ಆದರೆ, ಬಹುತೇಕ ಬಿಲ್ಡರ್‌ಗಳು ನಿಧಿಯನ್ನು ಸಂಘಗಳಿಗೆ ವರ್ಗಾಯಿಸಿಲ್ಲ. ಇದನ್ನು ಪಡೆಯಲು ಸಂಘಗಳು ಹೋರಾಟ ಮಾಡುತ್ತಿವೆ. ಈ ಐತಿಹಾಸಿಕ ತೀರ್ಪು ಮುಂದಿನ ಪ್ರಕರಣಗಳಲ್ಲೂ ನ್ಯಾಯ ಪಡೆಯಲು ದಾರಿ ಮಾಡಿಕೊಟ್ಟಿದೆ ಎಂದು ನಿವಾಸಿಗಳ ಸಂಘಗಳ ಪ್ರತಿನಿಧಿಗಳು ಹೇಳಿದ್ದಾರೆ.

'ಮಾಲೀಕರ ಸಂಘಗಳು ಕಾರ್ಪಸ್ ಫಂಡ್ ಅನ್ನು ಪಡೆಯಲು ಅನುವಾಗುವಂತೆ ಪ್ರಥಮ ಬಾರಿಗೆ ಇಂತಹ ಸ್ಪಷ್ಟ ಆದೇಶವನ್ನು ನೀಡಲಾಗಿದೆ. ಹಲವು ಪ್ರಕರಣಗಳಲ್ಲಿ ನಿಧಿ ಕೋಟ್ಯಂತರ ರೂಪಾಯಿಗಳಿದ್ದು, ಪ್ರಮೋಟರ್‌ಗಳು ಅಥವಾ ಬಿಲ್ಡರ್‌ಗಳು ನಿಧಿಯನ್ನು ವರ್ಗಾಯಿಸಲು ವಿಳಂಬ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಈ ಪ್ರಕರಣದ ತೀರ್ಪನ್ನು ಉಲ್ಲೇಖಿಸಬಹುದು. ಇದರಿಂದ ಪ್ರಕ್ರಿಯೆ ಖಂಡಿತಾ ಸುಗಮವಾಗುತ್ತದೆ' ಎಂದು ಫೋರಂ ಫಾರ್ ಪೀಪಲ್ಸ್ ಕಲೆಕ್ಟೀವ್ ಎಫರ್ಟ್ಸ್‌ನ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶಂಕರ್ ಹೇಳಿದರು.

'ಕಾರ್ಪಸ್ ಫಂಡ್ ವರ್ಗಾವಣೆ ಮಾತ್ರವಲ್ಲ, ತೀರ್ಪಿನಲ್ಲಿನ ಅವಲೋಕನ ಹೊಸ ಚರ್ಚೆಯನ್ನು ಹುಟ್ಟುಹಾಕಬಲ್ಲವು ಮತ್ತು ಇವೆಲ್ಲ ಮಾಲೀಕರಿಗೆ ಸಹಕಾರಿಯಾಗಲಿವೆ' ಎಂದು ಕರ್ನಾಟಕ ಹೋಮ್ ಬೈಯರ್ಸ್ ಫೋರಂನ ಸಂಚಾಲಕ ಧನಂಜಯ ಪದ್ಮನಾಭಾಚಾರ್ ಅಭಿಪ್ರಾಯಪಟ್ಟರು.

3ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು

ಗಾಜಾದಲ್ಲಿ ವಿಶ್ವಸಂಸ್ಥೆಯ ನೆರವಿಗೆ ಅಡ್ಡಿ 7

ಲಿಂಗಾಯತ ಜಾತಿಗಳಿಗೆ ಮೀಸಲಾತಿ ಅಸಾಧ್ಯ: ಜಾಮದಾರ 6

ನಾಳೆಯಿಂದ ಸರ್ಕಾರಿ ನೌಕರರ ಕ್ರೀಡಾಕೂಟ

ಬೆಂಗಳೂರು: ತುಮಕೂರು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಅ.27ರಿಂದ 29ರವರೆಗೆ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿದೆ.

ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಆಯ್ಕೆಯಾದ 3,500 ಮಹಿಳೆಯರು ಸೇರಿದಂತೆ 10 ಸಾವಿರ ನೌಕರರು ಭಾಗವಹಿಸುವರು. 27ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನೋಂದಣಿ ಪ್ರಕ್ರಿಯೆ ನಡೆಯಲಿದೆ. ಅಂದು ಸಂಜೆ 4.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕ್ರೀಡಾಕೂಟಕ್ಕೆ ಚಾಲನೆ ನೀಡುವರು. ಗೃಹ ಸಚಿವ ಜಿ.ಪರಮೇಶ್ವರ, ಕ್ರೀಡಾ ಸಚಿವ ಬಿ.ನಾಗೇಂದ್ರ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಉಪಸ್ಥಿತರಿರುವರು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಮಾಹಿತಿ ನೀಡಿದ್ದಾರೆ. 27ರಂದು ಸಂಜೆ 7ಕ್ಕೆ ಗಾಯಕರಾದ ಹೇಮಂತ್, ಇಂದು ನಾಗರಾಜ್, ಕಂಬದ ರಂಗಯ್ಯ ಅವರ ಸರಿಗಮಪ ತಂಡದಿಂದ ಸಂಗೀತ ಸಂಜೆ, 28ರಂದು ಸಂಜೆ 7ಕ್ಕೆ ಸವಿತಕ್ಕ ಬ್ಯಾಂಡ್, ಕಡಬಗೆರೆ ಮುನಿರಾಜು ತಂಡದಿಂದ ಜಾನಪದೋತ್ಸವ ಕಾರ್ಯಕ್ರಮವಿರುತ್ತದೆ. ಭಾಗವಹಿಸುವ ಎಲ್ಲ ನೌಕರರಿಗೂ ಸರ್ಕಾರ ವಿಶೇಷ ಸಾಂದರ್ಭಿಕ ರಜೆ ನೀಡಿದೆ ಎಂದು ಹೇಳಿದ್ದಾರೆ.

ನಕಲಿ ಆಧಾರ್ ಕಾರ್ಡ್, ಗುರುತಿನ ಚೀಟಿ ನಕಲಿ: ಆರೋಪ • ರದ್ದತಿಗೆ ಸುರೇಶ್‌ಕುಮಾರ್ ಆಗ್ರಹ

ನಕಲಿ: ಸಿಬಿಐ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಚಿವ ಬೈರತಿ ಸುರೇಶ್ ಅವರ ನಿಕಟವರ್ತಿಗಳೂ ಶಾಮೀಲು: ಆರೋಪ
- 'ಚುನಾವಣಾ ಆಯೋಗಕ್ಕೂ ದೂರು ನೀಡುತ್ತೇನೆ'

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಕಲಿ ಆಧಾರ್, ಚುನಾವಣಾ ಗುರುತಿನ ಚೀಟಿ, ಪಾನ್ ಕಾರ್ಡ್‌ಗಳನ್ನು ಸೃಷ್ಟಿಸಿರುವ ಘಟನೆಗೆ ಸಂಬಂಧಿಸಿದಂತೆ ಸಿಬಿಐ ಅಥವಾ ಎನ್‌ಐಎಯಿಂದ ತನಿಖೆ ನಡೆಸಬೇಕು ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಒತ್ತಾಯಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂಎಸ್‌ಎಲ್ ಟೆಕ್ನೊ ಸೊಲ್ಯೂಷನ್ಸ್‌ನಲ್ಲಿ ಸಿದ್ಧಪಡಿಸಿದ ನಕಲಿ ಆಧಾರ್ ಕಾರ್ಡ್‌ಗಳನ್ನು ಕೂಡಲೇ ರದ್ದು ಮಾಡಬೇಕು. ಇದರಲ್ಲಿ ಸಚಿವ ಬೈರತಿ ಸುರೇಶ್ ಅವರ ನಿಕಟವರ್ತಿಗಳೂ ಶಾಮೀಲಾಗಿದ್ದಾರೆ ಎಂದು ಅವರು ಆರೋಪಿಸಿದರು.

'ಜನನ ದೃಢೀಕರಣ ಪತ್ರವನ್ನೂ ನೀಡದೇ ಆಧಾರ್ ಕಾರ್ಡ್ ಮಾಡಿಕೊಡಲಾಗಿದೆ ಎಂದರೆ ಇವರ ಅಟ್ಟಹಾಸ, ಅಹಂಕಾರ ಎಷ್ಟಿರಬೇಕು? ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಚುನಾವಣೆಯಲ್ಲಿ ಗೆಲುವಿಗಾಗಿ ಇದನ್ನು ಮಾಡಿಸಿದ್ದಾರೆ. ಈ ಕುರಿತು ಚುನಾವಣಾ ಆಯೋಗಕ್ಕೂ ದೂರು ಕೊಡಲಿದ್ದೇವೆ. ಆಧಾರ್ ಕಾರ್ಡ್, ನಕಲಿ ಮತದಾರರ ಚೀಟಿ ಜಾಲದ ವ್ಯಾಪ್ತಿ ವಿಚಾರಣೆ ನಡೆಯಬೇಕಿದೆ. ಎನ್‌ಐಎ ಅಥವಾ ಸಿಬಿಐಗೆ ಒಪ್ಪಿಸಲು ಮನವಿ ಮಾಡುತ್ತೇವೆ' ಎಂದು ಹೇಳಿದರು.

'ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಪ್ರಕಾರ ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಪೊಲೀಸ್ ಇನ್‌ಸ್ಪೆಕ್ಟರ್ ಅವರು ಇದೇ 19 ರಂದು ಆರ್‌ಟಿ ನಗರದ ಸುಲ್ತಾನ್ ಪಾಳ್ಯ, ಬನಶಂಕರಿ ಕಾಂಪ್ಲೆಕ್ಸ್‌ನ ಎಂಎಸ್‌ಎಲ್ ಟೆಕ್ನೊ ಸೊಲ್ಯೂಷನ್ಸ್‌ನಲ್ಲಿ ಗುರುತಿನ ಚೀಟಿಗಳನ್ನು ಸಿದ್ಧಪಡಿಸಲಾಗುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಇವರು ಈ ಎಲ್ಲಾ ಗುರುತಿನ ಚೀಟಿಗಳನ್ನು ಸ್ವಂತ ಲಾಭಕ್ಕಾಗಿ ಸೃಷ್ಟಿಸಿ ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾದವರಿಗೆ ಸಹಕರಿಸುತ್ತಿದ್ದರು. ನೈಜ ಗುರುತಿನ ಚೀಟಿಗಳೆಂದು ಹೆಚ್ಚಿನ ಹಣಕ್ಕೆ ನೀಡಿ ಸರ್ಕಾರ ಮತ್ತು ಸಾರ್ವಜನಿಕರಿಗೆ ಮೋಸ ಮಾಡುತ್ತಿದ್ದರು' ಎಂದು ಸುರೇಶ್ ಕುಮಾರ್ ತಿಳಿಸಿದರು.

'ಎಂಎಸ್‌ಎಲ್ ಟೆಕ್ನೊ ಸೊಲ್ಯೂಷನ್ಸ್ ಮಾಲೀಕ ಮೌನೇಶ್ ಕುಮಾರ್ ಮತ್ತು ಈತನ ಕೃತ್ಯಕ್ಕೆ ಸಹಕರಿಸಿದ ಭಗತ್, ರಾಘವೇಂದ್ರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೋರಲಾಗಿತ್ತು. ಸೆಕ್ಷನ್ 420 ಸೇರಿ ಹಲವು ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಾಗಿದೆ. ಈ ಅಪರಾಧವು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದೆ. ಆರೋಪಿ ಮೌನೇಶ್ ಸಚಿವ ಬೈರತಿ ಸುರೇಶ್ ಅವರ ನಿಕಟವರ್ತಿ' ಎಂದು ಆರೋಪಿಸಿದ ಅವರು, ಮೌನೇಶ್ ಜತೆ ಬೈರತಿ ಸುರೇಶ್ ಸ್ಕೂಟರ್‌ನಲ್ಲಿ ಕುಳಿತು ಹೋಗುತ್ತಿದ್ದ ಚಿತ್ರವನ್ನೂ ಪ್ರದರ್ಶಿಸಿದರು.

ಬಿಜೆಪಿ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ವಿವೇಕ್ ರೆಡ್ಡಿ ಮಾತನಾಡಿ, 'ಬಾಂಗ್ಲಾದಿಂದ ವಲಸೆ ಬಂದವರು ಅತ್ಯಂತ ಸುಲಭವಾಗಿ ನಕಲಿ ಗುರುತಿನ ಚೀಟಿಗಳನ್ನು ಪಡೆಯುತ್ತಿದ್ದಾರೆ. ಪೊಲೀಸರು ಈ ಪ್ರಕರಣವನ್ನು ಮುಚ್ಚಿ ಹಾಕಲು ಮುಂದಾಗಿದ್ದಾರೆ' ಎಂದರು. ಬಿಜೆಪಿ ಮುಖಂಡ ಕಟ್ಟಾ ಜಗದೀಶ್ ನಾಯ್ಡು ಸುದ್ದಿಗೋಷ್ಠಿಯಲ್ಲಿದ್ದರು.

ವಿಮಾನದ ಶೌಚಾಲಯದಲ್ಲಿ ₹80 ಲಕ್ಷ ಮೌಲ್ಯದ ಚಿನ್ನ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ವಿಮಾನದ ಶೌಚಾಲಯದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹80.21ಲಕ್ಷ ಮೌಲ್ಯದ 1.3 ಕೆ.ಜಿಗೂ ಹೆಚ್ಚು ಚಿನ್ನವನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

PUBLIC NOTICE

This is to notify the general public that our client intends to purchase immovable agricultural land bearing Survey No. 72/2 measuring 28 Guntas, situated at Tigalachowdadenahalli Village, Sarjapura-3 Hobli, Anekal Taluk, Bangalore District described in the Schedule hereunder and hereinafter referred to as "Schedule Property" from M/s. Prasiddhi Ventures, represented by its Managing Partner Madhuraju Padma Siddharth son of late N.C. Madhuraju.
Any person having any right, title, interest or claim in the Schedule Property or having any objection to the purchase must notify the undersigned with documentary proof thereof, within seven (7) days from the date of this publication, failing which it shall be deemed that no person has any objection to our client purchasing the Schedule Property.

SCHEDULE PROPERTY

All that piece and parcel of the immovable agricultural land bearing Survey No. 72/2, measuring 28 Guntas, situated at Tigalachowdadenahalli Village, Sarjapura -3 Hobli, Anekal Taluk, Bangalore District and bounded on:
East by : Road;
West by : Survey No. 72/1;
North by : Survey No. 114;
South by : Survey No. 72/28;

Place: Bangalore
Date: 26.10.2023

ABHIJIT ATUR, Advocate
M/s Agraa Legal
2nd floor, No. 19, Shivashankara plaza,
Lalbagh road, Richmond circle,
Bangalore - 560 002
admin@agraalegal.com

ವರ್ತೂರು ಸಂತೋಷ್ ಬಂಧನ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘಟನೆಯ ಕಾರ್ಯಕರ್ತರು ಹಾಗೂ ಸಂತೋಷ್ ಅವರ ಅಭಿಮಾನಿಗಳು, ಗ್ರಾಮಸ್ಥರು ವರ್ತೂರಿನ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪುರ: ಹಳ್ಳಿಕಾರ್ ವರ್ತೂರು ಸಂತೋಷ್ ಬಂಧನ ಖಂಡಿಸಿ ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘಟನೆಯ ಕಾರ್ಯಕರ್ತರು ಹಾಗೂ ಸಂತೋಷ್ ಅಭಿಮಾನಿಗಳು, ಗ್ರಾಮಸ್ಥರು ವರ್ತೂರಿನ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಅರಣ್ಯಾಧಿಕಾರಿಗಳ ವಿರುದ್ಧ, ಕಪ್ಪು ಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಹಳ್ಳಿಕಾರ್ ರಾಸುಗಳ ಸಂರಕ್ಷಣೆಯ ಮೂಲಕ ಗುರುತಿಸಿಕೊಂಡಿರುವ ಸಂತೋಷ್ ಅವರನ್ನು ಬಂಧಿಸಿರುವುದು ರೈತರಿಗೆ ಮಾಡುತ್ತಿರುವ ಅಪಮಾನ. ಎಫ್‌ಎಸ್‌ಎಲ್ ವರದಿ ಬಂದ ನಂತರ ಕ್ರಮ ಕೈಗೊಳಬೇಕು. ಏಕಾಏಕಿ ಬಂಧಿಸಿರುವುದನ್ನು ನೋಡಿದರೆ 'ಬಿಗ್ ಬಾಸ್'ನಲ್ಲಿನ ಜನಪ್ರಿಯರಾಗುತ್ತಿರುವುದನ್ನು ಸಹಿಸದೇ ಅವರ ವಿರೋಧಿಗಳು ಪಿತೂರಿ ಮಾಡಿ ಬಂಧಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರ್ತೂರ್ ಸಂತೋಷ್ ವಿರುದ್ಧ ಕಾನೂನು ಕ್ರಮ ಜರುಗಿಸಿದಷ್ಟು ವೇಗವಾಗಿ ದರ್ಶನ್, ಜಗ್ಗೇಶ್, ರಾಕ್ ಲೈನ್ ವೆಂಕಟೇಶ್ ವಿರುದ್ಧ ಯಾಕೆ ಜರುಗಿಸಿಲ್ಲ? ವಿನಯ್ ಗುರೂಜಿ ಅವರು ಹುಲಿ ಚರ್ಮದ ಮೇಲೆ ಕುಳಿತಿದ್ದರು ಎಂಬ ಆರೋಪವೂ ಇದೆ. ಅವರ ಮೇಲೆ ಕ್ರಮ ಯಾಕೆ ತೆಗೆದುಕೊಳ್ಳುತ್ತಿಲ್ಲ ಎಂದು ಪ್ರಶ್ನಿಸಿದರು.

ಕೆಎಸ್‌ಒಯು: ದಾಖಲೆ ಕೋರಿ ಪತ್ರ

ಮೈಸೂರು: ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 2021–22ರಲ್ಲಿ ಹಣ ದುರುಪಯೋಗ ಆರೋಪ ಕೇಳಿಬಂದಿದ್ದು, ಇದರ ಪರಿಶೀಲನೆಗೆ ಅಗತ್ಯ ದಾಖಲೆಗಳನ್ನು ಒದಗಿಸುವಂತೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಕೋರಿ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ.

ಕೆಎಸ್‌ಒಯುನಲ್ಲಿ ಹಣದ ದುರುಪಯೋಗ ಕುರಿತು ಇಲ್ಲಿನ ಹೂಟಗಳ್ಳಿ ನಿವಾಸಿ ಎಂ.ಎಲ್. ಪರಶುರಾಮ ಎಂಬುವರು ಲೆಕ್ಕಪರಿಶೋಧನಾ ಇಲಾಖೆಗೆ ದೂರು ನೀಡಿದ್ದರು.

ಸಂಗಮೇಶಗೆ 'ಆದಿಕವಿ ಪುರಸ್ಕಾರ', ಸತ್ಯನಾರಾಯಣಗೆ 'ವಾಗ್ದೇವಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಸಂಗಮೇಶ ಸವದತ್ತಿಮಠ

ಸತ್ಯ ನಾರಾಯಣ ಕಾರ್ತಿಕ

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ ನೀಡುವ 2022–23ನೇ ಸಾಲಿನ 'ಆದಿಕವಿ ಪುರಸ್ಕಾರ'ಕ್ಕೆ ಗುಲ್ಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಸಂಗಮೇಶ ಸವದತ್ತಿಮಠ ಹಾಗೂ 'ವಾಗ್ದೇವಿ ಪ್ರಶಸ್ತಿ'ಗೆ ಲೇಖಕ ಸತ್ಯನಾರಾಯಣ ಕಾರ್ತಿಕ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಗಳು ತಲಾ ₹ 1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿವೆ. ಸಂಗಮೇಶ ಸವದತ್ತಿಮಠ ಅವರ 136 ಗ್ರಂಥಗಳು ಪ್ರಕಟವಾಗಿವೆ. 500 ಉಪನ್ಯಾಸಗಳನ್ನು ಅವರು ನೀಡಿದ್ದಾರೆ. ರೂಪರಶ್ಮಿ ಪ್ರಕಾಶನ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ, ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಸತ್ಯನಾರಾಯಣ ಕಾರ್ತಿಕ್ ಅವರು 4 ಸ್ವತಂತ್ರ ಪುಸ್ತಕಗಳು ಹಾಗೂ 3 ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಸುಮಾರು 150ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ ಎಂದು ಸಂಸ್ಥೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ ನರೂರು ತಿಳಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ವಾಲ್ಮೀಕಿ ಮಹರ್ಷಿ ಜಯಂತಿ ಪ್ರಯುಕ್ತ ಇದೇ 28ರ ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಗಿರಿನಗರದಲ್ಲಿರುವ ಅಕ್ಷರಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕದ ಗೌರವಾಧ್ಯಕ್ಷರಾದ ಪ್ರೊ. ಪ್ರೇಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ವಿಸ್ತಾರ ವಾಹಿನಿಯ ಪ್ರಧಾನ ಸಂಪಾದಕ ಹರಿಪ್ರಕಾಶ ಕೋಣೆಮನೆ, ಜಿಕೆ ಗ್ರೂಪ್ಸ್ ಮಾಲೀಕ ಜಯರಾಮ್ ಹಾಗೂ ವಾಗ್ದೇವಿ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನಾಧ್ಯಕ್ಷ ಕೆ. ಹರೀಶ್ ಭಾಗವಹಿಸುತ್ತಾರೆ ಎಂದು ಹೇಳಿದ್ದಾರೆ.

27ರಿಂದ 'ತಿಂಡಿಪೋತರ ಹಬ್ಬ'

ಬೆಂಗಳೂರು: ಐ ನೆಟ್ ವರ್ತಿಂಗ್ ಸಂಸ್ಥೆಯು ಇದೇ 27ರಿಂದ 29ರವರೆಗೆ ನಾಯಂಡಹಳ್ಳಿಯ ಪಂತರ ಪಾಳ್ಯದ ನಂದಿ ಲಿಂಕ್ ಮೈದಾನದಲ್ಲಿ 'ತಿಂಡಿಪೋತರ ಹಬ್ಬ' ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಬ್ಬದ ಆಯೋಜಕ ಡಿ. ನರೇಶ್ ಬಾಬು, 'ಮೂರು ದಿನಗಳ ಈ ಹಬ್ಬದಲ್ಲಿ 80ಕ್ಕೂ ಅಧಿಕ ಮಳಿಗೆಗಳು ಇರಲಿದ್ದು, ಸಾವಿರಕ್ಕೂ ಹೆಚ್ಚು ಬಾಣಸಿಗರ ಕೈರುಚಿಯನ್ನು ಆಸ್ವಾದಿಸಬಹುದಾಗಿದೆ. ಇಲ್ಲಿ ತಿಂಡಿ ತಿನಿಸುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. 600ಕ್ಕೂ ಹೆಚ್ಚು ಬಗೆಯ ವಿವಿಧ ಸಸ್ಯಹಾರಿ ಆಹಾರ ಖಾದ್ಯಗಳನ್ನು ಸವಿಯಬಹುದು. ಕೆಲವರು ಸ್ಥಳದಲ್ಲಿಯೇ ತಿನಿಸುಗಳನ್ನು ತಯಾರಿಸಿ ವಿತರಿಸುತ್ತಾರೆ' ಎಂದು ಹೇಳಿದರು. 'ಮೂರು ದಿನಗಳ ಈ ಹಬ್ಬದಲ್ಲಿ ಒಂದು ಲಕ್ಷಕ್ಕೂ ಅಧಿಕಜನರು ಭಾಗವಹಿಸುವ ನಿರೀಕ್ಷೆಯಿದೆ. ದಕ್ಷಿಣ ಭಾರತ, ಉತ್ತರ ಭಾರತದ ವಿವಿಧ ದೇಸಿ ಮತ್ತು ವಿದೇಶಿ ಆಹಾರಗಳು ಇಲ್ಲಿರುತ್ತವೆ' ಎಂದು ತಿಳಿಸಿದರು.

ಇನ್ನೊಬ್ಬ ಆಯೋಜಕ ಡಿ.ಡಿ. ಪ್ರಶಾಂತ್, 'ಈ ಹಬ್ಬದಲ್ಲಿ ಪರಿಸರಸ್ನೇಹಿ ವಸ್ತುಗಳಿಗೆ ಹಾಗೂ ಶುಚಿತ್ವಕ್ಕೆ ಆದ್ಯತೆ ನೀಡಲಾಗುತ್ತದೆ. ಹಾಡು, ನೃತ್ಯ ಸೇರಿ ವಿವಿಧ ಮನೋರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ವಾಹನ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. ಪ್ರವೇಶ ಶುಲ್ಕ ಒಬ್ಬರಿಗೆ ₹ 50 ನಿಗದಿಪಡಿಸಲಾಗಿದ್ದು, ಬೆಳಿಗ್ಗೆ 10 ಗಂಟೆಯಿಂದ ಪ್ರಾರಂಭವಾಗಲಿದೆ' ಎಂದು ಹೇಳಿದರು.

ರಂಗ ಶಂಕರ ನಾಟಕೋತ್ಸವ ನಾಳೆಯಿಂದ

ಬೆಂಗಳೂರು: ರಂಗ ಶಂಕರ ವಾರ್ಷಿಕ ನಾಟಕೋತ್ಸವವು ಇದೇ 27ರಿಂದ ನ.1ರವರೆಗೆ ವೈಟ್‌ಫೀಲ್ಡ್‌ನಲ್ಲಿರುವ ಜಾಗೃತಿ ಥಿಯೇಟರ್ ಹಾಗೂ ಜೆ.ಪಿ.ನಗರದಲ್ಲಿರುವ ರಂಗ ಶಂಕರದಲ್ಲಿ ನಡೆಯಲಿದೆ.

ಈ ನಾಟಕೋತ್ಸವವು 'ಮತ್ತೆ ಕಥನಗಳು' ಎಂಬ ವಿಷಯದ ಮೇಲೆ ಕೇಂದ್ರೀಕೃತವಾಗಿದೆ. ಪ್ರತಿ ದಿನ ಸಂಜೆ 7.30ಕ್ಕೆ ನಾಟಕಗಳು ಪ್ರದರ್ಶನ ಕಾಣಲಿವೆ. ರಂಗ ಶಂಕರದಲ್ಲಿ ಆರೂ ದಿನಗಳು ನಾಟಕಗಳ ಪ್ರದರ್ಶನ ಇರಲಿದೆ. ಜಾಗೃತಿ ಥಿಯೇಟರ್‌ನಲ್ಲಿ ಇದೇ 29ರಿಂದ ನ.1ರವರೆಗೆ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ರಂಗ ಶಂಕರ ತಂಡದಿಂದ 'ಸ್ಲೈಸಸ್ ಆಫ್ ದ ಮೂನ್ ಸ್ವೆಪ್ಟ್ ಬೈ ದ ವಿಂಡ್' ಇಂಗ್ಲಿಷ್ ನಾಟಕ, ಮುಂಬೈನ ಅರಣ್ಯ ಥಿಯೇಟರ್ ಗ್ರೂಪ್‌ನಿಂದ 'ಜೋ ಡೂಬಾ ಸೋ ಫಾರ್' ಹಿಂದಿ, ಪರ್ಷಿಯನ್ ಹಾಗೂ ಉರ್ದು ನಾಟಕ, ಪಾಂಡಿಚೇರಿಯ ಆದಿಶಕ್ತಿ ತಂಡದಿಂದ 'ಊರ್ಮಿಳಾ' ಇಂಗ್ಲಿಷ್ ನಾಟಕ, ಚೆನ್ನೈನ ತಿನ್ನೈನಿಲ್ ವಾಸಿಗಳ್ ತಂಡದಿಂದ 'ಪಾಟಿಗುಳುಮ್' ತಮಿಳು ನಾಟಕ, ಪುಣೆಯ ಆಸಕ್ತ ಕಲಾಮಂಚ್‌ನಿಂದ 'ಘಂಟಾ ಘಂಟಾ ಘಂಟಾ ಘಂಟಾ ಘಂಟಾ' ಮರಾಠಿ ನಾಟಕ ಹಾಗೂ ಬೆಂಗಳೂರಿನ ದೃಶ್ಯ ರಂಗತಂಡದಿಂದ 'ಮಹಿಳಾ ಭಾರತ' ಕನ್ನಡ ನಾಟಕ ಪ್ರದರ್ಶನ ಕಾಣಲಿದೆ ಎಂದು ಆಯೋಜಕರು ಹೇಳಿದ್ದಾರೆ.

ಬುಕ್ ಮೈ ಶೋದಲ್ಲಿ ಟಿಕೆಟ್‌ಗಳು ಲಭ್ಯವಿವೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

14ನೇ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶ: ಸರ್ವಾಧ್ಯಕ್ಷತೆ: ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಉದ್ಘಾಟನೆ: ಮಲ್ಲೇಪುರಂ ಜಿ. ವೆಂಕಟೇಶ್, ಸಾಧಕರಿಗೆ ದತ್ತಿ ಪ್ರಶಸ್ತಿ ಪ್ರದಾನ: ಎಸ್.ಎಲ್. ಭೋಜೇಗೌಡ, ಮುಖ್ಯ ಅತಿಥಿ: ಎಂ.ಆರ್. ವೆಂಕಟೇಶ್, ಗೌರವ ಅತಿಥಿ: ಇಂದಿರಾ ಕೃಷ್ಣಪ್ಪ, ಆಯೋಜನೆ: ಬುದ್ಧ ಬಸವ ಗಾಂಧಿ ಸ್ಮಾರಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, 2ನೇ ಮಹಡಿ, ಶೇಷಾದ್ರಿಪುರ ಕಾಲೇಜು, ಬೆಳಿಗ್ಗೆ 9.30

ಆರ್.ಶ್ರೀನಿವಾಸ್ 60 ಅಭಿನಂದನಾ ಸಮಾರಂಭ: ಉದ್ಘಾಟನೆ: ದಿನೇಶ್ ಗುಂಡೂರಾವ್, 'ಕೌಸ್ತುಭ' ಅಭಿನಂದನಾ ಗ್ರಂಥ ಬಿಡುಗಡೆ: ಎಂ.ಆರ್. ಸೀತಾರಾಮ್, ಅಭಿನಂದನಾ ನುಡಿ: ಸಿ.ಎಸ್. ಷಡಾಕ್ಷರಿ, ಅಧ್ಯಕ್ಷತೆ: ಎಚ್. ರವಿಕುಮಾರ್, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಆರ್. ಶ್ರೀನಿವಾಸ್ ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

'ವೀರ ಸಾವರ್ಕರ್' ನಾಟಕ ಪ್ರದರ್ಶನ: ಆಯೋಜನೆ: ಸಾವರ್ಕರ್ ಪ್ರತಿಷ್ಠಾನ ಮೈಸೂರು, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಶಾರದಾ ಮಹಾಭಿಷೇಕ ಮತ್ತು ಶಾರದಾ ಶರನ್ನವರಾತ್ರಿ ಮಹೋತ್ಸವ: ಯಕ್ಷಗಾನ: ಸೃಷ್ಟಿ ಕಲಾ ವಿದ್ಯಾಲಯ, ಆಯೋಜನೆ ಹಾಗೂ ಸ್ಥಳ: ಶೃಂಗೇರಿ ಶಂಕರಮಠ, ಶಂಕರಪುರ, ಸಂಜೆ 7

ದಾಸರ ಪದಗಳ ಗಾಯನ: ನಿರೀಕ್ಷಾ ಮಂಜುನಾಥ್, ವಾದ್ಯ ಸಹಕಾರ: ಅಮಿತ್ ಶರ್ಮಾ, ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ 7.30

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLICE NOTICE

This is to inform the general public that my clients are intending to purchase the undeveloped industrially converted land measuring 2 (Two) acres 30 (Thirty) guntas, comprised in Survey number No.158 (old No13/p10) bearing khata no.814/158 bearing property no.150200203100600871 and industrially converted lands measuring an extent of 1 (One) Acre, comprised in Sy.No.159 (old No.13/p10 bearing khata no.814/159, bearing property no.150200203100600872 (converted vide official memorandum dated 11-02-2009 bearing No.ALN(NA)(JALA):SR 77/2008-09, issued by the Special Deputy Commissioner Bengaluru District, Bengaluru) both situated at Tarabanahalli Village, Jala Hobli, Bengaluru North Taluk, from 1) Mr.Sunil Teotia, 2) Amrita Narwani, 3) Suresh D.Narwani, 4) Priya Vashdev and 5) Vashdev T. Hirdaramani who are the schedule properties absolute owners. Any person/s having any claims, right, title or interest of any nature with regard to the said Schedule properties or to the aforesaid transaction in respect of the Schedule properties, should lodge such claim or objections in writing along with supporting documents, to the undersigned within 15 days from this date, failing which it will be presumed that no valid claims or objections subsist and my client shall proceed with the transaction to its logical conclusion.

SCHEDULE

All that part and parcel of the immovable property being undeveloped industrially converted land measuring 2 (Two) acres 30 (Thirty) guntas, comprised in Survey number No.158 (old No13/p10) bearing khata no. 814/158 bearing property no.150200203100600871 and industrially converted lands measuring an extent of 1 (One) Acre, comprised in Sy No.159 (old No.13/p10 bearing khata no.814/159, bearing property no.150200203100600872 (converted vide official memorandum dated 11-02-2009 bearing No.ALN(NA)(JALA):SR 77/2008-09, issued by the Special Deputy Commissioner Bengaluru District, Bengaluru) both situated at Tarabanahalli Village, Jala Hobli, Bengaluru North Taluk together forming one composite and compact block of lands and bounded on the

East by : Land comprised in Sy No.13 of Tharabanahalli and ITC factory
West by : 30 feet wide common road followed by property bearing Sy No. 156 and 157
North by : Tharabanahalli Main Road
South by : Land comprised in Sy No.13 of Tharabanahalli

ASHOK B. PATIL, ADVOCATE,
9, 1st Floor, 5th Main, 12th Block,
Kumarapark West, Bangalore-560 020
ashokpatil.law@gmail.com

JOB OPPORTUNITIES

Teachers/ Professors

WANTEDFOR IMMEDIATE Appointment:HINDI, SCIENCE TEACHERS (Primary) and Typist. Contact:St.YASH PUBLIC SCHOOL, Kempegowdanagar, from Magadi Main-road, Bangalore-91. Phone:7204347583/4, 9066242255

BUSINESS

Business to Business

Business

ANY CENTRAL Government/ New Delhi work done with high level contacts. Vamshadhara Project Services:- 9342247637. Bangalore.

PERSONAL

Change of Name

CHANGE OF NAME
I, **MALLESHA,** Residing at Goravanahalli Village, Bannur Hobli, T Narasipura Taluk, Mysore District, Karnataka- 571101, have changed my name to **MALLESHA. G.C,** vide affidavit dated 25.10.2023 before Notary H.R. Karunakara, Bangalore. Henceforth I shall be known as **MALLESHA. G.C,** only

I, CELESTINE FERNANDES NICHOLAS FERNANDES, Residing at Bangalore-90 have changed my name as CELESTIN FERNANDES, vide affidavit dated 25/10/2023 before Notary P.C.Ramaiah, Bangalore

I, RAJESH KUMAR UTTAMCHAND, residing at Bengaluru-3 have changed my name as RAJESH KUMAR, vide affidavit dated 25/10/2023 before Notary P.C.Ramaiah, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಕೋಲಾರ

ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್ 75, ಹುತ್ತೂರು ಅಂಚೆ, ಕೋಲಾರ 563102
[Ph.No 08152-282310,7760964517, E-mail: komulpurchase@yahoo.com]
ಕ್ರಸಂ: ಕೋಚಿಹಾಒ: ಖರೀದಿ: ಇ-ಟೆಂಡರ್: 7489: 2023-24 ದಿನಾಂಕ: 20.10.2023

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಖರೀದಿಗೆ ಟೆಂಡರ್ ಪ್ರಕಟಣೆ

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು https://Kppp.karnataka.gov.in/.ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ	ಸಾಮಗ್ರಿಗಳ ವರ	ಪರಿಮಾಣ
1	ಕೋಲಾರ ಡೇರಿ/ಯು.ಎಚ್.ಟಿ ವಿಭಾಗಗಳಿಗೆ ಅವಶ್ಯವಿರುವ 200-800 ಪಿಪಿಎಂ ಗುಣಮಟ್ಟವುಳ್ಳ ನೀರನ್ನು ಪೈಪ್‌ಲೈನ್ ಮುಖಾಂತರ ದೈವಾರ್ಷಿಕ ಗುತ್ತಿಗೆ ದರಗಳಲ್ಲಿ ಪೂರೈಕೆ	01 LOT [25,55,00,000 Litres] Approx.3,50,000 LPD
2	ಕೋಲಾರ ಹಾಗೂ ಮೆಗಾ ಡೇರಿ ಚಿಕ್ಕಬಳ್ಳಾಪುರದಲ್ಲಿ ವಿವಿಧ ನಮೂನೆಯ ತುಪ್ಪದ ಪ್ಯಾಕ್‌ಗಳನ್ನು ಪ್ಯಾಕ್ ಮಾಡಲು 5 Ply ಕಾರೋಗೇಟೆಡ್ ಬಾಕ್ಸ್‌ಗಳನ್ನು ವಾರ್ಷಿಕ ಗುತ್ತಿಗೆ ದರಗಳಂತೆ ಪೂರೈಕೆ a) 200 ml, b) 500 ml, c) 1000 ml	12,000 No's 95,000 No's 1,75,000 No's
3	ಕೋಮುಲ್‌ನ ಯು.ಎಚ್.ಟಿ ವಿಭಾಗದಲ್ಲಿ ಯು.ಎಚ್.ಟಿ ಹಾಲಿನ ಪೊಟ್ಟಣಗಳ ಮೇಲೆ ಕೋಡಿಂಗ್ ಕೆಲಸ ಕಾರ್ಯದ ದ್ವೈವಾರ್ಷಿಕ ಅವಧಿಯ ನಿರ್ವಹಣೆಗೆ	01 LOT [Approx. 60 Crore Packs]
4	ಕೋಲಾರ ಹಾಗೂ ಮೆಗಾ ಡೇರಿ ಚಿಕ್ಕಬಳ್ಳಾಪುರದಲ್ಲಿ ತುಪ್ಪವನ್ನು ಪ್ಯಾಕ್ ಮಾಡಲು ವಿವಿಧ ನಮೂನೆಯ ಪೆಟ್‌ಜಾರ್‌ಗಳನ್ನು ವಾರ್ಷಿಕ ಗುತ್ತಿಗೆ ದರಗಳಂತೆ ಸರಬರಾಜು ಮಾಡಲು(ಎ)200 ಮಿ.ಲಿ,(ಬಿ)500 ಮಿ.ಲಿ,(ಸಿ)1000 ಮಿ.ಲಿ,(ಡಿ)5000 ಮಿ.ಲಿ	1,00,000 ಸಂಖ್ಯೆ 1,50,000 ಸಂಖ್ಯೆ 65,000 ಸಂಖ್ಯೆ 50,000 ಸಂಖ್ಯೆ
5	ಕೋಲಾರ ಡೇರಿಯಲ್ಲಿ ಸಿಹಿ ಉತ್ಪನ್ನಗಳ ಉತ್ಪಾದನೆಗೆ ಅವಶ್ಯವಿರುವ ಸಕ್ಕರೆಯನ್ನು ದ್ವೈವಾರ್ಷಿಕ ಗುತ್ತಿಗೆ ಗುತ್ತಿಗೆ ದರಗಳಲ್ಲಿ ಪೂರೈಕೆ	1,20,000 ಕೆ.ಜಿ
6	ಒಕ್ಕೂಟದ ಖಾಯಂ ಪುರುಷ/ಮಹಿಳಾ ಅಧಿಕಾರಿ:ನೌಕರರಿಗೆ ಒಂದು ಜೊತೆ ಶೂ/ಪಾದರಕ್ಷೆ ಮತ್ತು ಕಾಲು ಚೀಲಗಳನ್ನು ವಿತರಿಸಲು ಪೂರೈಕೆ	323 ಜೊತೆ

ಟೆಂಡರ್ ಶುರುವಾಗುವ ದಿನಾಂಕ: 25.10.2023 ರಿಂದ 24.11.2023 5.30 ಗಂಟೆಯವರಿಗೆ
ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 24.11.2023 ರ ಸಂಜೆ 5.30 ಗಂಟೆಯವರೆಗೆ
ಟೆಂಡರ್ ತಾಂತ್ರಿಕ ಭಾಗ-1ನ್ನು ತೆರೆಯುವ ದಿನಾಂಕ: 27.11.2023 ರಂದು ಬೆಳಗ್ಗೆ 11.00 ಗಂಟೆ ನಂತರ
ಸಹಿ/- ವ್ಯ.ನಿ.,ಕೋಮುಲ್

ಅಭಿವೃದ್ಧಿ ಹಂತದ ಕೆರೆಗೂ ಹಣ ವೆಚ್ಚ ಮಾಡಲು ಬಿಬಿಎಂಪಿ ಅಧಿಕಾರಿಗಳು ಸಜ್ಜು

174 ಕೆರೆ ನಿರ್ವಹಣೆಗೆ ₹35 ಕೋಟಿ

● ಆರ್. ಮಂಜುನಾಥ್

ಬೆಂಗಳೂರು: ಅಭಿವೃದ್ಧಿಯಾಗುತ್ತಿರುವ ಮತ್ತು ಇನ್ನೂ ಅಭಿವೃದ್ಧಿಯಾಗಬೇಕಿರುವ ಕೆರೆಗಳ ವಾರ್ಷಿಕ ನಿರ್ವಹಣೆಗೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಲು ಬಿಬಿಎಂಪಿ ಮುಂದಾಗಿದೆ.

ಕೆರೆಗಳು ಅಭಿವೃದ್ಧಿಯಾದ ಮೇಲೆ ಅವುಗಳ ಒಂದು ಅಥವಾ ಮೂರು ವರ್ಷದ ನಿರ್ವಹಣೆ ಗುತ್ತಿಗೆದಾರರದ್ದೇ ಆಗಿರುತ್ತದೆ. ಆದರೆ, ಅಂತಹ ಕೆರೆಗಳಿಗೂ ವಾರ್ಷಿಕ ನಿರ್ವಹಣೆಗೆ ಹಣ ವೆಚ್ಚ ಮಾಡಲಾಗುತ್ತಿದೆ.

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ಮೈಲಸಂದ್ರ (ಸುಣ್ಣಕಲ್ಲು ಪಾಳ್ಯ), ದಾಸರಹಳ್ಳಿ ವಲಯದ ನೆಲಗದರನಹಳ್ಳಿ ಕೆರೆಗಳ ಅಭಿವೃದ್ಧಿ ಕಾಮಗಾರಿ ನಡೆಯುತ್ತಿವೆ. ಈ ಕೆರೆಗಳಿಗೆ ವಾರ್ಷಿಕ ನಿರ್ವಹಣೆಗೆ ಕ್ರಮವಾಗಿ ₹22.58 ಲಕ್ಷ ಹಾಗೂ ₹21 ಲಕ್ಷ ವೆಚ್ಚ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ.

ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿರುವ ರಾಜರಾಜೇಶ್ವರಿನಗರ ವಲಯದ ಲಿಂಗಧೀರನಹಳ್ಳಿ (₹31.97 ಲಕ್ಷ), ಪೂರ್ವ ವಲಯದ ಕಾಚರಕನಹಳ್ಳಿ (₹46 ಲಕ್ಷ), ದಾಸರಹಳ್ಳಿ ವಲಯದ ದೊಡ್ಡಬಿದರ ಕಲ್ಲು (₹21 ಲಕ್ಷ), ಯಲಹಂಕ ವಲಯದ ಅಮೃತಹಳ್ಳಿ ಕೆರೆಗಳ (₹13 ಲಕ್ಷ) ನಿರ್ವಹಣೆಗೂ ವೆಚ್ಚ ಮಾಡಲು ಸಿದ್ಧತೆ ನಡೆಸಲಾಗಿದೆ. ಈ ವೆಚ್ಚಕ್ಕೆಲ್ಲ ಬಜೆಟ್ ಅನುಮೋದನೆಯ ಕೋಡ್ (3028) ಕೂಡ ಲಭ್ಯವಾಗಿದೆ.

ಅಭಿವೃದ್ಧಿಯಾಗಿರುವ, ಅಭಿವೃದ್ಧಿ-ಟೆಂಡರ್ ಹಂತದಲ್ಲಿರುವ, ಅಭಿವೃದ್ಧಿ ಕೈಗೊಳ್ಳಬೇಕಿರುವ 174 ಕೆರೆಗಳ ವಾರ್ಷಿಕ ನಿರ್ವಹಣೆ ಹಾಗೂ ಕೆರೆಗಳ ನಿರ್ವಹಣೆಯನ್ನು ನಿಗಾವಹಿಸುವ ಆ್ಯಪ್ ಅಭಿವೃದ್ಧಿಗೆ ಬಿಬಿಎಂಪಿ ₹35 ಕೋಟಿಯನ್ನು 2023–24ನೇ ಸಾಲಿನಲ್ಲಿ ವೆಚ್ಚ ಮಾಡಲಿದೆ.

‘ಕೆರೆಗಳ ಅಭಿವೃದ್ಧಿಗೆ ಹಣ ಇಲ್ಲ ಎಂದು ಬಿಬಿಎಂಪಿ ಹೇಳುತ್ತದೆ. ಆದರೆ, ಅಭಿವೃದ್ಧಿಯಾಗಿರುವ ಕೆರೆಗಳಿಗೇ ವಾರ್ಷಿಕ ನಿರ್ವಹಣೆ ಹೆಸರಿನಲ್ಲಿ ಹಣವನ್ನು ವೃಥಾ ವೆಚ್ಚ ಮಾಡಲಾಗುತ್ತಿದೆ. ಅವರಿಗೆ ಬೇಕಾದ ಕೆರೆಗಳನ್ನು ಮಾತ್ರ ಇದಕ್ಕೆ ಹೆಸರಿಸಿಕೊಳ್ಳಲಾಗಿದೆ. ಪಟ್ಟಣಗೆರೆ– ಕೆಂಚೇನಹಳ್ಳಿ ಕೆರೆ, ಕರಿಹೋಬನಹಳ್ಳಿ ಕೆರೆ ಸೇರಿದಂತೆ ಹಲವು ಕೆರೆಗಳು ಗಬ್ಬೆದ್ದು ನಾರುತ್ತಿವೆ. ಅವುಗಳ ಸ್ವಚ್ಛತೆಗೆ ಮುಂದಾಗಿಲ್ಲ. ಆದರೆ ವೆಚ್ಚ ಮಾಡಿರುವ ಕೆರೆಗಳಿಗೆ ಮತ್ತೆ ವೆಚ್ಚ ಮಾಡಲಾಗುತ್ತಿದೆ’ ಎಂದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಎಸ್. ಅಮರೇಶ್ ದೂರಿದರು.

‘ಮಾಹಿತಿ ಹಕ್ಕು ಕಾಯ್ದೆಯಡಿ ಬಿಬಿಎಂಪಿ ನೀಡಿರುವ ಮಾಹಿತಿ ಪ್ರಕಾರ, 31 ಕೆರೆಗಳ ಅಭಿವೃದ್ಧಿಯಾಗಬೇಕಿದೆ. ಹಣ ಇಲ್ಲ ಎಂದು ಇವುಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಎಲ್ಲ ಕೆರೆಗಳಿಗೆ ಕನಿಷ್ಠ ಬೇಲಿ ಹಾಕುವುದು, ಕೊಳಚೆ ನೀರು ಹೋಗದಂತೆ ತಡೆಯುವ ಕೆಲಸ ಮೊದಲಾಗಬೇಕು’ ಎಂದು ಆಗ್ರಹಿಸಿದರು.

ಅಂಕಿ-ಅಂಶಗಳು

- **202** ಒಟ್ಟು ಕೆರೆಗಳು
- **114** ಅಭಿವೃದ್ಧಿಯಾಗಿರುವ ಕೆರೆಗಳು
- **25** ಅಭಿವೃದ್ಧಿಯಾಗುತ್ತಿರುವ ಕೆರೆಗಳು
- **13** ಟೆಂಡರ್ ಪ್ರಕ್ರಿಯೆಯಲ್ಲಿರುವ ಕೆರೆಗಳು
- **31** ಅಭಿವೃದ್ಧಿ ಕೈಗೊಳ್ಳಬೇಕಿರುವ ಕೆರೆಗಳು
- **19** ಇತರೆ ಉಪಯೋಗಕ್ಕೆ ಬಳಕೆಯಾಗಿರುವ ಕೆರೆಗಳು

ನಿರ್ವಹಣೆ ಅಗತ್ಯ: ಹರಿದಾಸ್

‘ಕೆರೆಗಳು ಅಭಿವೃದ್ಧಿಯಾದ ಮೇಲೆಯೇ ನಿರ್ವಹಣೆ ವೆಚ್ಚ ಹೆಚ್ಚಾಗುತ್ತದೆ. ಪಾದಚಾರಿ ಮಾರ್ಗ ನಿರ್ವಹಿಸಬೇಕು, ಹುಲ್ಲು ಬೆಳೆದರೆ ಕೀಳಬೇಕು... ಹೀಗೆಲ್ಲ ಕೆಲಸಗಳಿರುತ್ತವೆ. ಕೆಲವು ಕಾಮಗಾರಿಗಳು ಕೆರೆ ಅಭಿವೃದ್ಧಿ ಮಾಡಿದ ಗುತ್ತಿಗೆದಾರ ವ್ಯಾಪ್ತಿಗೆ ಬರುವುದಿಲ್ಲ. ಅದೆಲ್ಲ ಟೆಂಡರ್ ನಿಯಮದಲ್ಲೇ ಇರುತ್ತದೆ. ಹೀಗಾಗಿ ವಾರ್ಷಿಕ ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದೆ. ಅಭಿವೃದ್ಧಿಯಾಗುತ್ತಿರುವ ಕೆರೆಗಳ ಕಾಮಗಾರಿ ಮುಗಿದ ಕೂಡಲೇ ನಿರ್ವಹಣೆ ಬೇಕಾಗುತ್ತದೆ. ಹೀಗಾಗಿ ಮೊದಲೇ ಟೆಂಡರ್ ಕರೆದು ಸಜ್ಜಾಗಲಾಗುತ್ತಿದೆ. ಅಭಿವೃದ್ಧಿ ಮಾಡಬೇಕಾದ ಕೆರೆಗಳ ಸಮೀಪದ ಸ್ವಚ್ಛತೆಗೂ ವಾರ್ಷಿಕ ಟೆಂಡರ್ ಕರೆಯಲಾಗಿದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಕೆರೆ ನಿರ್ವಹಣೆಗೆ ಎಲ್ಲಿ, ಎಷ್ಟು ವೆಚ್ಚ?

ವಲಯ	ಒಟ್ಟು ವೆಚ್ಚ (₹ ಕೋಟಿಗಳಲ್ಲಿ)	ಕೆರೆಗಳು
ಮಹದೇವಪುರ	9.0	53
ಬೊಮ್ಮನಹಳ್ಳಿ	7.68	42
ಆರ್.ಆರ್. ನಗರ	7.07	33
ಯಲಹಂಕ	5.22	24
ದಾಸರಹಳ್ಳಿ	2.07	11
ಪೂರ್ವ	2.10	4
ಪಶ್ಚಿಮ	0.30	2
ದಕ್ಷಿಣ	1.38	5

ಒಳಚರಂಡಿ ನೀರು, ತ್ಯಾಜ್ಯ, ಗಿಡ–ಗಂಟಿಗಳಿಂದ ಕೂಡಿರುವ ರಾಜರಾಜೇಶ್ವರಿನಗರದ ಪಟ್ಟಣಗೆರೆ– ಕೆಂಚೇನಹಳ್ಳಿ ಕೆರೆಯ ದುಃಸ್ಥಿತಿ

ಅಭಿವೃದ್ಧಿ ಹಂತದಲ್ಲಿರುವ ಕೆರೆಗಳು

ಸಿಂಗಾಪುರ, ಕೊತ್ತನೂರು, ಹೂಡಿ ಗಿಡ್ಡನಕೆರೆ, ಕಗ್ಗದಾಸಪುರ, ಗೌಡನಪಾಳ್ಯ, ಹುಳಿಮಾವು, ವಸಂತಪುರ, ಮೇಸ್ತ್ರಿಪಾಳ್ಯ, ರಾಂಪುರ, ಗಂಗಶೆಟ್ಟಿ, ವೆಂಗಯ್ಯನಕೆರೆ, ನಾಗರಭಾವಿ, ವಡೇರಹಳ್ಳಿ, ಅಬ್ಬಿಗೆರೆ, ಚೌಡೇಶ್ವರಿ ಬಡಾವಣೆ, ಕೋಣನಕುಂಟೆ, ಅರೆಕೆರೆ, ಬೆಟ್ಟಹಳ್ಳಿ, ಹೊರಮಾವು, ಶ್ರೀಗಂಧದಕಾವಲ್, ಕೆಂಗೇರಿ, ಮೈಲಸಂದ್ರ (ಸುಣ್ಣಕಲ್ಲುಪಾಳ್ಯ), ನೆಲಗೆದರನಹಳ್ಳಿ, ಶಿವನಹಳ್ಳಿ ಕೆರೆ.

ಟೆಂಡರ್ ಹಂತದಲ್ಲಿರುವ ಕೆರೆಗಳು

ದೊಡ್ಡಬಿದರಕಲ್ಲು (ನಾಗಸಂದ್ರ), ಗುಂಜೂರು ಮೌಜಿ, ಲಿಂಗಧೀರನಹಳ್ಳಿ, ಲಕ್ಷ್ಮಿಪುರ, ಜುನ್ನಸಂದ್ರ, ಸ್ವರ್ಣಕುಂಟೆ ಗುಡ್ಡ, ಗಾಂಧಿನಗರ ಹೊಸಕೆರೆಹಳ್ಳಿ, ಗುಂಜೂರು ಕರ್ಮೆಲರಾಂ, ಪಟ್ಟಂದೂರು ಅಗ್ರಹಾರ, ಗಾರ್ವೆಭಾವಿಪಾಳ್ಯ, ವೆಂಕಟೇಶಪುರ, ಕಾಚರಕನಹಳ್ಳಿ ಕೆರೆ.

ಅಭಿವೃದ್ಧಿಯಾಗಬೇಕಿರುವ ಕೆರೆಗಳು

ಚಿಕ್ಕಬೇಗೂರು, ಬೆಲ್ಲಹಳ್ಳಿ, ಶ್ರೀನಿವಾಸಪುರ, ಕೋನಸಂದ್ರ, ಸೋಂಪುರ, ಸೀತಾರಾಮಪಾಳ್ಯ, ನ್ಯಾನಪ್ಪನಹಳ್ಳಿ, ಪಟ್ಟಣಗೆರೆ– ಕೆಂಚೇನಹಳ್ಳಿ, ಸುಬೇದಾರನಕೆರೆ, ವರಾಹಸಂದ್ರ, ಚಿಕ್ಕಮ್ಮನಹಳ್ಳಿ, ಭೀಮನಕುಪ್ಪೆ, ಕನ್ನಲ್ಲಿ, ಕೆಂಚನಪುರ, ನರಸಪ್ಪನಹಳ್ಳಿ, ಸೂಲಿಕೆರೆ, ಬೈರಸಂದ್ರ ಮೇಲಿನಕೆರೆ, ಬಿ. ಚಂದ್ರಸಂದ್ರ, ಕಲ್ಯಾಣಿಕುಂಟೆ– ವಸಂತಪುರ, ಬಿ. ನಾರಾಯಣಪುರ, ಚನ್ನಸಂದ್ರ, ಚಿಕ್ಕಬೆಳ್ಳಂದೂರು, ಪಣತ್ತೂರು, ಮಾದಾವರ, ಮಲ್ಲಸಂದ್ರ ಗುಡ್ಡೆ, ಮಂಗಮ್ಮನಹಳ್ಳಿ, ಚಿಕ್ಕಗೌಡನಪಾಳ್ಯ, ದುಬಾಸಿಪಾಳ್ಯ, ಹೊಸಕೆರೆಹಳ್ಳಿ, ಗೊಟ್ಟಿಗೆಪಾಳ್ಯ, ಬೂಸೆಗೌಡನಕೆರೆ.

28-29ಕ್ಕೆ ಆರ್ಕಿಡ್ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಆರ್ಕಿಡ್ ಹೂವು

ಬೆಂಗಳೂರು: ನಾಲ್ಕು ವರ್ಷಗಳ ನಂತರ ಉದ್ಯಾನ ನಗರಿಯಲ್ಲಿ ಮತ್ತೆ ‘ಆರ್ಕಿಡ್ ಪ್ರದರ್ಶನ’ ಶುರುವಾಗುತ್ತಿದೆ. ‘ಆರ್ಕಿಡ್ ಸೊಸೈಟಿ ಆಫ್ ಕರ್ನಾಟಕ’ ಸಂಸ್ಥೆಯು ಇದೇ 28 ಮತ್ತು 29ರಂದು ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಆರ್ಕಿಡ್ ಪ್ರದರ್ಶನವನ್ನು ಆಯೋಜಿಸಿದೆ.

ಎರಡು ದಿನಗಳ ಪ್ರದರ್ಶನವನ್ನು ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ ಉದ್ಘಾಟಿಸಲಿದ್ದಾರೆ. ಪ್ರದರ್ಶನವು ಆರ್ಕಿಡ್‌ಗಳ ವೈವಿಧ್ಯ ಹಾಗೂ ವಿಶಿಷ್ಟತೆಯನ್ನು ಅನಾವರಣ ಮಾಡಲಿದೆ.

‘ಭಾರತೀಯ ಮತ್ತು ವಿದೇಶಿ ಆರ್ಕಿಡ್ ತಳಿಗಳು ಪ್ರದರ್ಶನದಲ್ಲಿ ಇರಲಿವೆ. ಆರ್ಕಿಡ್ ಬೆಳೆಸುವ ಬಗ್ಗೆ ತರಬೇತಿ ಹಾಗೂ ಮಾರ್ಗದರ್ಶನವನ್ನು ನೀಡಲಾಗುತ್ತದೆ. ಆರ್ಕಿಡ್ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದಕ್ಕಾಗಿ ಭಿತ್ತಿಪತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಆರ್ಕಿಡ್ ಕುರಿತ ಪುಸ್ತಕಗಳು ಪ್ರದರ್ಶನದಲ್ಲಿ ಇರುತ್ತವೆ. ಒಂದೇ ಸೂರಿನಡಿ ಆರ್ಕಿಡ್‌ಗೆ ಸಂಬಂಧಿಸಿದ ಸಮಗ್ರ ಮಾಹಿತಿ ದೊರೆಯುತ್ತದೆ’ ಎಂದು ಆಯೋಜಕರು ತಿಳಿಸಿದ್ದಾರೆ.

‘ಆರ್ಕಿಡ್ ಹೂವು ಬಣ್ಣ, ಆಕಾರ ಮತ್ತು ಗಾತ್ರಗಳಲ್ಲಿ ವೈವಿಧ್ಯ ಹೊಂದಿರುತ್ತದೆ. ಬೇರೆ ಯಾವ ಹೂಗಳು ಇದಕ್ಕೆ ಸರಿಸಾಟಿಯಾಗಲಾರವು. ಆರ್ಕಿಡ್ ಗಿಡ ಹಾಗೂ ಹೂವುಗಳಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆಯಿದ್ದು, ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ವ್ಯಾಪಾರದ ದೃಷ್ಟಿಯಿಂದಲೂ ಲಾಭದಾಯಕವಾಗಿದೆ’ ಎಂದು ಹೇಳಿದ್ದಾರೆ.

ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಪ್ರದರ್ಶನ ನಡೆಯಲಿದ್ದು, ಪ್ರವೇಶ ಶುಲ್ಕ ₹ 100 ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ: www.toskar.org ಜಾಲತಾಣಕ್ಕೆ ಭೇಟಿ ನೀಡಬಹುದು.

ಬಿಬಿಎಂಪಿ: 6,414 ಹುದ್ದೆಗಳು ಖಾಲಿ

ತ್ವರಿತ ಭರ್ತಿಗೆ ಅಧಿಕಾರಿ– ನೌಕರರ ಕ್ಷೇಮಾಭಿವೃದ್ಧಿ ಸಂಘದ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಖಾಲಿ ಇರುವ 6,414 ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಎಚ್ಚರಿಸಿದೆ.

‘ಬಿಬಿಎಂಪಿಯಲ್ಲಿ 12,945 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 6,414 ಹುದ್ದೆಗಳು ಖಾಲಿ ಉಳಿದಿವೆ. ಇದರಿಂದ ಈಗಿರುವ ಸಿಬ್ಬಂದಿ ಒತ್ತಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಹಾಯಕ ಆಯುಕ್ತರು ಹಾಗೂ ಕಂದಾಯ ಅಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡಲಾಗಿದ್ದರೂ, ಸ್ಥಳ ನಿಯುಕ್ತಿಗೊಳಿಸಿಲ್ಲ. ಹೀಗಾಗಿ ಕೆಳ ಹಂತದ ನೌಕರರು ಮುಂಬಡ್ತಿಯಿಂದ ವಂಚಿತರಾಗಿದ್ದಾರೆ’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ದೂರಿದರು.

‘ವೃಂದ ಮತ್ತು ನೇಮಕಾತಿಗಾಗಿ ನಿಯಮಾವಳಿಗೆ ವಿರುದ್ಧವಾಗಿ ಎರವಲು ಸೇವೆ ಮೇಲೆ ನಿಯೋಜಿಸಲಾಗಿರುವ ಅಧಿಕಾರಿ, ನೌಕರರನ್ನು ಕೂಡಲೇ ಮಾತೃ ಇಲಾಖೆಗೆ ಹಿಂದಿರುಗಿಸಬೇಕು. 1976ರ ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ ‘ಎ’ ಶ್ರೇಣಿ ಅಧಿಕಾರಿಗಳ ಆಡಳಿತ ಸೌಲಭ್ಯ ಒದಗಿಸುವ ಅಧಿಕಾರವನ್ನು ಮುಖ್ಯ ಆಯುಕ್ತರಿಗೆ ನೀಡಬೇಕು’ ಎಂದು ಆಗ್ರಹಿಸಿದರು.

‘ಈ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಸರ್ಕಾರಕ್ಕೆ ಒತ್ತಾಯಿಸಲಾಗಿದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಎಲ್ಲ ರೀತಿಯ ಕೆಲಸಗಳನ್ನು ಸ್ಥಗಿತಗೊಳಿಸಿ ಹೋರಾಟ ಮಾಡಲಾಗುತ್ತದೆ. ಈ ಬಗ್ಗೆ ಅ.26ರಂದು ಅಧಿಕಾರಿ, ನೌಕರರ ಸಭೆಯನ್ನು ನಡೆಸಲಾಗುತ್ತದೆ. ಅಲ್ಲಿ ಹೋರಾಟದ ಸ್ಥಳ ಹಾಗೂ ದಿನವನ್ನು ನಿರ್ಧರಿಸಲಾಗುತ್ತದೆ’ ಎಂದು ಅಮೃತರಾಜ್ ತಿಳಿಸಿದರು.

ಮುಖ್ಯಾಂಶಗಳು

- ಹಾಲಿ ಸಿಬ್ಬಂದಿ ಮೇಲೆ ಹೆಚ್ಚಿದ ಕೆಲಸದ ಒತ್ತಡ
- ಮುಂಬಡ್ತಿಯಿಂದ ವಂಚಿತರಾದ ಕೆಳ ಹಂತದ ನೌಕರರು
- ಇಂದು ಅಧಿಕಾರಿಗಳು, ನೌಕರರ ಸಭೆ ಆಯೋಜನೆ

ನ್ಯಾಯಮೂರ್ತಿಯಾಗಿ ಅರವಿಂದ ಪ್ರಮಾಣ ವಚನ ಸ್ವೀಕಾರ

ಕೆ.ವಿ.ಅರವಿಂದ

ಬೆಂಗಳೂರು: ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ವಕೀಲ ಕೆ.ವಿ.ಅರವಿಂದ ಬುಧವಾರ ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕರಿಸಿದ್ದು, ಇದರಿಂದ ಹೈಕೋರ್ಟ್‌ನ ಒಟ್ಟು ನ್ಯಾಯಮೂರ್ತಿಗಳ ಸಂಖ್ಯೆ 52ಕ್ಕೆ ಏರಿದಂತಾಗಿದೆ.

ಕೋಲಾರ ತಾಲ್ಲೂಕಿನ ದೊಡ್ಡಕುರುಬರ ಹಳ್ಳಿಯ ಅವರು ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜಿನಿಂದ ಪದವಿ ಪಡೆದಿದ್ದಾರೆ.

ಮೂಲನಿಧಿ: ನಿವಾಸಿಗಳ ಸಂಘಕ್ಕೆ ವರ್ಗಾಯಿಸಲು ಕೆ–ರೇರಾ ಆದೇಶ

ಒಂದನೇ ಪುಟದಿಂದ...

‘ವಿಭಾಗವಾಗದ ಭೂಮಿಯ ಷೇರುಗಳನ್ನು ವರ್ಗಾವಣೆ ಮಾಡದಿರುವುದನ್ನು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಮನೆ ಖರೀದಿಸುವವರಿಗೆ ಮತ್ತು ಸಂಘಗಳಿಗೆ ಕ್ರಯಪತ್ರ ವರ್ಗಾಯಿಸುವ ಸಂದರ್ಭದಲ್ಲಿ ಭೂಮಿ ಮೌಲ್ಯ ಅತ್ಯಂತ ಪ್ರಮುಖವಾದದ್ದು. ಈ ವಿಷಯದ ಬಗ್ಗೆ ಕೆ–ರೇರಾ ಪರಾಮರ್ಶಿಸಿರುವುದು ಸಂತಸಕರ’ ಎಂದು ಹೇಳಿದರು.

‘ಕರ್ನಾಟಕ ಸೊಸೈಟೀಸ್ ನೋಂದಣಿ ಕಾಯ್ದೆ ಅಥವಾ ಕರ್ನಾಟಕ ಅಪಾರ್ಟ್‌ಮೆಂಟ್ ಓನರ್‌ಶಿಪ್ ಕಾಯ್ದೆ ಎರಡೂ ಇದ್ದು, ಇದರಲ್ಲಿ ಯಾವ ಕಾಯ್ದೆಯಡಿ ಸಂಘಗಳನ್ನು ನೋಂದಣಿ ಮಾಡಿಸಬೇಕು ಎಂಬ ಗೊಂದಲದಲ್ಲಿ ಹಲವರು ಇದ್ದಾರೆ. ಪ್ರಕ್ರಿಯೆಯನ್ನು ವಿಳಂಬಗೊಳಿಸಲು ಈ ಗೊಂದಲವನ್ನು ಬಿಲ್ಡರ್‌ಗಳು ಅವಕಾಶವಾಗಿ ಬಳಸಿಕೊಂಡಿದ್ದಾರೆ. ಕರ್ನಾಟಕ ಅಪಾರ್ಟ್‌ಮೆಂಟ್ ಓನರ್‌ಶಿಪ್ ಕಾಯ್ದೆಯಡಿ ರಚನೆಯಾದ ಸಂಘಗಳಿಗೆ ಕಾನೂನಾತ್ಮಕ ಬಲ ನೀಡಲು ಈ ಆದೇಶ ನೆರವಾಗಲಿದೆ’ ಎಂದು ಶಂಕರ್ ಹೇಳಿದರು.

‘ಗುಜರಾತ್, ಒಡಿಶಾ ಸೇರಿದಂತೆ ಹಲವು ರಾಜ್ಯಗಳು ಸಂಘಗಳ ನೋಂದಣಿಗೆ ಮಾರ್ಗಸೂಚಿ ಹೊಂದಿವೆ. ಹಲವು ಬಾರಿ ಈ ವಿಚಾರ ವನ್ನು ಚರ್ಚೆ ಮಾಡಿದ್ದರೂ, ಈ ಬಗ್ಗೆ ಯಾವುದೇ ಸರ್ಕಾರಿ ಆದೇಶವಾಗಿಲ್ಲ’ ಎಂದು ಪದ್ಮನಾಭಾಚಾರ್ ಒತ್ತಾಯಿಸಿದರು.

ಕ್ರೀಡಾಂಗಣ ಸುತ್ತಮುತ್ತ ನಿಲುಗಡೆ ನಿರ್ಬಂಧ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅ. 26ರಂದು ಐಸಿಸಿ ಕ್ರಿಕೆಟ್ ವಿಶ್ವಕಪ್ ಪಂದ್ಯ ನಡೆಯಲಿದ್ದು, ಸುಗಮ ಸಂಚಾರದ ದೃಷ್ಟಿಯಿಂದ ಕ್ರೀಡಾಂಗಣ ಸುತ್ತಮುತ್ತ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ.

‘ಇಂಗ್ಲೆಂಡ್ ಹಾಗೂ ಶ್ರೀಲಂಕಾ ತಂಡಗಳ ನಡುವೆ ಪಂದ್ಯ ನಡೆಯಲಿದೆ. ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ವಿಠ್ಠಲ್ ಮಲ್ಯ ರಸ್ತೆ ಹಾಗೂ ನೃಪತುಂಗ ರಸ್ತೆಯಲ್ಲಿ ವಾಹನಗಳ ನಿಲುಗಡೆಗೆ ಅವಕಾಶವಿಲ್ಲ’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ಕಿಂಗ್ಸ್ ರಸ್ತೆ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ, ಶಿವಾಜಿನಗರ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ಸಾರ್ವಜನಿಕರು ವಾಹನ ನಿಲ್ಲಿಸಲು ವ್ಯವಸ್ಥೆ ಮಾಡಲಾಗಿದೆ’ ಎಂದು ಹೇಳಿದ್ದಾರೆ.

ಧರ್ಮಸ್ಥಳಕ್ಕೆ ಬಂದು ಎಚ್‌ಡಿಕೆ ಪ್ರಮಾಣ ಮಾಡಲಿ: ಶಾಸಕ ಬಾಲಕೃಷ್ಣ ಸವಾಲು

ಪ್ರಜಾವಾಣಿ ವಾರ್ತೆ

ಬಾಲಕೃಷ್ಣ

ಬೆಂಗಳೂರು: ‘ಯಾರಿಂದಲೂ ಒಂದು ರೂಪಾಯಿ ಪಡೆದುಕೊಂಡಿಲ್ಲವೆಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಲಿ’ ಎಂದು ಮಾಗಡಿ ಕಾಂಗ್ರೆಸ್ ಶಾಸಕ ಎಚ್‌.ಸಿ. ಬಾಲಕೃಷ್ಣ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ವರ್ಗಾವಣೆಗೆ ದುಡ್ಡು ಹೊಡೆದಿಲ್ಲ, ಹುದ್ದೆ ನೀಡಲು ದುಡ್ಡು ತೆಗೆದುಕೊಂಡಿಲ್ಲವೆಂದು ಪ್ರಮಾಣ ಮಾಡಲಿ ನೋಡೋಣ’ ಎಂದರು. ‘ರಾಮನಗರ ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ನಾವು ನಮ್ಮ ಸಂಸದರ ಜೊತೆ ಚರ್ಚೆಗೆ ಬರಲು ಸಿದ್ಧ. ಕುಮಾರಸ್ವಾಮಿ ಚರ್ಚೆಗೆ ಬರುತ್ತಾರಾ’ ಎಂದು ಕೇಳಿದರು.

‘ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ಆಡಳಿತದ ದೃಷ್ಟಿಯಿಂದ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಮಾಡಬೇಕು ಎನ್ನುವುದು ಅವರ ಉದ್ದೇಶ. ಕನಕಪುರವನ್ನು ಬೆಂಗಳೂರಿಗೆ ಸೇರಿಸಲು ಸಾಧ್ಯವೇ ಇಲ್ಲ’ ಎಂದರು.

ಯಡಿಯೂರಪ್ಪ ನನ್ನ ಪರವಾಗಿ ಲಾಬಿ ಮಾಡುತ್ತಿಲ್ಲ: ವಿಜಯೇಂದ್ರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ತಂದೆ ಬಿ.ಎಸ್. ಯಡಿಯೂರಪ್ಪ ಅವರು ನನ್ನನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಲು ಲಾಬಿ ನಡೆಸುತ್ತಿದ್ದಾರೆ ಎನ್ನುವುದೆಲ್ಲವೂ ಸುಳ್ಳು’ ಎಂದು ಆ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಇಲ್ಲಿನ ಸುತ್ತೂರು ಮಠಕ್ಕೆ ಬುಧವಾರ ಭೇಟಿ ನೀಡಿದ್ದ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಒಂದು ವೇಳೆ ನನ್ನನ್ನು ಅಧ್ಯಕ್ಷರನ್ನಾಗಿ ನೇಮಿಸಿದರೆ ಅದು ಯಡಿಯೂರಪ್ಪನವರ ಮಗ ಎಂಬ ಕಾರಣಕ್ಕಲ್ಲ. ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

‘ಶೋಭಾ ಕರಂದ್ಲಾಜೆ ಅವರನ್ನು ರಾಜ್ಯ ಘಟಕದ ಅಧ್ಯಕ್ಷೆಯನ್ನಾಗಿ ಮಾಡಿದರೆ, ಬಸನಗೌಡ ಪಾಟೀಲ ಯತ್ನಾಳ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸಿದರೆ ಅದಕ್ಕೆ ಯಡಿಯೂರಪ್ಪ ಅವರ ವಿರೋಧವಿದೆ ಎಂಬುದು ಊಹಾಪೋಹ. ಇಂತಹ ಯಾವ ಬೆಳವಣಿಗೆಯಲ್ಲೂ ಅವರು ಭಾಗವಹಿಸಿಲ್ಲ. ಯಾರನ್ನೇ ನೇಮಿಸಿದರೂ ಅದನ್ನು ಎಲ್ಲರೂ ಒಪ್ಪಿಕೊಂಡೇ ಕೆಲಸ ಮಾಡುತ್ತಾರೆ’ ಎಂದು ಹೇಳಿದರು.

‘ನಾನು ಸುತ್ತೂರು ಮಠಕ್ಕೆ ಭೇಟಿ ನೀಡಿರುವುದಕ್ಕೂ, ರಾಜ್ಯ ಘಟಕದ ಅಧ್ಯಕ್ಷರ ನೇಮಕದ ವಿಷಯಕ್ಕೂ ಸಂಬಂಧವಿಲ್ಲ’ ಎಂದರು.

‘ಡಿ.ಕೆ. ಶಿವಕುಮಾರ್ ಅವರ ರಿಯಲ್ ಎಸ್ಟೇಟ್ ಉದ್ಯಮ ವಿಸ್ತರಣೆಯಾಗಬೇಕು. ಅದಕ್ಕಾಗಿ ರಾಮನಗರವನ್ನು ಬದಲಾಯಿಸುತ್ತಿದ್ದಾರೆ. ಅದಕ್ಕೆ ಏಕೆ ವಿರೋಧ’ ಎಂದು ವ್ಯಂಗ್ಯವಾಡಿದರು.

ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಪ್ರತಿಪಾದನೆ

‘ಕಾಶ್ಮೀರಕ್ಕೆ ರಾಜ್ಯದ ಸ್ಥಾನ ಮರುಸ್ಥಾಪಿಸಿ’

ನವದೆಹಲಿ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದಲ್ಲಿ ಮತ್ತೆ ರಾಜ್ಯದ ಸ್ಥಾನ ಮರುಸ್ಥಾಪಿಸುವ ಜತೆಗೆ ವಿಧಾನಸಭೆಗೆ ಚುನಾವಣೆ ನಡೆಸಬೇಕಿದೆ’ ಎಂದು ಜಮ್ಮು-ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಪ್ರತಿಪಾದಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಡೆಸಿದ 28 ನಿಮಿಷಗಳ ಸಂದರ್ಶನದಲ್ಲಿ ಮಲಿಕ್ ಅವರು, ಕಾಶ್ಮೀರ ಕಣಿವೆಯ ಸ್ಥಿತಿಗತಿ ಬಗ್ಗೆ ಅಭಿಪ್ರಾಯ ಹಂಚಿಕೊಂಡರು.

‘ಕಾಶ್ಮೀರಿಗಳು ಸ್ನೇಹಪರ ಗುಣಕ್ಕೆ ಹೆಸರುವಾಸಿ. ಹಾಗಾಗಿ, ಅಲ್ಲಿನ ಜನರ ಹೃದಯ ಗೆಲ್ಲುವ ಕೆಲಸವಾಗಬೇಕಿದೆ. ಅದರ ಹೊರತಾಗಿ ಭದ್ರತಾ ಪಡೆಗಳನ್ನು ಬಳಸಿಕೊಂಡು ಕಣಿವೆಯಲ್ಲಿ ಶಾಂತಿ ಸ್ಥಾಪನೆಯು ಅಸಾಧ್ಯ’ ಎಂದು ಅಭಿಪ್ರಾಯಪಟ್ಟರು.

ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿಯು ಅಲ್ಲಿನ ಜನರಿಗೆ ಅಷ್ಟೊಂದು ನೋವು ನೀಡಿಲ್ಲ. ಆದರೆ, ರಾಜ್ಯದ ಸ್ಥಾನಮಾನ ರದ್ದುಪಡಿಸಿರುವುದು ಅವರಿಗೆ ಅಪಾರ ನೋವುಂಟು ಮಾಡಿದೆ ಎಂದು ಹೇಳಿದರು.

‘ಜಮ್ಮು ಮತ್ತು ಕಾಶ್ಮೀರದಲ್ಲಿ ಮತ್ತೆ ರಾಜ್ಯದ ಮರುಸ್ಥಾಪನೆ ಮತ್ತು ವಿಧಾನಸಭೆಗೆ ಚುನಾವಣೆ ನಡೆಸುವ ಬಗ್ಗೆ ಸಂಸತ್‌ನಲ್ಲಿ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿದ್ದಾರೆ. ಅವರು ಈ ಭರವಸೆಯ ಮಾತುಗಳು ಕಾರ್ಯರೂಪಕ್ಕೆ ಬರಬೇಕೆಂದು ನಾನು ಆಶಿಸುತ್ತೇನೆ’ ಎಂದರು.

‘ಪುಲ್ವಾಮಾ ದಾಳಿ: ರಾಜಕೀಯ ಲಾಭಕ್ಕೆ ಬಳಕೆ’: 2019ರ ಪುಲ್ವಾಮಾ ದಾಳಿ ಬಗ್ಗೆ ರಾಹುಲ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಲಿಕ್, ‘ಆಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಸರ್ಕಾರವೇ ಈ ದಾಳಿಯ ಹೊಣೆ ಹೊರಬೇಕಿದೆ ಎಂದು ನಾನು ಹೇಳುವುದಿಲ್ಲ. ಆದರೆ, ತಮ್ಮ ರಾಜಕೀಯ ಲಾಭಕ್ಕಾಗಿ ಈ ದಾಳಿಯನ್ನು ಅವರು ಬಳಸಿಕೊಂಡಿದ್ದು ಸತ್ಯ’ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ತಮ್ಮ ಯೂಟ್ಯೂಬ್ ಚಾನೆಲ್‌ಗೆ ಜಮ್ಮು–ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರನ್ನು ಸಂದರ್ಶಿಸಿದರು —ಪಿಟಿಐ ಚಿತ್ರ

ಜಮ್ಮುವಿನ ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಯೋಧರ ವಾಹನಗಳ ಮೇಲೆ ಉಗ್ರರು ದಾಳಿ ನಡೆಸಿದ್ದರು. ಈ ದಾಳಿಯಲ್ಲಿ 40 ಯೋಧರು ಮೃತಪಟ್ಟಿದ್ದರು. ‘ಕೇಂದ್ರ ಸರ್ಕಾರದ ಕಡೆಯಿಂದ ಲೋಪಗಳಾಗಿತ್ತು’ ಎಂದು ಮಲಿಕ್ ನೀಡಿದ್ದ ಹೇಳಿಕೆಯು ರಾಷ್ಟ್ರದಾದ್ಯಂತ ಚರ್ಚೆಗೆ ಗ್ರಾಸವಾಗಿತ್ತು.

‘ಈ ದಾಳಿ ಬಗ್ಗೆ ಏನನ್ನೂ ಮಾತನಾಡಬೇಡಿ ಎಂದು ಸರ್ಕಾರದ ಮುಖ್ಯಸ್ಥರು ನನಗೆ ತಾಕೀತು ಮಾಡಿದ್ದರು’ ಎಂದು ಮಲಿಕ್ ಪುನರುಚ್ಚರಿಸಿದರು.

‘ಎಷ್ಟು ಪ್ರಮಾಣದ ಸ್ಫೋಟಕ ಸಾಮಗ್ರಿಗಳನ್ನು ತರಲಾಗಿತ್ತು’ ಎಂಬ ರಾಹುಲ್ ಪ್ರಶ್ನೆಗೆ ಉತ್ತರಿಸಿದ ಮಲಿಕ್, ‘ಪಾಕಿಸ್ತಾನದಿಂದ ಸ್ಫೋಟಕ ಸಾಮಗ್ರಿಗಳನ್ನು ತಂದರೂ ಅದನ್ನು ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ’ ಎಂದು ಹೇಳಿದರು.



EXAM DH ಪ್ರಜಾವಾಣಿ MASTERMIND™

ಮತ್ತಷ್ಟು 'ಪ್ರಚಲಿತ'ಕ್ಕಾಗಿ..

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

'ಐಐಎಂಬಿ'ಗೆ ಸುವರ್ಣ ಸಂಭ್ರಮ

ಬಿಸಿನೆಸ್ ಮ್ಯಾನೇಜ್‌ಮೆಂಟ್ ಶಿಕ್ಷಣದಲ್ಲಿ ತನ್ನದೇ ಛಾಪು ಮೂಡಿಸಿರುವ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ 1973 ರ ಅಕ್ಟೋಬರ್ 28 ರಂದು ಆಗಿನ ಪ್ರಧಾನಿ ಇಂದಿರಾ ಗಾಂಧಿಯವರು ಚಾಲನೆ ನೀಡಿದ್ದರು. ಅಹಮದಾಬಾದ್ ಮತ್ತು ಕೊಲ್ಕತ್ತಾದ ನಂತರ ಪ್ರಾರಂಭಗೊಂಡ ಐಐಎಂ ಸಂಸ್ಥೆ ಇದಾಗಿತ್ತು. ಹಲವು ಮಾನ್ಯತೆಗಳೊಂದಿಗೆ ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಸಂಸ್ಥೆ ಮ್ಯಾನೇಜ್ ಮೆಂಟ್‌ನಲ್ಲಿ ಶಿಕ್ಷಣ ಬಯಸುವ ಅನೇಕರ ಕನಸಿನ ತಾಣವಾಗಿದೆ.

ಬೆಂಗಳೂರಿನ ಐಐಎಂ ಇತಿಹಾಸ ನೋಡಿದರೆ, ದೇಶದ ಆರ್ಥಿಕ ದೃಷ್ಟಿಕೋನ, ತಂತ್ರಜ್ಞಾನ, ಉದ್ಯಮದ ಅಗತ್ಯತೆಗೆ ತಕ್ಕಂತೆ ತನ್ನ ಕಲಿಕೆಯ ಸ್ವರೂಪ ಬದಲಿಸಿಕೊಂಡಿದೆ. ಕಲಿಕಾ ಸಾಮರ್ಥ್ಯಗ ಹೆಚ್ಚಿಸುವ, ಸಂಶೋಧನೆಯನ್ನು ಉತ್ತೇಜಿಸುವ, ಮೂಲಸೌಕರ್ಯ ಅಭಿವೃದ್ಧಿಪಡಿಸುವ ಕೆಲಸಗಳಲ್ಲಿ ಹಿಂದೆ ಬಿದ್ದಿಲ್ಲ. ತಂತ್ರಜ್ಞಾನದ ವಿಕಾಸ ದೊಂದಿಗೆ ಐಐಎಂಬಿಯ ಕಲಿಕೆ ಮಾರ್ಗ ಕೂಡ ಮಾರ್ಪಾಡಾಯಿತು. 90ರ ದಶಕದಲ್ಲಿ ಸಾಫ್ಟ್‌ವೇರ್ ಕ್ಷೇತ್ರ ಮೇಲ್ಪಂಕ್ತಿಗೆ ಬಂದಾಗ ಡೇಟಾ ಅನಾಲಿಟಿಕ್ಸ್ ತರಹದ ವಿಷಯಗಳನ್ನು ಪರಿಚಯಿಸಿತು. ಬೆಂಗಳೂರು ಐಟಿ ತವರಾಗುತ್ತಿದ್ದಂತೆ, 1998ರಲ್ಲಿ ವಾರಾಂತ್ಯದ ಎಂಬಿಎ ಕಾರ್ಯಕ್ರಮವಾಗಿ ಸಾಫ್ಟ್‌ವೇರ್ ಮತ್ತು ಐಟಿ ಉದ್ಯಮದ ಅಗತ್ಯಗಳನ್ನು ಕೇಂದ್ರೀಕರಿಸಿದ ವಿಶೇಷ ಕೋರ್ಸ್ ಪ್ರಾರಂಭಿಸಿತು.

ದೇಶದಲ್ಲಿ ಸ್ಟಾರ್ಟಪ್ ಕ್ರಾಂತಿ ಪ್ರಾರಂಭವಾಗುವ ಮೊದಲೇ ಐಐಎಂಬಿ ಆ ಕ್ಷೇತ್ರದತ್ತ ದೃಷ್ಟಿ ಹಾಯಿಸಿತ್ತು. ಗೋಲ್ಡ್‌ಮನ್ ಸ್ಯಾಚ್ಸ್ 10K ಮಹಿಳಾ ಕಾರ್ಯಕ್ರಮ, ಮಹಿಳಾ ಸ್ಟಾರ್ಟ್-ಅಪ್ ಪ್ರೋಗ್ರಾಂ ಅದಕ್ಕೆ ಉದಾರಹಣೆಗಳಂತಿವೆ. ಡಿಜಿಟಲ್ ಮತ್ತು ಆನ್‌ಲೈನ್ ಕಲಿಕೆಯಲ್ಲಿಯೂ ಎಲ್ಲರಿಗಿಂತ ಮೊದಲಿತ್ತು. 2014 ರಲ್ಲಿ ತನ್ನದೇ ಆದ ಆನ್‌ಲೈನ್ ಕಲಿಕಾ ವೇದಿಕೆಯನ್ನು ಪ್ರಾರಂಭಿಸಿತು. ಅಂತರ್ಜಾಲ ಶಿಕ್ಷಣದ ಮೂಲಕ ಇಂದು 75 ಕೋರ್ಸ್‌ಗಳನ್ನು ನಡೆಸುತ್ತಿದೆ. 20 ಲಕ್ಷ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣ ಒದಗಿಸಿ, ಈ ದಾಖಲಾತಿಗಳ ಸಂಖ್ಯೆಯಲ್ಲಿ ವಿಶ್ವದ ಟಾಪ್ 3 ಸಂಸ್ಥೆಗಳಲ್ಲಿ ಸ್ಥಾನ ಪಡೆದಿದೆ.

ದೇಶದ ಅಗ್ರಗಣ್ಯ ಬಿಸಿನೆಸ್ ಸ್ಕೂಲ್‌ಗಳಲ್ಲಿ ದ್ವಿತೀಯ ಸ್ಥಾನದಲ್ಲಿರುವ, ಹಲವಾರು ಅಂತರರಾಷ್ಟ್ರೀಯ ಮ್ಯಾನತೆ ಪಡೆದಿರುವ ಇಂಡಿಯನ್ಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್-ಬೆಂಗಳೂರು(ಐಐಎಂಬಿ) ಇದೇ ಅ.28ಕ್ಕೆ 50ರ ಹರೆಯಕ್ಕೆ ಕಾಲಿಡುತ್ತಿದೆ. ಸಂಸ್ಥೆ ಬೆಳೆದು ಬಂದ ಹಾದಿಯ ಅವಲೋಕನ ಇಲ್ಲಿದೆ...



iimb



ಐಐಎಂಬಿಗೆ ಚಾಲನೆ ನೀಡುತ್ತಿರುವ ಇಂದಿರಾಗಾಂಧಿ

ಯಾಕೆ ಜನಪ್ರಿಯ?

ಎಂಬಿಎ ಪದವಿ ಪ್ರವೇಶ ಪರೀಕ್ಷೆ ಕ್ಯಾಟ್‌ನಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕ ಪಡೆದು, ಮುಂದಿನ ಹಂತಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರನ್ನು ಪ್ರವೇಶಕ್ಕೆ ಪರಿಗಣಿಸಲಾಗುತ್ತದೆ. ಐಐಎಂಬಿಯಿಂದ ಪದವಿ ಪಡೆದಿದ್ದರೆ, ಹೆಸರಾಂತ ಕಂಪನಿಗಳಲ್ಲಿ ಉದ್ಯೋಗಾವಕಾಶ, ದೊಡ್ಡ ಹುದ್ದೆ, ಕೈತುಂಬ ಸಂಬಳ ಖಚಿತ ಎಂಬುದನ್ನು ಹಿಂದಿನ ವಿದ್ಯಾರ್ಥಿಗಳ ಟ್ರ್ಯಾಕ್ ರೆಕಾರ್ಡ್ ಹೇಳುತ್ತಿದೆ. ಜಾಗತಿಕ ಮಟ್ಟದಲ್ಲಿ ಬಿಸಿನೆಸ್ ಸ್ಕೂಲ್‌ಗಳಿಗೆ ನೀಡಲಾಗುವ ಮಾನ್ಯತೆಗಳ ಪಟ್ಟಿಯಲ್ಲಿ ಐಐಎಂಬಿ ಹೆಸರು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಮನ್ನಣೆ ಗಳಿಸಿದೆ. ಬಿಸಿನೆಸ್ ಸ್ಕೂಲ್‌ಗಳಿಗೆ ಜಾಗತಿಕ ಮಟ್ಟದಲ್ಲಿ ಮಾನ್ಯತೆ ನೀಡುವ EQUIS(ಯೂರೋಪಿಯನ್ ಕ್ವಾಲಿಟಿ ಇಂಪ್ರೂಮೆಂಟ್ ಸಿಸ್ಟಂ) ಮಾನ್ಯತೆ ಪಡೆದಿದೆ.

ಪ್ರಮುಖ ಕೋರ್ಸ್‌ಗಳು

ವೃತ್ತಿಪರರ ಕೌಶಲ್ಯಾಭಿವೃದ್ಧಿಗಾಗಿ ಅಲ್ಪಾವಧಿ, ದೀರ್ಘಾವಧಿ ಕೋರ್ಸುಗಳು ಐಐಎಂಬಿಯಲ್ಲಿದೆ. ಬದಲಾಗುತ್ತಿರುವ ಔದ್ಯೋಗಿಕ ಜಗತ್ತಿನಲ್ಲಿ, ಭವಿಷ್ಯವನ್ನು ಎದುರಿಸಲು ಸಿದ್ಧರಾಗಿಸುವ ಉದ್ದೇಶ ಐಐಎಂಬಿಯದ್ದು. ಇಲ್ಲಿ ಪಾಠದ ಜೊತೆಗೆ ಉದ್ಯಮಕ್ಕೆ ಅಗತ್ಯ ಕೌಶಲವನ್ನು ಕಲಿಸುತ್ತದೆ. ಉದ್ಯಮದ ಪರಿಣತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಪ್ರೊ, ಇನ್ಫೋಸಿಸ್, ಒರಾಕಲ್‌ನಂತಹ ಸಂಸ್ಥೆಗಳೊಂದಿಗೆ ಐಐಎಂಬಿ ಸಕ್ರಿಯ ಸಹಯೋಗವನ್ನು ಹೊಂದಿದೆ. NSRCEL ಐಐಎಂಬಿಯ ಅಂಗಸಂಸ್ಥೆಯಾಗಿದ್ದು, ನವೋದ್ಯಮಿಗಳು, ವಾಣಿಜ್ಯ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸುತ್ತದೆ. ಈವರೆಗೆ 1.5 ಶತಕೋಟಿ ಡಾಲರ್ ಮೌಲ್ಯದ ಸುಮಾರು 600 ಉದ್ಯಮಗಳನ್ನು ಪೋಷಿಸಲು ನೆರವಾಗಿದೆ.

ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ(ಪಿಜಿಪಿ), ಬಿಸಿನೆಸ್ ಅನಾಲಿಟಿಕಕ್ಸ್‌ನಲ್ಲಿ ಎಂಬಿಎ ಸೇರಿದಂತೆ 11 ವಿಷಯಗಳಲ್ಲಿ ಕೋರ್ಸುಗಳನ್ನು ನೀಡುತ್ತಿದೆ. ಆನ್‌ಲೈನ್ ಶಿಕ್ಷಣ ಕೇಂದ್ರವಾದ ಐಐಎಂಬಿಎಕ್ಸ್‌ಗೆ 150 ಕ್ಕೂ ಹೆಚ್ಚು ದೇಶಗಳಿಂದ ಹತ್ತು ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಈ 50 ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಐಐಎಂಬಿಯಲ್ಲಿ ಕಲಿತು ಕಾರ್ಪೊರೇಟ್, ವ್ಯವಹಾರ ಜಗತ್ತಿನ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಅಶ್ವಥ್ ದಾಮೋದರನ್, ಅಮೆರಿಕದ ವಿತ್ತ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ನ್ಯೂಯಾರ್ಕ್ ವಿಶ್ವವಿದ್ಯಾಲಯದ ಸ್ಟರ್ನ್ ಸ್ಕೂಲ್ ಆಫ್ ಬ್ಯುಸಿನೆಸ್‌ನಲ್ಲಿ ಪ್ರಾಧ್ಯಾಪಕರಾಗಿರುವ ಇವರು ಐಐಎಂಬಿಯ ಹಳೆಯ ವಿದ್ಯಾರ್ಥಿ. ಕೋಲ್ಗೇಟ್-ಪಾಮೋಲಿವ್ ಇಂಡಿಯಾ ಲಿಮಿಟೆಡ್‌ನ ಸಿಇಒ ಶ್ರೀಮತಿ ಪ್ರಭಾ ನರಸಿಂಹನ್ ಇದೇ ಸಂಸ್ಥೆಯಲ್ಲಿ ಕಲಿತರು. ಮಾಸ್ಟರ್‌ಕಾರ್ಡ್ ಇಂಟರ್‌ನ್ಯಾಶನಲ್‌ನ ಮುಖ್ಯ ಮಾರ್ಕೆಟಿಂಗ್ ಅಧಿಕಾರಿ ರಾಜಮನ್ನಾರ್, ಇಸ್ರೋದ ಮಾಜಿ ಅಧ್ಯಕ್ಷ ಡಾ. ಕೆ ರಾಧಾಕೃಷ್ಣನ್...ಹೀಗೆ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಾಲಿನಲ್ಲಿ ನೂರಾರು ಸಾಧಕರು ಸಿಗುತ್ತಾರೆ. ಮಾರಿಕೋದ ವ್ಯವಸ್ಥಾಪಕ ನಿರ್ದೇಶಕ ಸೌಗತ ಗುಪ್ತಾ, ಲಖನೌನ ರೈಟ್ ವಾಕ್ ಫೌಂಡೇಶನ್‌ನಿಂದ ಉತ್ತರ ಪ್ರದೇಶದಲ್ಲಿ ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದ ಸಮೀನಾ ಬಾನೊ, ಟೀಂಲೀಸ್ ಸರ್ವೀಸ್‌ನ ಸಿಇಒ ಅಶೋಕ್ ರೆಡ್ಡಿ, ಕೇಂದ್ರ ಕೌಶಲ್ಯಾಭಿವೃದ್ಧಿ ಸಚಿವಾಲಯದ ಮಾಜಿ ಕಾರ್ಯದರ್ಶಿ ಕೆ.ಪಿ.ಕೃಷ್ಣನ್ ಇದೇ ಸಂಸ್ಥೆಯ ಹೆಮ್ಮೆಯ ಹಳೆ ವಿದ್ಯಾರ್ಥಿಗಳು.

'ತ್ರೀ ಇಡಿಯಟ್ಸ್' ಕಟ್ಟಡ

ಬನ್ನೇರುಘಟ್ಟದಲ್ಲಿರುವ ಐಐಎಂಬಿ ಕ್ಯಾಂಪಸ್ ಕಲ್ಲಿನ ಕಟ್ಟಡಗಳಿಂದಲೇ ಜನಪ್ರಿಯ. 1983ರಲ್ಲಿ ಪೂರ್ಣಗೊಂಡ ಇದರ ವಾಸ್ತುಶಿಲ್ಪಿ ಬಿ.ವಿ.ದೋಷಿ. 100 ಎಕರೆ ಕ್ಯಾಂಪಸ್‌ನಲ್ಲಿ ನಿರ್ಮಿಸಲಾದ 54,000 ಚದರ ಮೀಟರ್ ವ್ಯಾಪ್ತಿಯ ಈ ಆವರಣ 16ನೇ ಶತಮಾನದಲ್ಲಿ ಅಕ್ಬರ್ ನಿರ್ಮಿಸಿದ ಫತೇಪುರ್ ಸಿಕ್ರಿ ಪಟ್ಟಣದ ವಿನ್ಯಾಸವನ್ನು ಆಧರಿಸಿದೆ. ಹಚ್ಚ ಹಸಿರಿನಿಂದ ಕಂಗೊಳಿಸುವ ಈ ಪರಿಸರದಲ್ಲಿ ಬಾಲಿವುಡ್‌ನ 'ತ್ರೀ ಇಡಿಯಟ್ಸ್' ಸಿನಿಮಾ ಚಿತ್ರೀಕರಣಗೊಂಡಿತ್ತು. ❖

ಜಾಗತಿಕ ಹಸಿವು ಸೂಚ್ಯಂಕ 2023: ಭಾರತ 111 ನೇ ಸ್ಥಾನ

ಹಸಿವು ಮನುಕುಲವನ್ನು ಸದಾ ಬಾಧಿಸುವ ಬಲು ಮುಖ್ಯ ಅಂಶವಾಗಿದೆ. ಈ ನಿಟ್ಟಿನಲ್ಲಿ 125 ದೇಶಗಳಿಗೆ ಸಂಬಂಧಿಸಿದ ಪ್ರಸಕ್ತ ಸಾಲಿನ ಜಾಗತಿಕ ಹಸಿವು ಸೂಚ್ಯಂಕ ವರದಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಗಿದ್ದು ಭಾರತವು 111ನೇ ಸ್ಥಾನದಲ್ಲಿದೆ.

ವಿವರಗಳು

- ಜಾಗತಿಕ ಹಸಿವು ಸೂಚ್ಯಂಕ–2023ಕ್ಕೆ ಸಂಬಂಧಿಸಿ, ಭಾರತದ ಅಂಕ ಶೇ 28.7ರಷ್ಟಿದೆ. ಇದು ಹಸಿವಿನ ಮಟ್ಟ ಗಂಭೀರವಾಗಿರುವುದನ್ನು ತೋರಿಸುತ್ತದೆ ಎಂದು ಸೂಚ್ಯಂಕವನ್ನು ಆಧರಿಸಿ ಬಿಡುಗಡೆ ಮಾಡಿರುವ ವರದಿಯಲ್ಲಿ ವಿವರಿಸಲಾಗಿದೆ.
- 'ಜಾಗತಿಕ ಹಸಿವು ಸೂಚ್ಯಂಕ' (ಜಿಎಚ್‌ಐ) ಎಂಬುದು ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕ ಮಟ್ಟದಲ್ಲಿ ಹಸಿವಿನ ಪ್ರಮಾಣವನ್ನು ಅಳೆಯುವ ಸಾಧನವಾಗಿದೆ.
- ಈ ವರದಿಯನ್ನು ಕನ್ಸರ್ನ್ ವರ್ಲ್ಡ್‌ವೈಡ್ ಮತ್ತು ವೆಲ್ಟ್ ಹಂಗರ್ ಹಿಲ್ಫ್ ಸಂಸ್ಥೆಗಳು ಜಂಟಿಯಾಗಿ ಪ್ರಕಟಿಸುತ್ತವೆ.
- ಜಾಗತಿಕ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹಸಿವನ್ನು ಅಳೆಯಲು ಮತ್ತು ಮೇಲ್ವಿಚಾರಣೆ ಮಾಡಲು ಕಾರ್ಯನಿರ್ವಹಿಸುತ್ತದೆ; ಹಸಿವಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಪರಿಗಣಿಸುತ್ತದೆ.
- ಮೊದಲ GHI ವರದಿಯನ್ನು 2006 ರಲ್ಲಿ ಪ್ರಕಟಿಸಲಾಯಿತು.
- ಇದರ ಗುರಿ ಜಾಗತಿಕ, ಪ್ರಾದೇಶಿಕ ಮತ್ತು ದೇಶೀಯ ಮಟ್ಟದಲ್ಲಿ ಹಸಿವನ್ನು ಸಮಗ್ರವಾಗಿ ಅಳೆಯುವುದು ಮತ್ತು ನಿಗಾ ವಹಿಸುವುದು.

GHI ಅನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ ?

ಪ್ರತಿ ದೇಶದ GHI ಸ್ಕೋರ್ ಅನ್ನು ಈ ಕೆಳಗಿನ ನಾಲ್ಕು ಸೂಚ್ಯಂಕಗಳನ್ನು ಬಳಸಿ ಅದರ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ. ಈ ಸೂತ್ರವು ಹಸಿವಿನ ಬಹುಆಯಾಮದ ಸ್ವರೂಪವನ್ನು ಸೆರೆಹಿಡಿಯುತ್ತದೆ.

(1) ಅಪೌಷ್ಟಿಕತೆ : ಸಾಕಷ್ಟು ಕ್ಯಾಲೊರಿ ಸೇವನೆಯನ್ನು ಮಾಡಲಾಗದ ಜನಸಂಖ್ಯೆ. ಗ್ಲೋಬಲ್ ಹಂಗರ್ ಇಂಡೆಕ್ಸ್ ಸೂಚ್ಯಂಕವನ್ನು ನಿರ್ಧರಿಸುವಲ್ಲಿ ಈ ಸೂಚಕಕ್ಕೆ 1/3 ರಷ್ಟು ತೂಕವಿರುತ್ತದೆ.

(2) ಮಕ್ಕಳ ಕುಂಠಿತ ಬೆಳವಣಿಗೆ : ತಮ್ಮ ವಯಸ್ಸಿಗೆ ಅನುಗುಣವಾಗಿ ಇರಬೇಕಾದ ಎತ್ತರವನ್ನು ಹೊಂದಿರದ ದೀರ್ಘಕಾಲದ ಅಪೌಷ್ಟಿಕತೆಯನ್ನು ಪ್ರತಿಬಿಂಬಿಸುವ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ. ಈ ಸೂಚಕಕ್ಕೆ 1/6 ರಷ್ಟು ತೂಕವಿರುತ್ತದೆ.

(3) ಮಕ್ಕಳ ಕ್ಷೀಣ ಬೆಳವಣಿಗೆ : ತಮ್ಮ ಎತ್ತರಕ್ಕೆ ಹೋಲಿಸಿದಲ್ಲಿ ಕಡಿಮೆ ತೂಕವನ್ನು ಹೊಂದಿರುವ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ. ಈ ಸೂಚಕಕ್ಕೆ 1/6 ರಷ್ಟು ತೂಕವಿರುತ್ತದೆ.

(4) ಮಕ್ಕಳ ಮರಣಪ್ರಮಾಣ : ತಮ್ಮ ಐದನೇ ಹುಟ್ಟುಹಬ್ಬದ ಮೊದಲು ಸಾಯುವ ಮಕ್ಕಳ ಸಂಖ್ಯೆ.ಇದು ಅಸಮರ್ಪಕವಾದ ಪೋಷಣೆ ಮತ್ತು ಅನಾರೋಗ್ಯಕರ ಪರಿಸರವನ್ನು ಸೂಚಿಸುತ್ತದೆ. ಈ ಸೂಚ್ಯಂಕಕ್ಕೆ 1/3 ರಷ್ಟು ತೂಕವಿರುತ್ತದೆ.

- ಈ ನಾಲ್ಕು ಸೂಚಕಗಳ ಮೌಲ್ಯಗಳ ಆಧಾರದ ಮೇಲೆ, ಹಸಿವಿನ ತೀವ್ರತೆಯನ್ನು ಪ್ರತಿಬಿಂಬಿಸುವ 100-ಪಾಯಿಂಟ್ ಸ್ಕೇಲ್‌ನಲ್ಲಿ GHI ಅಂಕ ಎಷ್ಟು ಎಂದು ಲೆಕ್ಕಹಾಕಲಾಗುತ್ತದೆ.

ಹಸಿವು ಎಂದರೇನು ?

- ವರದಿಯ ಪ್ರಕಾರ ಹಸಿವು ಎಂದರೆ ಸುಧೀರ್ಘ ಕಾಲದಲ್ಲಿ ಸಾಕಷ್ಟು ಕ್ಯಾಲೋರಿ ಸೇವನೆ ಮಾಡಲಾಗದೇ ಅನುಭವಿಸುವ ತೊಂದರೆಗಳನ್ನು ಸೂಚಿಸುತ್ತದೆ.
- ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAO)ಯು ಆಹಾರದ ಅಭಾವ ಅಥವಾ ಅಪೌಷ್ಟಿಕತೆಯನ್ನು ಅಸಮರ್ಪಕ ಸಂಖ್ಯೆಯ ಕ್ಯಾಲೊರಿಗಳ ಸೇವಿಸುವಿಕೆ ಎಂದು ವ್ಯಾಖ್ಯಾನಿಸುತ್ತದೆ. ಒಬ್ಬ ವ್ಯಕ್ತಿಯು ಆರೋಗ್ಯಕರ ಮತ್ತು ಉತ್ಪಾದಕ ಜೀವನವನ್ನು ನಡೆಸಲು ಅಗತ್ಯವಾದ ಕನಿಷ್ಠ ಆಹಾರ ಶಕ್ತಿಯ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚಿನ ಕಾಲ ವಿಫಲವಾದಲ್ಲಿ ಅದನ್ನು ಹಸಿವು ಎಂದು ವ್ಯಾಖ್ಯಾನಿಸುತ್ತದೆw. (ಅಂದರೆ ಉದಾಹರಣೆಗೆ ಎರಡು ಅಥವಾ ನಾಲ್ಕು ದಿನಗಳ ಕಾಲ ಒಬ್ಬ ವ್ಯಕ್ತಿ ಇತರ ಯಾವುದೋ ಕಾರಣಾಂತರಗಳಿಂದ ಆಹಾರವನ್ನು ಸೇವಿಸಲಾಗದಿದ್ದರೆ ಅದನ್ನು ಸೂಚ್ಯಂಕದಲ್ಲಿ ಪರಿಗಣಿಸಲಾಗುವುದಿಲ್ಲ.)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಎಸ್ಸೆಸ್ಸೆಲ್ಸಿ-ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ENGLISH

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-2 PROSE

There's a Girl by the Tracks!

Speak well

Task -1: ***Imagine some of Roma's colleagues (Ramani, Tejas and Shalini) visit Roma's house some days later, after the incident. They begin to talk.***

Read the dialogues taking the roles.

Shalini: Hi! Roma, how're you now? We're sorry to hear about the accident.

Roma: Please come in. I'm ok. Still, that accident haunts me.

Tejas: That's really a pity. We can't even imagine how all that happened.

Roma: Yes, it was really horrible. You know, I was in a hurry that day. Foolishly, I tried to board the running train.

Ramani: Really? You shouldn't have done that!

Roma: Well, with great risk I boarded it. The train was full and I got squeezed and a minute or two later, I was pushed out.

Tejas: How dreadful!

Roma: The very next moment, I was on the track. I didn't know how I got there.

Shalini: How terrible!

Roma: It was all God's grace that I didn't die. A young chap risked his life and saved me.

Tejas: Did he? Anyway, take care Roma. For heaven's sake, don't you ever run any more risks.

Roma: Thank you all.

Ramani: Meet you again. Take care. Bye!

Roma: Bye, friends.

Task 2: ***Imagine something bad has happened in your friend's life. You meet him/her. You need to sympathise with and instill confidence in him/her. Write a dialogue.***

Note: The following expressions are used to convey sympathy.

I'm sorry to hear about ....
That's so sad........
I'm awfully/dreadfully sorry about ......
That's a pity/hard luck/I know how it feels ....
How upsetting/ annoying/ oh, how dreadful/ terrible/ awful ......
You must be very upset ....
I'm extremely sorry to hear that/ Im/was deeply sorry to hear/ learn about ....
Bad luck ......
Can I help you in any way ...?
Don't worry it'll turn out all right...
It may not be as bad as it looks...
Well, these things happen, don't they ...?

Dialogue -

Me: Hi Vinay! How are you?

Vinay: I am sad friend. I lost my cousin brother in a bike accident last week.

Me: I'm sorry to hear about that.

Vinay: He was just 21 years old.

Me: That's so sad.

Vinay: He sustained serious head injuries when his bike hit a half cut electric pole.

Me: I'm dreadfully sorry about that.

Vinay: Instead of removing the pole completely from bottom with its embeddment in concrete, the pole was cut few inches above road level, resulting in accident.

Me: It's a pity that a young chap had to die for someone else's negligence. I know how it feels...

Vinay: And it happened during the night in a poorly lit street.

Me: How awful......the maintenance of roads and street lights by municipality is terrible.

Vinay: True.

Me: You must be very upset...

Vinay: Yes, I am very sad for losing my cousin brother for no fault of his. His mother had to be admitted to hospital when she lost her consciousness after hearing about his death.

Me: I'm extremely sorry to hear that ...

Vinay: She is yet to recover from the shock ...

Me: Bad luck ...

Vinay: It is not bad luck but it is the murder by municipality.

Me: Can I help you in any way ...?

Vinay: No, thanks. I will definitely ask for it, if required.

Me: Don't worry it'll turn out all right...She will recover soon...

Vinay: I am praying God that your words come true.

Me: It may not be as bad as it looks...

Vinay: Hope so...

Me: Well, these things happen, don't they ...?

Vinay: Due to the corruption in municipalities, these things are happening more frequently...

Read and respond

Task 1 : Look at the picture- 1 in column 'A'. Some statements are made in column 'B' about the actions as seen in 'A'. Some of the statements are wrong, and some of them are right. If they are wrong, correct them. If they are right mark (√) (Contd.....)

II PUC BIOLOGY

REPRODUCTION

Human Reproduction

Multiple Choice questions:- *(....Contd)*

5. Gestation period in humans is......
A) 10 weeks B) 25 weeks
C) 7 months D) 9 months

6. Clupein protein occurs in......
A) Human sperms B) Avian sperms
C) Human ova D) Avian ova

7. Amniotic fluid protects the foetus from......
A) Shock B) Encystment
C) Degeneration D) Disease

8. Human placenta is............
A) Haemochorial B) Syndesmochorial
C) Yolk sac D) Haemo-endothelial

9. The best definition of the process of gastrulation is that it is a process where the........
A) Simple layered blastula becomes two layered
B) Archenteron is formed
C) Cells move to occupy their definite position
D) Zygote gets converted into larva.

10. Placenta is the region where
A) Foetus is attached to mother by umbilical cord
B) Foetus is provided with mother's blood
,C) Foetus receives nourishment from mother's blood
D) Foetus is covered by membranes

11. If the ectoderm from neutral tissue area is removed from the embryo and transplanted in place of presumptive belly ectoderm, embryo will develop................
A) Without a neural tube
B) With a neural tube
C) With two ectodermal coats
D) With two neural tubes.

12. The mesoderm gives rise to all the following structures in the fully developed animal except....
A) Muscular system B) Nervous system
C) Circulatory system D) Gonads

13. After a sperm has penetrated an ovum, entry of other sperm is prevented by............
A) Condensation of yolk
B) Formation of pigment coat
C) Development of vitelline membrane
D) Development of fertilization membrane

14. Allantosis of the mammalian embryo helps in
A) Respiration B) Excretion
C) Protection D) Nutrition

15. In development, nervous system (brain, spinal cord, nerve cells) is.............
A) Ectodermal B) Endodermal
C) Ectomesodermal D) Endomesodermal

16. Graafian follicles are found in........
A) Testis of mammal B) Ovary of frog
C) Ovary of cockroach D) Ovary of mammals

17. Clitoris in mammals is..........
A) Homologous to penis B) Analogous penis
C) Functional penis in female
D) Non-functional

18. Amnion is helpful to embryo in............
A) Nutrition B) protection from shock
C) Excretion D) Respiration

19. Human embryo is protected by...............
A) Allantois B) Amniotic cavity
C) Pleural cavity D) Peritoneal cavity

20. Umbilical cord contains..........
A) Umblicus B) Placenta
C) Discus proligerus
D) Allantoic artery and vein.

21. Cryptorchidism is a condition of testes........
A) Unable to descend in scrotal sacs
B) Unable to produce sperms
C) Having been surgically removed
D) having remained undeveloped

22. Egg is liberated from ovary in..........
A) Secondary oocyte stage
B) Primary oocyte stage C) Oogonial stage
D) Mature ovum stage

23. Cells become variable in morphology and function in different regions of the embryo. The process is:................
,A) Differentiation B) metamorphosis
C) Organisation D) Rearrangement

24. Site of fertilization in a mammal is............
A) Ovary B) Uterus
C) Vagina ,D) Fallopian tube

25. Allantois is embryonic membrane found in...
A) Mammals B) Birds
C) Reptiles
D) Birds, mammals and reptiles

26. Gonads develop from embryonic..........
A) Ectoderm B) Endoderm
C) Mesoderm (D)Both mesoderm and endoderm.

27. How many sperms are formed from a secondary spermatocyte?
A) 4 B) 8 C) 2 D) 1

28. Human eggs are..............
,A) Alecithal B) Microlecithal
C) Mesolecithal D) Macrolecithal

29. Location and secretion of Leyding cells are ...
A) Liver-cholesterol B) Ovary-estrogen
C) Testis-testosterone D) Pancreas-glucagon

30. Middle piece of mammalian sperm possesses...
A) Mitochondria and centriole
B) Mitochondria only C) Centriole only
D) Nucleus and mitochondria

31. Freshly released human egg has........
A) One Y –chromosome
B) One X- chromosome
C) Two X- chromosome
D) One X- chromosome and one Y – chromosome

Ans:-

1. (A)	2. (C)	3. (B)	4. (C)	5. (D)
6. (A)	7. (A)	8. (A)	9. (C)	10.(C)
11.(C)	12.(B)	13.(D)	14.(B)	15.(A)
16.(D)	17.(A)	18.(B)	19.(B)	20.(D)
21.(A)	22.(A)	23.(A)	24.(D)	25.(D)
26.(C)	27.(A)	28.(A)	29.(C)	30.(A)
31.(B)				

ಕೈಗಾರಿಕಾ ನ್ಯಾಯಮಂಡಳಿ ಹುದ್ದೆಗೆ ನೇಮಕ ವಿಳಂಬ

₹10 ಲಕ್ಷ ದಂಡದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಕೈಗಾರಿಕಾ ನ್ಯಾಯಮಂಡಳಿಯ (ಕಾರ್ಮಿಕ ನ್ಯಾಯಾಲಯ) ಬೆಂಗಳೂರು ಪೀಠಾಸೀನಾ ಅಧಿಕಾರಿಯ ನೇಮಕಾತಿಗೆ ವಿಳಂಬಕ್ಕೆ ಬೇಸರ ವ್ಯಕ್ತಪಡಿಸಿರುವ ಹೈಕೋರ್ಟ್, 'ಈ ಸಂಬಂಧ ಮುಂದಿನ ಮೂರು ವಾರಗಳಲ್ಲಿ ಸಕಾರಾತ್ಮಕ ಕ್ರಮ ಕೈಗೊಳ್ಳದೇ ಹೋದರೆ ₹ 10 ಲಕ್ಷ ದಂಡ ತೆರಬೇಕಾಗುತ್ತದೆ' ಎಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

'ಕೈಗಾರಿಕಾ ಕಾನೂನು ಅಭ್ಯಾಸ ಕಾರರ ವೇದಿಕೆ' ಕಾರ್ಯದರ್ಶಿ ಸಲ್ಲಿಸಿ ರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯನ್ನು ಮುಖ್ಯ ನ್ಯಾಯಮೂರ್ತಿ ಪಿ. ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ವಕೀಲರು, 'ಕೈಗಾರಿಕಾ ನ್ಯಾಯ ಮಂಡಳಿಗೆ ಪೀಠಾಸೀನ ಅಧಿಕಾರಿಯಾಗಿ 2022ರ ಆಗಸ್ಟ್ 18 ರಂದು ಒಬ್ಬರನ್ನು ನೇಮಕ ಮಾಡಲಾಗಿತ್ತು. ಆದರೆ, ಅವರು ಅಧಿಕಾರ ವಹಿಸಿಕೊಂಡಿಲ್ಲ. ಹೀಗಾಗಿ, ಹೊಸ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಇದು ಕೇಂದ್ರ ಸಂಪುಟದ ನೇಮಕಾತಿ ಸಮಿತಿಯ ಹಂತದಲ್ಲಿದೆ. ಎರಡು ವಾರಗಳ ಕಾಲಾವಕಾಶ ನೀಡಿದರೆ ವಸ್ತುಸ್ಥಿತಿಯನ್ನು ನ್ಯಾಯಪೀಠಕ್ಕೆ ವಿವರಿಸಲಾಗುವುದು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅರ್ಜಿದಾರರು ಹೇಳುವಂತೆ ಕಳೆದ ಮೂರು ವರ್ಷಗಳಿಂದ ಹುದ್ದೆ ಖಾಲಿ ಇದೆ. ಈ ರೀತಿ ನ್ಯಾಯಿಕ ಮತ್ತು ಅರೆನ್ಯಾಯಿಕ ಸಂಸ್ಥೆಯ ಹುದ್ದೆಗಳನ್ನು ದೀರ್ಘಕಾಲದವರೆಗೆ ಭರ್ತಿ ಮಾಡದೆ ಹೋದರೆ ಕಕ್ಷಿದಾರರು ನ್ಯಾಯವಂಚಿರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಮೌನ ಪ್ರೇಕ್ಷಕನಾಗಿ ಇರಬಾರದು' ಎಂದು ಹೇಳಿತು.

'ಕೇಂದ್ರ ಸರ್ಕಾರದ ಪರ ವಕೀಲರು ಎರಡು ವಾರಗಳಲ್ಲಿ ವಸ್ತುಸ್ಥಿತಿ ವರದಿ ಸಲ್ಲಿಸುವುದಾಗಿ ಹೇಳುತ್ತಿದ್ದಾರೆ. ಆದರೆ, ಇದು ಕಣ್ಣೊರೆಸುವ ತಂತ್ರ ಆಗಬಾರದು' ಎಂದು ದಂಡ ತೆರಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿ ಮೂರು ವಾರಗಳ ಕಾಲಾವಕಾಶ ನೀಡಿತು. ವಿಚಾರಣೆಯನ್ನು ನ.7 ಕ್ಕೆ ಮುಂದೂಡಲಾಗಿದೆ.

ಕೇಂದ್ರ ಸಾಹಿತ್ಯ ಅಕಾಡೆಮಿ ನಿರ್ಧಾರ ಎತ್ತಿ ಹಿಡಿದ ಹೈಕೋರ್ಟ್

ಬೆಂಗಳೂರು: ಅಪ್ರಾಪ್ತ ವಯಸ್ಕನಿಗೆ ನೀಡಲಾಗಿದ್ದ ನೇಮಕಾತಿ ಪತ್ರ ಹಿಂಪಡೆದ ಕೇಂದ್ರ ಸಾಹಿತ್ಯ ಅಕಾಡೆಮಿಯ ನಿರ್ಧಾರವನ್ನು ಎತ್ತಿ ಹಿಡಿದಿರುವ ಹೈಕೋರ್ಟ್, '15 ವರ್ಷ 6 ತಿಂಗಳು ತುಂಬಿರುವ ಬಾಲಕನನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳುವುದು ಬಾಲ ಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ತಿದ್ದುಪಡಿ ನಿಯಮ–2017ಕ್ಕೆ ವಿರುದ್ಧವಾಗಲಿದೆ' ಎಂದು ಆದೇಶಿಸಿದೆ.

ಈ ಸಂಬಂಧ ವಿವೇಕ್ ಹೆಬ್ಬಾಲೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸಾಹಿತ್ಯ ಅಕಾಡೆಮಿಯು ಅರ್ಜಿದಾರರಿಗೆ ನೀಡಿದ್ದ ಉದ್ಯೋಗ ಪತ್ರವನ್ನು ವಾಪಸು ಪಡೆದಿರುವ ಕ್ರಮ ಸರಿಯಾಗಿಯೇ ಇದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣವೇನು?: ಕೇಂದ್ರ ಸಾಹಿತ್ಯ ಅಕಾಡೆಮಿ 2022ರಲ್ಲಿ ಸೇಲ್ಸ್ ಕಮ್ ಎಕ್ಸಿಬಿಷನ್ ಅಸಿಸ್ಟೆಂಟ್ ಹುದ್ದೆಗೆ ನೇಮಕಕ್ಕಾಗಿ ಅರ್ಜಿ ಆಹ್ವಾನಿಸಿತ್ತು. ಇದಕ್ಕೆ ವಿವೇಕ್ ಹೆಬ್ಬಾಲೆ ಅರ್ಜಿ ಸಲ್ಲಿಸಿ ಆಯ್ಕೆಯಾಗಿದ್ದರು ಮತ್ತು ನಂತರದಲ್ಲಿ ದಾಖಲೆಗಳನ್ನು ಸಲ್ಲಿಸಿದ್ದರು. ದಾಖಲೆ ಪರಿಶೀಲಿಸಿದಾಗ ವಿವೇಕ್ 15 ವರ್ಷ 6 ತಿಂಗಳು ಪೂರೈಸಿರುವುದು ಕಂಡು ಬಂದಿತ್ತು. ಹೀಗಾಗಿ, 2022ರ ಜನವರಿ 24ರಂದು ನೇಮಕಾತಿ ವಾಪಸು ಪಡೆದು ಅರ್ಜಿದಾರರಿಗೆ, 'ನೀವು ನೇಮಕಕ್ಕೆ ಅರ್ಹರಲ್ಲ' ಎಂದು ತಿಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ವಿವೇಕ್ ಹೆಬ್ಬಾಲೆ ಹೈಕೋರ್ಟ್ ಮೆಟ್ಟಿಲೇರಿದ್ದರು.

'ನಮ್ಮ ಐದು ವರ್ಷದ ಆಡಳಿತದ್ದು, ಬಿಜೆಪಿ ಅಧಿಕಾರದ ಅವಧಿಯದ್ದು'

ಆರ್ಥಿಕ ಸ್ಥಿತಿಯ ಶ್ವೇತಪತ್ರ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: 'ನಮ್ಮ ಐದು ವರ್ಷದ ಆಡಳಿತದಲ್ಲಿದ್ದುದು ಹಾಗೂ ಬಿಜೆಪಿ ಅಧಿಕಾರದ ಅವಧಿಯಲ್ಲಿನ ಆರ್ಥಿಕ ಪರಿಸ್ಥಿತಿಯ ಬಗ್ಗೆ ಶ್ವೇತಪತ್ರವನ್ನು ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ರಾಜ್ಯದಲ್ಲಿರುವುದು ಎಟಿಎಂ ಸರ್ಕಾರ' ಎಂಬ ಬಿಜೆಪಿಯವರ ಟೀಕೆಗೆ ಇಲ್ಲಿ ಬುಧವಾರ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಗೆ ಮಾನ – ಮರ್ಯಾದೆ ಇದೆಯೇ?' ಎಂದು ಗರಂ ಆದರು.

'ಕೋಟ್ಯಂತರ ರೂಪಾಯಿ ಬಳಸಿ ಆಪರೇಷನ್ ಕಮಲ ಮಾಡಿದವರು ನಮ್ಮ ಬಗ್ಗೆ ಮಾತಾಡುತ್ತಾರೆ. ರಾಜ್ಯ ಆರ್ಥಿಕವಾಗಿ ದಿವಾಳಿಯಾಗಲು ಬಿಜೆಪಿ ಕಾರಣ. ಈಗ ವಿದ್ಯುತ್ ತೊಂದರೆ

ಆಗಿದ್ದರೆ ಅದಕ್ಕೂ ಬಿಜೆಪಿಯೇ ಕಾರಣ. ಆ ಪಕ್ಷದವರ ಆಡಳಿತದ ಅವಧಿಯಲ್ಲಿ ಒಂದು ಮೆಗಾವಾಟ್ ವಿದ್ಯುತ್ ಕೂಡ ಉತ್ಪಾದಿಸಲಿಲ್ಲ. ಅವರಿಗೆ ಕಾಂಗ್ರೆಸ್ ಬಗ್ಗೆ ಮಾತನಾಡಲು ನೈತಿಕ ಹಕ್ಕಿಲ್ಲ' ಎಂದು ತಿರುಗೇಟು ನೀಡಿದರು.

'ಬಿಜೆಪಿಯವರು ಸಾಲ ಮಾಡಿ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿ ಹೋಗಿದ್ದಾರೆ. ಹಣ ಇರದಿದ್ದರೂ ಕಾಮಗಾರಿಗೆ ಟೆಂಡರ್ ಕರೆದು ₹ 30ಸಾವಿರ ಕೋಟಿ ಬಿಲ್ ಬಾಕಿ ಇಟ್ಟಿದ್ದಾರೆ. ಇದಕ್ಕೆ ಯಾರು ಹೊಣೆ?' ಎಂದು ಕೇಳಿದರು.

'ನಾವು ಹೈಕಮಾಂಡ್‌ಗೆ ದುಡ್ಡು ಕಳುಹಿಸುತ್ತೇವೆ ಎಂಬುದು ಸುಳ್ಳು. ನಾವು ಯಾರಿಗೂ ಒಂದು ಪೈಸೆಯನ್ನೂ ಕೊಟ್ಟಿಲ್ಲ' ಎಂದು ಸಮರ್ಥಿಸಿಕೊಂಡರು.

'ನಟರಾದ ದರ್ಶನ್ ಹಾಗೂ ಜಗ್ಗೇಶ್ ಅವರು ಹುಲಿ ಉಗುರು ಧರಿಸಿದ ವಿಡಿಯೊ ವೈರಲ್ ಆಗಿರುವ ಪ್ರಕರಣದ ಕುರಿತು ಸಂಪೂರ್ಣ ಮಾಹಿತಿ ಇಲ್ಲ. ಪೊಲೀಸ್ ಇಲಾಖೆಯಿಂದ ಮಾಹಿತಿ ಪಡೆದು ಪರಿಶೀಲಿಸಲಾಗುವುದು' ಎಂದು ತಿಳಿಸಿದರು.

'ಕುಮಾರಸ್ವಾಮಿ ರಾಜಕೀಯದ ವಿಲನ್'

ಮೈಸೂರು: 'ರಾಜಕೀಯದಲ್ಲಿ ವಿಲನ್ ಇದ್ದರೆ ಅದು ಮಿಸ್ಟರ್ ಕುಮಾರಸ್ವಾಮಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

'ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಬೀಳುವಾಗ ಅಮೆರಿಕದಲ್ಲಿ ಕೂತಿದ್ದರು. ಇದಕ್ಕೆ ಏನನ್ನಬೇಕು? ಒಂದು ವರ್ಷ ಎರಡು ತಿಂಗಳು ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲೇ ಕಾಲ ಕಳೆದರು' ಎಂದು ವ್ಯಂಗ್ಯವಾಡಿದರು.

'ಸಮ್ಮಿಶ್ರ ಸರ್ಕಾರ ಬೀಳಿಸಿದ್ದು ಬಿಜೆಪಿಯವರೇ ಎಂದು ಅವರು ವಿಧಾನಸಭೆಯಲ್ಲಿ ಹೇಳಿದ್ದಾರೆ. ಇದು ರೆಕಾರ್ಡ್ ಆಗಿದೆ. ಆ ದಾಖಲೆಗಳನ್ನು ಬೇಕಾದರೆ ಬಿಡುಗಡೆ ಮಾಡುತ್ತೇನೆ. ಸಚಿವರು ಹಾಗೂ ಶಾಸಕರನ್ನು ಭೇಟಿ ಮಾಡದೇ ಹೋಟೆಲ್‌ನಲ್ಲಿ ಕೂತು ಈಗ ನನ್ನ ಮೇಲೆ ಆರೋಪಿಸುತ್ತಿದ್ದಾರೆ. ರಾಜಕೀಯವಾಗಿ ಹತಾಶರಾಗಿ ಬಾಯಿಗೆ ಬಂದಂತೆ ಮಾತಾಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಬಿಜೆಪಿಯವರು ಹತಾಶರಾಗಿದ್ದಾರೆ. ಆ ಪಕ್ಷದವರಿಗಿಂತಲೂ ಕುಮಾರಸ್ವಾಮಿ ಜಾಸ್ತಿ ಹತಾಶರಾಗಿದ್ದಾರೆ' ಎಂದು ವ್ಯಂಗ್ಯವಾಡಿದರು.

'ತುಘಲಕ್'ಗೆ 100ರ ಸಂಭ್ರಮ: ವಿಶೇಷ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮುದಾಯ ಬೆಂಗಳೂರು 'ತುಘಲಕ್' ನಾಟಕದ ನೂರನೇ ಪ್ರದರ್ಶನದ ಸಂಭ್ರಮದ ಪ್ರಯುಕ್ತ ಇದೇ 28 ಮತ್ತು 29ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಗಿರೀಶ್ ಕಾರ್ನಾಡ್ ಅವರು ರಚಿಸಿದ ನಾಟಕ ಇದಾಗಿದೆ. ಕಾರ್ಯಕ್ರಮದಲ್ಲಿ ಕಾರ್ನಾಡರ ನೆನಪು ವಿಚಾರ ಸಂಕಿರಣ, ಸ್ಮರಣ ಸಂಚಿಕೆ ಬಿಡುಗಡೆ, ಕೆ.ಎಂ. ಚೈತನ್ಯ ನಿರ್ದೇಶನದ ಕಾರ್ನಾಡ್ ಸಾಕ್ಷ್ಯಚಿತ್ರ ಪ್ರದರ್ಶನ, 'ಹೂವು' ಏಕವ್ಯಕ್ತಿ ನಾಟಕ ಪ್ರದರ್ಶನ, 'ಕಾರ್ನಾಡರ ಕೃತಿಗಳು–ಒಳನೋಟ' ವಿಚಾರಸಂಕಿರಣ, 'ರಂಗ ಚಿಂತನ' ಪುಸ್ತಕ ಬಿಡುಗಡೆ ಸೇರಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಸಂಜೆ 'ತುಘಲಕ್' ನಾಟಕ ಪ್ರದರ್ಶನವಿದೆ. ರಂಗಕರ್ಮಿಗಳು, ಸಾಹಿತಿಗಳು ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಲಿದ್ದಾರ ಎಂದು ಸಮುದಾಯ ಬೆಂಗಳೂರಿನ ಉಪಾಧ್ಯಕ್ಷೆ ಪದ್ಮಾ ಶಿವಮೊಗ್ಗ ತಿಳಿಸಿದ್ದಾರೆ.

'ತುಘಲಕ್' ನಾಟಕವನ್ನು ಸಾಮ್ ಕುಟ್ಟಿ ಪಟ್ಟಂಕರಿ ನಿರ್ದೇಶಿಸಿದ್ದಾರೆ. ಶ್ರೀಪಾದ್ ಭಟ್ ಸಹ ನಿರ್ದೇಶಕರಾಗಿದ್ದಾರೆ. ಮೇಲ್ನೋಟಕ್ಕೆ ಐತಿಹಾಸಿಕ ನಾಟಕವಾಗಿರುವ 'ತುಘಲಕ್', ರಾಜಕಾರಣದ ಮೇಲಿನ ಧರ್ಮದ ಹಿಡಿತವನ್ನು ಎತ್ತಿ ಹಿಡಿಯುತ್ತದೆ ಎಂದು ಹೇಳಿದ್ದಾರೆ.

ಮೀನ ಬಲೆ

ನೀಲ ನೀರ ರಾಶಿಯಲ್ಲಿ ಮೀನು ಹಿಡಿಯಲು ಹಲಸೂರು ಕೆರೆಯಲ್ಲಿ ಬುಧವಾರ ಬಲೆ ಬೀಸಿರುವ ಮೀನುಗಾರರು –ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಮೂಡುಬಿದಿರೆಯಲ್ಲಿ 29ಕ್ಕೆ 'ಚಾರುವಸಂತ'

ಮೂಡುಬಿದಿರೆ: ಹಂಪ ನಾಗರಾಜಯ್ಯ ಅವರ ದೇಸಿ ಮಹಾಕಾವ್ಯ 'ಚಾರುವಸಂತ'ವನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ರಂಗಭೂಮಿಗೆ ತರುತ್ತಿದ್ದು, ಇದೇ 29ರಂದು ಸಂಜೆ 6.15ಕ್ಕೆ ಇಲ್ಲಿನ ಸ್ಕೌಟ್ಸ್ ಮತ್ತು ಗೈಡ್ ಕನ್ನಡ ಭವನದಲ್ಲಿ ಇದರ ಮೊದಲ ಪ್ರದರ್ಶನ ನಡೆಯಲಿದೆ.

ಇದನ್ನು ರಂಗಕರ್ಮಿ, ಸಾಹಿತಿ ನಾ. ದಾಮೋದರ ಶೆಟ್ಟಿ ರಂಗಕ್ಕೆ ಅಳವಡಿಸಿದ್ದಾರೆ. ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಜೀವನ್ ರಾಂ ಸುಳ್ಯ ಅವರ ನಿರ್ದೇಶನದಲ್ಲಿ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ನಂತರ, ಈ ತಂಡವು ಮೈಸೂರು, ಬೆಂಗಳೂರು, ತುಮಕೂರು, ದಾವಣಗೆರೆ, ಧಾರವಾಡ, ಸೇರಿದಂತೆ ರಾಜ್ಯದ ವಿವಿಧೆಡೆ ಪ್ರದರ್ಶನ ನೀಡಲಿದೆ.

ಆನೆ ಸಾಗಿಸುತ್ತಿದ್ದ ಲಾರಿ ಅಪಘಾತ: ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ದಸರಾ ಮಹೋತ್ಸವಕ್ಕೆ ತರಲಾಗಿದ್ದ ಆನೆಯನ್ನು ವಾಪಸ್ ತಮಿಳುನಾಡಿಗೆ ಕೊಂಡೊಯ್ಯುವಾಗ ಮಾರ್ಗ ಮಧ್ಯೆ ಅಪಘಾತ ಸಂಭವಿಸಿ ಚಾಲಕ ಮೃತಪಟ್ಟಿರುವ ಘಟನೆ ತಮಿಳುನಾಡು ಹೊಸೂರಿನ ಶಾನಮಾವು ಬಳಿ ಬುಧವಾರ ನಡೆದಿದೆ.

ಲಾರಿ ಚಾಲಕ ಅಂಥೋಣಿಸ್ವಾಮಿ (45) ಮೃತರು. ದಸರಾ ಉತ್ಸವಕ್ಕೆ ತಮಿಳುನಾಡಿನ ತಿರುಚಿಯಿಂದ ಆನೆಯನ್ನು ತರಲಾಗಿತ್ತು. ಉತ್ಸವ ಮುಗಿಸಿ ವಾಪಸ್ ಕೊಂಡೊಯ್ಯುತ್ತಿದ್ದಾಗ ಶಾನಮಾವು ಅರಣ್ಯ ಪ್ರದೇಶದಲ್ಲಿ ಚಾಲಕ ಅಂಥೋಣಿಸ್ವಾಮಿ ರಸ್ತೆ ಬದಿಗೆ ಲಾರಿ ನಿಲ್ಲಿಸಿ ಅದರ ಮುಂದೆಯೇ ಮೂತ್ರ ವಿಸರ್ಜನೆಗೆ ನಿಂತಿದ್ದರು. ಹ್ಯಾಂಡ್ ಬ್ರೇಕ್ ಹಾಕದ ಕಾರಣ ಲಾರಿಯು ದಿಢೀರನೇ ಮುಂದೆಗೆ ಚಲಿಸಿದೆ. ಲಾರಿನಡಿಗೆ ಸಿಲುಕಿ ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಆನೆಯನ್ನು ಕ್ರೇನ್ ಮೂಲಕ ಸಂರಕ್ಷಿಸಲಾಯಿತು.

ಘಟನೆಯಿಂದಾಗಿ ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ 2 ತಾಸಿಗೂ ಹೆಚ್ಚು ಕಾಲ ಸಂಚಾರ ಅಸ್ತವ್ಯಸ್ಥವಾಗಿತ್ತು ಎಂದು ಹೊಸೂರು ಪೊಲೀಸರು ತಿಳಿಸಿದ್ದಾರೆ.

ಶಿವಮೊಗ್ಗದಲ್ಲಿ ಜಂಬೂ ಸವಾರಿಗೆ ಕರೆ ತಂದಿದ್ದ ಆನೆ ಮರಿ ಹಾಕಿದ ಪ್ರಕರಣ

ಲೋಪ ಪತ್ತೆ ಮಾಡಲು ತನಿಖೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ದಸರಾ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ಶಿವಮೊಗ್ಗಕ್ಕೆ ಬಂದಿದ್ದ ವೇಳೆ ಆನೆ ನೇತ್ರಾವತಿಯು ಮರಿ ಹಾಕಿರುವ ಘಟನೆ ಅರಣ್ಯ ಇಲಾಖೆಗೆ ಮುಜುಗರ ತಂದಿದೆ. ಅಂತೆಯೇ ಈ ಸಂಬಂಧದ ಲೋಪದ ಪತ್ತೆಗೆ ತನಿಖೆ ನಡೆಸಲು ಮುಂದಾಗಿದೆ.

ಕಾರ್ಗಲ್ ವಿಭಾಗದ ಎಸಿಫ್ ಆಗಿರುವ ಪ್ರೊಬೆಷನರಿ ಐಎಫ್‌ಎಸ್ ಅಧಿಕಾರಿ ಸಿ.ಯೋಗೀಶ್ ಅವರನ್ನು ತನಿಖೆಗೆ ನಿಯೋಜಿಸಿ ಆದೇಶಿಸಿರುವುದಾಗಿ ಡಿಸಿಎಫ್ ಪ್ರಸನ್ನ ಕೃಷ್ಣ ಪಟಗಾರ ಅವರು ಬುಧವಾರ 'ಪ್ರಜಾವಾಣಿ'ಗೆ ತಿಳಿಸಿದರು.

ವೈದ್ಯರ ಸಲಹೆ ಪಡೆಯಲಾಗಿತ್ತು: ಶಿವಮೊಗ್ಗದ ದಸರಾಗೆ ಆನೆಗಳನ್ನು ಆಯ್ಕೆ ಮಾಡುವಾಗ ಸಕ್ರೆಬೈಲು ಆನೆ ಬಿಡಾರದ ವೈದ್ಯರ ಸಲಹೆ

ಶಿವಮೊಗ್ಗದಲ್ಲಿ ಸೋಮವಾರ ತಡರಾತ್ರಿ ನೇತ್ರಾವತಿ ಆನೆಗೆ ಜನಿಸಿದ ಮರಿ

ಪಡೆಯಲಾಗಿತ್ತು. ಪ್ರತಿ ಮೂರು ತಿಂಗಳಿಗೊಮ್ಮೆ ಬಿಡಾರದ ಆನೆಗಳ ಆರೋಗ್ಯ ವರದಿ ಸಿದ್ಧಪಡಿಸಲಾಗುತ್ತದೆ. ಅದರಲ್ಲೂ ನೇತ್ರಾವತಿ ಗರ್ಭಿಣಿ ಎಂಬ ಅಂಶ ಉಲ್ಲೇಖಿಸಿಲ್ಲ. ಮೈಸೂರು ದಸರಾಗೆ ಆನೆಗಳ ಆಯ್ಕೆಗೆ ನಡೆಸಿದ ಆರೋಗ್ಯ ತಪಾಸಣೆಯ ವೇಳೆಯೂ ನೇತ್ರಾವತಿ ಗರ್ಭ ಧರಿಸಿರುವುದು ಗೊತ್ತಾಗಿಲ್ಲ. ಶಿವಮೊಗ್ಗದಲ್ಲಿ ಮೂರು ದಿನಗಳ ಕಾಲ ತಾಲೀಮು ನಡೆಸಿದ್ದಾಗಲೂ ಅದರ ವರ್ತನೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿರಲಿಲ್ಲ ಎಂದು ಡಿಸಿಎಫ್ ತಿಳಿಸಿದರು.

ಅಂಬಾರಿ ಹೊರುವ ಗಂಡು ಆನೆ ಸಾಗರನ ಜೊತೆಗೆ ಎರಡು ಹೆಣ್ಣು ಆನೆಗಳನ್ನು ಆಯ್ಕೆ ಮಾಡಬೇಕಿತ್ತು. ಬಿಡಾರದಲ್ಲಿರುವ ನಾಲ್ಕು ಹೆಣ್ಣಾನೆಗಳಲ್ಲಿ ಕುಂತಿಯು ಮರಿ ಹಾಕಿದೆ. ಭಾನುಮತಿ 18 ತಿಂಗಳ ಗರ್ಭಿಣಿ. ಅಂತೆಯೇ ನೇತ್ರಾವತಿ ಹಾಗೂ ಹೇಮಾವತಿಯನ್ನು ಆಯ್ಕೆ ಮಾಡಲಾಗಿತ್ತು ಎಂದರು.

ಆದರೆ, ನೇತ್ರಾವತಿ ಗರ್ಭ ಧರಿಸಿರುವ ಕುರಿತು ಮಾಹಿತಿ ನೀಡುವುದರಲ್ಲಿ ಯಾರಿಂದ ಲೋಪ ಆಗಿದೆ ಎಂಬುದನ್ನು ಪತ್ತೆ ಮಾಡಬೇಕಿದೆ. ಆ ನಿಟ್ಟಿನಲ್ಲಿ ತನಿಖೆ ಕೈಗೊಳ್ಳಲಾಗುತ್ತಿದೆ. ಆನೆಗಳು ಗರ್ಭ ಧರಿಸಿರುವುದನ್ನು ಪತ್ತೆ ಮಾಡಲು ಸಕ್ರೆಬೈಲು ಆನೆ ಬಿಡಾರಕ್ಕೆ ಇನ್ನಷ್ಟು ಅತ್ಯಾಧುನಿಕ ಸಲಕರಣೆಗಳ ಅಗತ್ಯವಿದೆ. ಅವುಗಳನ್ನು ಒದಗಿಸಲು ಸರ್ಕಾರಕ್ಕೆ ಪತ್ರವನ್ನು ಬರೆಯುವುದಾಗಿ ಅವರು ಹೇಳಿದರು.

ಪೊಲೀಸರಿಗೂ ದೂರು

ಗರ್ಭಿಣಿ ಆನೆ ಭಾನುಮತಿ ಕಾಡಿಗೆ ಮೇಯಲು ಹೋದಾಗ ಅದರ ಬಾಲಕ್ಕೆ ಆಳವಾದ ಗಾಯ ಆಗಿರುವ ಬಗ್ಗೆ ಶಿವಮೊಗ್ಗ ಎಸಿಎಫ್ ತನಿಖೆ ನಡೆಸುತ್ತಿದ್ದು, ಪೊಲೀಸರಿಗೂ ಈ ಸಂಬಂಧ ದೂರು ನೀಡಲಾಗಿದೆ ಎಂದು ಪ್ರಸನ್ನ ಕೃಷ್ಣ ಪ್ರತಿಕ್ರಿಯಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೈಕೋರ್ಟ್ ತಾಕೀತು

ಆದೇಶ ವೆಬ್ ಹೋಸ್ಟ್ ಮಾಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅರೆನ್ಯಾಯಿಕ ಪ್ರಾಧಿಕಾರಗಳ ಅಂದಂದಿನ ವಿಷಯಗಳ ಪಟ್ಟಿ ಮತ್ತು ಪ್ರತಿ ದಿನದ ಆದೇಶಗಳನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಎಂ.ಉಮಾದೇವಿ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ಪಾಲಿಕೆ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

'ಪಾಲಿಕೆ ನಾಲ್ಕು ವಾರಗಳಲ್ಲಿ ಈ ಕುರಿತು ಯಾವ ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸಮಗ್ರ ಅನುಪಾಲನಾ ವರದಿ' ಸಲ್ಲಿಸಬೇಕು'' ಎಂದು ತಾಕೀತು ಮಾಡಿದೆ.

'ಬಿಬಿಎಂಪಿ ಮುಖ್ಯ ಆಯುಕ್ತರು, ಇ-ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಹಯೋಗದೊಂದಿಗೆ ಹೈಕೋರ್ಟ್, ಜಿಲ್ಲಾ ಹಾಗೂ ವಿಚಾರಣಾ ನ್ಯಾಯಾಲಯಗಳಲ್ಲಿರುವ ವ್ಯವಸ್ಥೆಯಂತೆ ಪ್ರತಿದಿನದ ಕಾಸ್ ಲಿಸ್ಟ್ (ವಿಷಯಗಳ ಪಟ್ಟಿ) ಮತ್ತು ಆದೇಶಗಳನ್ನು ವೆಬ್ ಹೋಸ್ಟ್ ಮಾಡಲು ಕ್ರಮ ಕೈಗೊಳ್ಳಬೇಕು. ಇತ್ತೀಚೆಗೆ ಕಂದಾಯ ಇಲಾಖೆಯೂ ತನ್ನ ಪ್ರತಿದಿನದ ಆದೇಶಗಳನ್ನು ವೆಬ್‌ಸೈಟ್‌ನಲ್ಲಿ ಲಭ್ಯವಾಗುವಂತೆ ಮಾಡಿದೆ' ಎಂದು ನ್ಯಾಯಪೀಠ ಬಿಬಿಎಂಪಿ ಗಮನ ಸೆಳೆದಿದೆ.

ಅರ್ಜಿದಾರರಿಗೆ ಸಂಬಂಧಿಸಿದ ಸ್ಥಿರಾಸ್ತಿ ವ್ಯಾಜ್ಯವೊಂದು ಪಾಲಿಕೆಯ ಅರೆ ನ್ಯಾಯಿಕ ಪ್ರಾಧಿಕಾರದ ಮುಂದೆ ವಿಚಾರಣೆಗೆ ಬಾಕಿ ಇತ್ತು. ಅರೆನ್ಯಾಯಿಕ ಪ್ರಾಧಿಕಾರದ ಅಧಿಕಾರಿ ಚುನಾವಣಾ ಕರ್ತವ್ಯದಲ್ಲಿದ್ದ ಕಾರಣ ವಿಚಾರಣೆ ಮುಂದೂಡಲಾಗಿತ್ತು. ಮುಂದಿನ ವಿಚಾರಣಾ ದಿನಾಂಕವನ್ನು ನಿಗದಿ ಮಾಡಿರಲಿಲ್ಲ. ಆದರೆ, ಅರ್ಜಿದಾರರಿಗೆ ನೋಟಿಸ್ ನೀಡದೆ ಇದೇ ವರ್ಷದ ಮೇ 26ರಂದು ಏಕಾಏಕಿ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡು ಆದೇಶ ಹೊರಡಿಸಲಾಗಿತ್ತು. ಆ ಅದೇಶವನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ದರೋಡೆ: ಆರೋಪಿಗಳ ಖುಲಾಸೆ

ಬೆಂಗಳೂರು: ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಮೂರು ಪ್ರತ್ಯೇಕ ಸರಗಳವಿನ ಹಗಲು ದರೋಡೆ ಪ್ರಕರಣದ ಇಬ್ಬರು ಆರೋಪಿಗಳನ್ನು ಹೈಕೋರ್ಟ್ ದೋಷಮುಕ್ತಗೊಳಿಸಿದೆ.

ಈ ಕುರಿತಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ ಶಾಸ್ತ್ರಿ ಹಾಗೂ ನ್ಯಾಯಮೂರ್ತಿ ಅನಿಲ್ ಬಿ. ಕಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ದರೋಡೆ ನಡೆದಿದೆ ಎಂಬುದನ್ನು ತೋರಿಸಲು ಪ್ರಾಸಿಕ್ಯೂಷನ್ ಸಮರ್ಥ-ವಾಗಿದ್ದರೂ, ಆರೋಪಿಗಳೇ ಈ ಸರಗಳವು ನಡೆಸಿದ್ದಾರೆ ಎಂಬುದನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆ. ಮೂರೂ ಪ್ರಕರಣಗಳಲ್ಲಿ ಆರೋಪಿಗಳು ಮಹಿಳೆಯರನ್ನು ಬೆದರಿಸಿ ಚಿನ್ನಾಭರಣ ದೋಚಲು ಬಳಸಿದ್ದ ಚಾಕು ಪತ್ತೆಯಾಗಿಲ್ಲ. ಹೀಗಾಗಿ, ಮೂರು ಪ್ರಕರಣಗಳಲ್ಲಿ ಸೆಷನ್ಸ್ ನ್ಯಾಯಾಲಯ ನೀಡಿರುವ ಖುಲಾಸೆಯ ತೀರ್ಪುಗಳಲ್ಲಿ ಮಧ್ಯಪ್ರವೇಶಿಸುವುದಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣಗಳೇನು?: ಆರೋಪಿಗಳಿಬ್ಬರೂ ಉತ್ತರ ಪ್ರದೇಶದ ಆಗ್ರಾ ಜಿಲ್ಲೆಯ ಫತೇಹಾಬಾದ್ ತಾಲ್ಲೂಕಿನ ಡೌಕಿ ಗ್ರಾಮದ ವಿಕ್ಕಿ ಸಿಂಗ್ (36) ಮತ್ತು ವಿಶಾಲ್ ಸಿಂಗ್ (26). ನಾಗರಬಾವಿಯ ಪಾಪರೆಡ್ಡಿಪಾಳ್ಯದಲ್ಲಿ 2013ರ ಫೆಬ್ರುವರಿ 13ರಂದು ಸುಂದರಾಂಬ, ಇದೇ ಪ್ರದೇಶದಲ್ಲಿ 2013ರ ಮಾರ್ಚ್ 1ರಂದು ಸಿ.ವಿ ಸುಬ್ಬಲಕ್ಷ್ಮಿ ಹಾಗೂ ಅನ್ನಪೂರ್ಣೇಶ್ವರಿ ನಗರದಲ್ಲಿ ಭಾಗ್ಯಮ್ಮ ಅವರು 2013ರ ಮೇ 22ರಂದು ತಮ್ಮ ಮನೆ ಮುಂದೆ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದಿದ್ದ ಈ ಇಬ್ಬರು ಚಾಕು ತೋರಿಸಿ ಸಂತ್ರ-ಸ್ತೆಯರನ್ನು ಬೆದರಿಸಿ ಚಿನ್ನದ ಮಾಂಗಲ್ಯ ಸರ ಕಳವು ಮಾಡಿದ ಆರೋಪ ಎದುರಿಸುತ್ತಿದ್ದರು.

ಗಾಂಜಾ ಬೆಳೆದ ಆರೋಪ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ರಾಮ್ ಆಶೀಸ್

ಬೆಂಗಳೂರು: ಮನೆಯಲ್ಲಿ ಗಾಂಜಾ ಗಿಡ ಬೆಳೆಸಿದ್ದ ಆರೋಪದಡಿ ರಾಮ್ ಆಶೀಸ್ (33) ಎಂಬುವವರನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೊತ್ತನೂರು ಬಳಿಯ ಭೈರತಿ ನಿವಾಸಿ ರಾಮ್ ಆಶೀಸ್, ಬಹುಮಹಡಿ ಕಟ್ಟಡದ ಮೂರನೇ ಮಹಡಿಯಲ್ಲಿ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಖಾಲಿ ಬಕೆಟ್‌ನಲ್ಲಿ ಮಣ್ಣು ಹಾಕಿದ್ದ ಆರೋಪಿ, ಅದರಲ್ಲಿ ಆರು ತಿಂಗಳಿನಿಂದ ಗಾಂಜಾ ಗಿಡ ಬೆಳೆಸುತ್ತಿದ್ದರು. ಸದ್ಯ 6 ಅಡಿಯಷ್ಟು ಗಾಂಜಾ ಗಿಡ ಬೆಳೆದಿದೆ. ಗಾಂಜಾ ಎಲೆ, ಹೂವು ಹಾಗೂ ಮೊಗ್ಗುಗಳನ್ನು ಕಿತ್ತು ಒಣಗಿಸಿ ಮಾರಾಟ ಮಾಡಲು ಯೋಚಿಸಿದ್ದ. ಈ ಮೂಲಕ ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡುವ ಕೃತ್ಯದಲ್ಲಿ ತೊಡಗಿದ್ದ.'

'ಆರೋಪಿ ಗಿಡ ಬಳಸಿದ್ದ ಬಗ್ಗೆ ಮಾಹಿತಿ ಬಂದಿತ್ತು. ಸ್ಥಳಕ್ಕೆ ಹೋಗಿ ಪರಿಶೀಲಿಸಿ, ಆರೋಪಿಯನ್ನು ವಶಕ್ಕೆ ಪಡೆಯಲಾಯಿತು. ಗಾಂಜಾ ಗಿಡ ಜಪ್ತಿ ಮಾಡಲಾಗಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳ-ಲಾಗಿದೆ' ಎಂದು ಮೂಲಗಳು ತಿಳಿಸಿವೆ.

ತುಮಕೂರು ವಿಶ್ವವಿದ್ಯಾಲಯದಲ್ಲಿ 3 ದಿನ ಆಯೋಜನೆ

27ರಿಂದ ಕನ್ನಡ ವಿಜ್ಞಾನ ಸಮ್ಮೇಳನ

ಪ್ರಜಾವಾಣಿ ವಾರ್ತೆ

ತುಮಕೂರು: 17ನೇ ಕನ್ನಡ ವಿಜ್ಞಾನ ಸಮ್ಮೇಳನ ಅ.27ರಿಂದ 29ರವರೆಗೆ ಮೂರು ದಿನಗಳ ಕಾಲ ತುಮಕೂರು ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ. ಪ್ರತಿ ವರ್ಷವೂ ಒಂದು ವಿಶ್ವವಿದ್ಯಾಲ-ಯದಲ್ಲಿ ಸಮ್ಮೇಳನ ಹಮ್ಮಿಕೊಳ್ಳುತ್ತಾ ಬಂದಿದ್ದು, ಈ ಬಾರಿ ವಿ.ವಿ ಆತಿಥ್ಯ ವಹಿಸಿಕೊಂಡಿದೆ.

ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಸಮ್ಮೇಳನ ಸಂಘಟಿಸಲಾಗಿದೆ.

ವಿಶ್ವವಿದ್ಯಾಲಯಗಳಷ್ಟೇ ಅಲ್ಲದೆ ಹೊರಗಿನವರು ವಿಜ್ಞಾನ ಕ್ಷೇತ್ರದಲ್ಲಿ ನಡೆಸಿದ ಸಂಶೋಧನೆ, ಆವಿಷ್ಕಾರ ಕುರಿತು ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಕನ್ನಡದಲ್ಲಿ ಮಾತ್ರ ಪ್ರಬಂಧ ಮಂಡನೆಗೆ ಅವಕಾಶವಿರ-ಲಿದೆ. ರೈತರು, ವಿ.ವಿ ಸಂಶೋಧಕರು ಅಲ್ಲದವರು, ಸಂಶೋಧನೆಯಲ್ಲಿ ತೊಡಗಿಸಿಕೊಂಡ ಹೊರಗಿನವರಿಗೂ ಅವಕಾಶ ನೀಡಿರುವುದು ಸಮ್ಮೇಳನದ ವಿಶೇಷವಾಗಿದೆ ಎಂದು ವಿ.ವಿ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ಪತ್ರಿಕಾ-ಗೋಷ್ಠಿಯಲ್ಲಿ ಬುಧವಾರ ಮಾಹಿತಿ ನೀಡಿದರು.

ನಾಯಿ ಕಚ್ಚಿದ್ದಕ್ಕೆ ದೂರು: ಬೈಕ್‌ಗಳಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೊತ್ತನೂರು ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ಎರಡು ದ್ವಿಚಕ್ರ ವಾಹನಗಳು ಬೆಂಕಿಯಿಂದ ಸುಟ್ಟಿದ್ದು, ನಾಯಿ ಕಚ್ಚಿದ್ದ ಪ್ರಕರಣದ ದ್ವೇಷದಿಂದ ಕೃತ್ಯ ನಡೆದಿರುವುದಾಗಿ ದೂರು ಸಲ್ಲಿಕೆಯಾಗಿದೆ.

'ವೇಣುಗೋಪಾಲಸ್ವಾಮಿ ದೇವಸ್ಥಾನದ ರಸ್ತೆಯಲ್ಲಿರುವ ಮನೆ ಎದುರು ಅ. 23ರಂದು ನಸುಕಿನಲ್ಲಿ ಎರಡು ಬೈಕ್‌ಗಳು ಬೆಂಕಿ ಹೊತ್ತಿಕೊಂಡು ಸುಟ್ಟಿವೆ. ಈ ಸಂಬಂಧ ಪುಷ್ಪಾ ಅವರು ದೂರು ನೀಡಿದ್ದಾರೆ. ಆರೋಪಿಗಳಾದ ನಂಜುಂಡಬಾಬು ಹಾಗೂ ಗೌರಮ್ಮ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ನಾಯಿಯೊಂದನ್ನು ಸಾಕಿದ್ದಾರೆ. ಅದೇ ನಾಯಿ, ಇತ್ತೀಚೆಗೆ ದೂರುದಾರರಿಗೆ ಕಚ್ಚಿತ್ತು. ಗಾಯಗೊಂಡಿದ್ದ ದೂರುದಾರರು ಚಿಕಿತ್ಸೆ ಪಡೆಯುತ್ತಿದ್ದರು. ನಾಯಿ ಕಚ್ಚಿದ್ದ ಸಂಬಂಧ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದರು. ಜೊತೆಗೆ, ಆರೋಪಿಗಳು ಹಾಗೂ ದೂರುದಾರರ ನಡುವೆ ಚೀಟಿ ವ್ಯವಹಾ-ರವಿತ್ತು. ಈ ಸಂಬಂಧವೂ ವೈಮನಸ್ಸಿಗೆ ಕಾರಣವಾಗಿತ್ತು' ಎಂದು ತಿಳಿಸಿವೆ.

'ಅ. 22ರಂದು ಚೀಟಿ ಹಣಕ್ಕೆ ಸಂಬಂಧಪಟ್ಟಂತೆ ಆರೋಪಿಗಳು ಹಾಗೂ ದೂರುದಾರರ ನಡುವೆ ಮಾತಿನ ಚಕಮಕಿ ನಡೆದಿತ್ತು. ನಾಯಿ ಕಚ್ಚಿದ್ದರಿಂದ ಚೀಟಿ ಹಣವನ್ನು ಚಿಕಿತ್ಸೆಗೆ ಬಳಸಿಕೊಂಡಿರುವುದಾಗಿ ದೂರುದಾರರು ಹೇಳಿದ್ದರು. ಆರೋಪಿಗಳು, 'ನಾಯಿ ಕಚ್ಚಿರುವ ಸಂಬಂಧ ದೂರು ನೀಡಿದವರನ್ನು ಸುಮ್ಮನೇ ಬಿಡುವುದಿಲ್ಲ' ಎಂದು ಬೆದರಿಸಿದ್ದರು. ಇದಾದ ಮರುದಿನವೇ ದ್ವಿಚಕ್ರ ವಾಹನಗಳಿಗೆ ಬೆಂಕಿ ಹಚ್ಚಿ ಸುಡಲಾಗಿದೆ.'

'ನಾಯಿ ಕಚ್ಚಿದ್ದ ಸಂಬಂಧ ದೂರು ನೀಡಿದ್ದಕ್ಕೆ ದ್ವೇಷದಿಂದ ವಾಹನಗಳನ್ನು ಸುಟ್ಟಿರುವುದಾಗಿ ದೂರುದಾರರು ಹೇಳುತ್ತಿದ್ದಾರೆ. ಆರೋಪಿಗಳ ವಿಚಾರಣೆ ನಡೆಸಿ, ಮುಂದಿನ ಕ್ರಮ ಜರುಗಿಸಲಾ-ಗುವುದು' ಎಂದು ಮೂಲಗಳು ಹೇಳಿವೆ.

ಸರಣಿ ಅಪಘಾತ: ತಾಯಿ, ಮಗ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯ ಹೊರಮಾವು ಕೆಳಸೇತುವೆ ಬಳಿ ಮಂಗಳವಾರ ಬೆಳಿಗ್ಗೆ ಸರಣಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ತಾಯಿ–ಮಗ ಮೃತಪಟ್ಟಿ-ದ್ದಾರೆ.

'ಅಶ್ವಿನಿ (29) ಹಾಗೂ ಅವರ ಮಗ ಎನ್. ಯಶ್ವಿನ್ (7) ಮೃತರು. ಅಪಘಾತದಲ್ಲಿ ಆಟೊ ಚಾಲಕ, ಇಬ್ಬರು ಪ್ರಯಾಣಿಕರು ಗಾಯಗೊಂಡಿದ್ದಾರೆ' ಎಂದು ಬಾಣಸವಾಡಿ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ನರೇಶ್ ಅವರು ಪತ್ನಿ ಅಶ್ವಿನಿ ಹಾಗೂ ಮಗ ಯಶ್ವಿನ್ ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ನರೇಶ್ ಅವರೂ ಗಾಯಗೊಂಡಿದ್ದಾರೆ' ಎಂದು ತಿಳಿಸಿದರು.

'ಹೊರಮಾವು ಕೆಳಸೇತುವೆ ಬಳಿಯ ತಂಗುದಾಣದಲ್ಲಿ ಬಿಎಂಟಿಸಿ ಬಸ್ ನಿಂತಿತ್ತು. ಇದೇ ಮಾರ್ಗವಾಗಿ ಹೊರಟಿದ್ದ ಆಟೊ, ಬಸ್‌ಗೆ ಡಿಕ್ಕಿ ಹೊಡೆದಿತ್ತು. ಹಿಂದೆಯೇ ಅತೀ ವೇಗವಾಗಿ ಬರುತ್ತಿದ್ದ ಸರಕು ಸಾಗಣೆ ವಾಹನ, ಆಟೊಗೆ ಗುದ್ದಿತ್ತು. ನಂತರ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು.'

'ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ನರೇಶ್ ಹಾಗೂ ಪತ್ನಿ–ಮಗ, ರಸ್ತೆಗೆ ಬಿದ್ದಿದ್ದರು. ತೀವ್ರ ಗಾಯಗೊಂಡಿದ್ದ ಮಗ ಯಶ್ವಿನ್ ಸ್ಥಳದಲ್ಲೇ ಮೃತಪಟ್ಟ. ತಾಯಿ ಅಶ್ವಿನಿ ಅವರನ್ನು ಆಸ್ಪತ್ರೆಗೆ ಕರೆ-ದೊಯ್ಯಲಾಗಿತ್ತು. ಅವರು ಅಲ್ಲಿಯೇ ಅಸುನೀಗಿದರು. ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಎಲ್ಲ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ರೈಲು ಹರಿದು ವ್ಯಕ್ತಿ ಸಾವು

ಬೆಂಗಳೂರು: ರಾಮಪುರ ಗೇಟ್ ಬಳಿ ರೈಲು ಹರಿದು ರಾಮು (40) ಅವರು ಮೃತಪಟ್ಟಿದ್ದು, ಈ ಸಂಬಂಧ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹೆಬ್ಬಗೋಡಿ ನಿವಾಸಿ ರಾಮು, ಮಂಗಳವಾರ ರಾತ್ರಿ ಸ್ನೇಹಿತರ ಜೊತೆ ಪಾರ್ಟಿ ಮಾಡಲು ರಾಮಪುರ ರೈಲು ಗೇಟ್ ಬಳಿ ಹೋಗಿದ್ದರೆಂದು ಗೊತ್ತಾಗಿದೆ. ಇದೇ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಮು ಹಾಗೂ ಸ್ನೇಹಿತರು, ಹಳಿಯಿಂದ 20 ಮೀಟರ್ ಅಂತರದ-ಲ್ಲಿರುವ ಜಾಗದಲ್ಲಿ ಕುಳಿತು ಮದ್ಯ ಕುಡಿದಿದ್ದರು. ಮದ್ಯದ ಅಮಲಿನಲ್ಲಿದ್ದ ರಾಮು, ಮೂತ್ರ ವಿಸರ್ಜನೆ ಮಾಡಲೆಂದು ಹಳಿ ಬಳಿ ಹೋಗಿದ್ದರು. ಇದೇ ಸಂದರ್ಭದಲ್ಲಿ ರೈಲು ಬರುತ್ತಿತ್ತು. ಅದೇ ರೈಲಿಗೆ ಸಿಲುಕಿ ರಾಮು ಮೃತಪಟ್ಟಿರು-ವುದಾಗಿ ಗೊತ್ತಾಗಿದೆ' ಎಂದು ತಿಳಿಸಿವೆ.

'ಘಟನೆ ಬಳಿಕ ಸ್ನೇಹಿತರು ಸ್ಥಳದಿಂದ ಪರಾರಿಯಾಗಿದ್ದಾರೆ. ಹಳಿ ಸಮೀಪದಲ್ಲಿ ಮದ್ಯದ ಬಾಟಲಿಗಳು ಹಾಗೂ ಚಪ್ಪಲಿಗಳು ಸಿಕ್ಕಿವೆ. ಸ್ನೇಹಿತರನ್ನು ಪತ್ತೆ ಮಾಡಿ ಹೇಳಿಕೆ ಪಡೆದ ನಂತರ, ಸಾವಿನ ಬಗ್ಗೆ ನಿಖರ ಮಾಹಿತಿ ತಿಳಿಯಲಿದೆ' ಎಂದು ಹೇಳಿವೆ.

ಮೈಸೂರಿನ ಮೊದಲನೆಯದು, 350ಕ್ಕೂ ಹೆಚ್ಚು ಪ್ರಭೇದದ ಸಸ್ಯ

ಲಿಂಗಾಂಬುಧಿ ಸಸ್ಯವಿಜ್ಞಾನ ತೋಟ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ರಾಮಕೃಷ್ಣ ನಗರದ ಲಿಂಗಾಂಬುಧಿ ಸಸ್ಯವಿಜ್ಞಾನ ತೋಟವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಉದ್ಘಾಟಿಸಿದರು.

ಬ್ಯಾಟರಿಚಾಲಿತ ವಾಹನದಲ್ಲಿ ತೋಟವನ್ನು ಒಂದು ಸುತ್ತು ಹಾಕಿದ ಸಿದ್ದರಾಮಯ್ಯ, ಅಲ್ಲಿ ಬೆಳೆದಿರುವ ವೈವಿಧ್ಯಮಯ ಗಿಡ ಮರಗಳನ್ನು ಕಂಡು ಅಚ್ಚರಿ ವ್ಯಕ್ತಪಡಿಸಿದರು.

ಅಲ್ಲೇ ಬೆಳೆದು ಪ್ರಾತ್ಯಕ್ಷಿಕೆಗೆ ಇಡಲಾಗಿದ್ದ ನಾನಾ ಜಾತಿಯ ಹಣ್ಣುಗಳನ್ನು ವೀಕ್ಷಿಸಿದರು. ಉದ್ಯಾನದಲ್ಲಿ ಬೆಳೆದು ಸಂರಕ್ಷಣೆ ಮಾಡಿರುವ ಅಳಿವಿನಂಚಿನಲ್ಲಿರುವ ಹಾಗೂ ಜಿಐ ಟ್ಯಾಗ್ ಹೊಂದಿರುವ ನಂಜನಗೂಡು ರಸಬಾಳೆಯನ್ನು ಸವಿದು ಖುಷಿಪಟ್ಟರು. ಜತೆಯಲ್ಲಿದ್ದ ವಿಧಾನಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರಿಗೌಡ ಅವರಿಗೂ ಬಾಳೆ ಹಣ್ಣು ನೀಡಿದರು.

ಮೈಸೂರು ವೀಳ್ಯದೆಲೆಯ ರುಚಿ ನೋಡಿ, 'ನಮ್ಮ ಸರ್ಕಾರ ನೀಡಿರುವ ಅನುದಾನ ಬಳಕೆ ಮಾಡಿಕೊಂಡು ಈ ಅಪರೂಪದ ಪಾರಂಪರಿಕ ಬೆಳೆಗಳನ್ನು ಸಂರಕ್ಷಿಸಿ' ಎಂದು ಸಲಹೆ ನೀಡಿದರು.

ಮೈಸೂರಿನ ಲಿಂಗಾಂಬುಧಿ ಸಸ್ಯವಿಜ್ಞಾನ ತೋಟದ ನೋಟ –ಪ್ರಜಾವಾಣಿ ಚಿತ್ರ

ಈ ಮಾದರಿಯ ಬೆಳೆಗಳನ್ನು ಹೆಚ್ಚು ರೈತರು ಬೆಳೆಯುವಂತೆ ಪ್ರೋತ್ಸಾಹಿಸ-ಬೇಕು. ಅದಕ್ಕೆ ಬೇಕಾದ ಸಬ್ಸಿಡಿಗಳನ್ನು ಇಲಾಖೆ ಒದಗಿಸಬೇಕು ಎಂದು ಸೂಚಿಸಿದರು.

ಏನಿದರ ವಿಶೇಷ?: ಮೈಸೂರಿನ ಮೊದಲ ಸಸ್ಯವಿಜ್ಞಾನ ತೋಟ ಎಂಬ ಕೀರ್ತಿ ಇದರದ್ದು. ತೋಟಗಾರಿಕೆ ಇಲಾಖೆಯು ಅಭಿವೃದ್ಧಿಪಡಿಸಿರುವ ಈ ತೋಟವು ಒಟ್ಟು 15 ಎಕರೆ ವಿಸ್ತೀರ್ಣ ಹೊಂದಿದೆ. 2012ರಲ್ಲಿ ಕಾಮಗಾರಿ ಆರಂಭಗೊಂಡಿತ್ತು. 2023ರಲ್ಲಿ ಪೂರ್ಣಗೊಂಡಿದೆ. ಇದಕ್ಕಾಗಿ ಇಲಾಖೆಯು ₹5.60 ಕೋಟಿ ವ್ಯಯಿಸಿದೆ.

350ಕ್ಕೂ ಹೆಚ್ಚು ಸಸ್ಯ ಪ್ರಭೇದಗಳು ಇಲ್ಲಿವೆ. ದೇಶ ವಿದೇಶದ ಸಸ್ಯ ಪ್ರಭೇದಗಳ ಪರಿಚಯ, ಸ್ಥಳೀಯ ವಾತಾವರಣಕ್ಕೆ ಒಗ್ಗಿಸುವಿಕೆ, ಸಂರಕ್ಷಣೆ, ಸಸ್ಯಾಭಿವೃದ್ಧಿ ಮತ್ತು ಪ್ರಸರಣ ಕೈಗೊಳ್ಳುವುದು ಇದರ ಉದ್ದೇಶವಾಗಿದೆ. ಆಕರ್ಷಕ ಗುಲಾಬಿ ತಾಕು, ತಾವರೆ ಕೊಳ, ರೆಡ್‌ಜೇಡ್ ವೈನ್ ಲತಾಗೃಹ, ಚಿಟ್ಟೆ ವನ, ಸೌಗಂಧಿಕಾ ವನ, ಕಲ್ಯಾಣಿ ಮೊದಲಾದ ಆಕರ್ಷಣೀಯ ತಾಣಗಳು ಇಲ್ಲಿವೆ.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ರವಿಶಂಕರ್, ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮೇಯರ್ ಶಿವಕುಮಾರ್, ಉಪ ಮೇಯರ್ ಡಿ.ರೂಪಾ, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿ.ಪಂ. ಸಿಇಒ ಕೆ.ಎಂ ಗಾಯಿತ್ರಿ ಇದ್ದರು.

ಸದ್ಯಕ್ಕಿಲ್ಲ ಪ್ರವೇಶ

ಕಳೆದ ವರ್ಷ ಸೆಪ್ಟೆಂಬರ್‌ನಲ್ಲೇ ಇದರ ಉದ್ಘಾಟನೆಗೆ ಸಿದ್ಧತೆ ನಡೆದಿತ್ತು. ಅದಾದ ವರ್ಷದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಆದಾಗ್ಯೂ ಸದ್ಯ ಇಲ್ಲಿಗೆ ಸಾರ್ವಜನಿಕರಿಗೆ ಪ್ರವೇಶವಿಲ್ಲ. ಸಾರ್ಜನಿಕರಿಗೆ ಮುಕ್ತ ಪ್ರವೇಶದ ಕುರಿತು ಇನ್ನಷ್ಟೇ ತೀರ್ಮಾ-ನಿಸಬೇಕಿದೆ. ವಿದ್ಯಾರ್ಥಿಗಳು, ಸಂಶೋಧಕರು ಸೇರಿದಂತೆ ಆಸಕ್ತರಿಗೆ ಮಾತ್ರ ಇಂತಿಷ್ಟು ಶುಲ್ಕ ವಿಧಿಸಿ ಪ್ರವೇಶ ನೀಡುವ ಕುರಿತೂ ಚರ್ಚೆ ನಡೆದಿದೆ.

ಉದ್ಯಾನವು ತೆರೆಯುವ ಅವಧಿ ಹಾಗೂ ಸಾರ್ವಜನಿಕರ ಪ್ರವೇಶದ ಕುರಿತು ಜಿಲ್ಲಾಡಳಿತದ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

ಬೆಂಗಳೂರು, ಮಂಡ್ಯ, ಮೈಸೂರಿನಲ್ಲಿ ನಿರಾತಂಕವಾಗಿ ನಡೆಯುತ್ತಿದೆ ದಂಧೆ

200 ಹೆಣ್ಣು ಭ್ರೂಣ ಗರ್ಭಪಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರ್ಭಿಣಿಯರನ್ನು ಅಕ್ರಮವಾಗಿ ಸ್ಕ್ಯಾನಿಂಗ್‌ಗೆ ಒಳಪಡಿಸಿ ಭ್ರೂಣ ಲಿಂಗ ಪತ್ತೆ ಮಾಡಿ ಹೆಣ್ಣುಭ್ರೂಣದ ಗರ್ಭಪಾತ ಮಾಡುತ್ತಿದ್ದ ಜಾಲವನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಭೇದಿಸಿದ್ದು, ಈ ಸಂಬಂಧ ನಾಲ್ವರನ್ನು ಬಂಧಿಸಿದ್ದಾರೆ.

'ಮೈಸೂರಿನ ವಸಂತನಗರದ ನಿವಾಸಿ ಶಿವಲಿಂಗೇಗೌಡ ಅಲಿಯಾಸ್ ಶಿವು (50), ಮಂಡ್ಯ ಜಿಲ್ಲೆ ಕೂಳೇನ ಹಳ್ಳಿಯ ನಯನ್ ಕುಮಾರ್(36), ಪಾಂಡವಪುರ ತಾಲ್ಲೂಕಿನ ಸುಂಕದ ನೂರಿನ ನವೀನ್‌ಕುಮಾರ್ ಹಾಗೂ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಕ್ಯಾಸಿನಕೆರೆಯ ಟಿ.ಎಂ. ವೀರೇಶ್ ಬಂಧಿತರು. ಪ್ರಮುಖ ಆರೋಪಿಗಳಾದ ಡಾ. ಮಲ್ಲಿಕಾರ್ಜುನ್, ಸುನಂದಾ ಹಾಗೂ ಇತರರ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ ಸೇರಿ ಹಲವು ಜಿಲ್ಲೆಗಳಲ್ಲಿ ಮೂರು ವರ್ಷಗಳಿಂದ ಈ ಜಾಲ ಸಕ್ರಿಯವಾಗಿತ್ತು. ಇದುವರೆಗೂ 650ಕ್ಕೂ ಹೆಚ್ಚು ಭ್ರೂಣ ಲಿಂಗ ಪತ್ತೆ ಮಾಡಿರುವ ಜಾಲ, 150 ರಿಂದ 200 ಹೆಣ್ಣು ಭ್ರೂಣ ಗರ್ಭಪಾತ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಮತ್ತಷ್ಟು ಮಾಹಿತಿ ಕಲೆ ಹಾಕಲು, ಬಂಧಿತ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಹೇಳಿದರು.

'ಪ್ರಮುಖ ಆರೋಪಿ ಡಾ. ಮಲ್ಲಿಕಾರ್ಜುನ್, ಈ ಹಿಂದೆಯೇ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಈತನ ಸಂಬಂಧಿ ವೀರೇಶ್, ಇತ್ತೀಚಿನ ದಿನಗಳಲ್ಲಿ ಪುನಃ ಹೆಣ್ಣು ಭ್ರೂಣ ಪತ್ತೆ ಕೆಲಸಕ್ಕೆ ಇಳಿದಿದ್ದ. ಇದಕ್ಕೆ ಹಲವರು ಸಹಕಾರ ನೀಡಿದ್ದರು. ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗರ್ಭಪಾತ ಮಾಡಿರುವ ಶಂಕೆ ಇದೆ' ಎಂದು ಅವರು ತಿಳಿಸಿದರು.

ಬೆನ್ನಟ್ಟಿ ಹಿಡಿದ ಪೊಲೀಸರು: 'ಬೈಯಪ್ಪನಹಳ್ಳಿ ಠಾಣೆಯ ಪೊಲೀಸರು, ಅ. 15ರಂದು ಮಧ್ಯಾಹ್ನ ಹಳೇ ಮದ್ರಾಸ್ ರಸ್ತೆಯಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಇದೇ ಮಾರ್ಗದಲ್ಲಿ ಕಾರು ಹೊರಟಿತ್ತು. ನಿಲ್ಲಿಸುವಂತೆ ಪೊಲೀಸರು ಕೈ ಮಾಡಿದ್ದರು. ಆದರೆ, ಚಾಲಕ ಕಾರು ನಿಲ್ಲಿಸಿರಲಿಲ್ಲ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕಾರಿನ ಬಗ್ಗೆ ಅನುಮಾನಗೊಂಡ ಪೊಲೀಸರು, ದ್ವಿಚಕ್ರ ವಾಹನದಲ್ಲಿ ಬೆನ್ನಟ್ಟಿದ್ದರು. ಎನ್‌ಜಿಇಎಫ್ ವೃತ್ತದಲ್ಲಿ ಕಾರು ಅಡ್ಡಗಟ್ಟಿದ್ದರು. ಕಾರಿನಲ್ಲಿದ್ದ ಶಿವಲಿಂಗೇಗೌಡ ಹಾಗೂ ನಯನ್ ಕುಮಾರ್ ಅವರನ್ನು ವಶಕ್ಕೆ ಪಡೆದಿದ್ದರು. ಕಾರಿನಲ್ಲಿ ಗರ್ಭಿಣಿ ಸಹ ಇದ್ದರು' ಎಂದು ತಿಳಿಸಿದರು.

ಮುಖ್ಯಾಂಶಗಳು

- ಭ್ರೂಣ ಪತ್ತೆ, ಗರ್ಭಪಾತಕ್ಕೆ ತಲಾ ₹ 15 ಸಾವಿರದಿಂದ ₹ 20 ಸಾವಿರ
- ಪ್ರತಿ ತಿಂಗಳು ಗರಿಷ್ಠ 20 ಗರ್ಭಿಣಿಯರ ಭ್ರೂಣ ಲಿಂಗ ಪತ್ತೆ
- ಜಾಮೀನಿನ ಮೇಲಿದ್ದ ವೈದ್ಯನಿಂದಲೇ ದಂಧೆ

ಆಲೆಮನೆಯಲ್ಲಿ ಸ್ಕ್ಯಾನಿಂಗ್ ಕೇಂದ್ರ!

'ಮಂಡ್ಯ- ಪಾಂಡವಪುರ ರಸ್ತೆಯಲ್ಲಿದ್ದ ಆಲೆಮನೆಯೊಂದರಲ್ಲಿ ಸ್ಕ್ಯಾನಿಂಗ್ ಯಂತ್ರ ಇರಿಸಲಾಗಿತ್ತು. ಆಲೆಮನೆಗೆ ಗರ್ಭಿಣಿಯರನ್ನು ಕರೆಸಿ ಸ್ಕ್ಯಾನಿಂಗ್ ಮಾಡುತ್ತಿದ್ದರು. ಗಂಡು ಅಥವಾ ಹೆಣ್ಣು ಎಂಬುದು ತಿಳಿಯುತ್ತಿತ್ತು. ಕೆಲವರು, ಹೆಣ್ಣು ಭ್ರೂಣವೆಂದು ಗೊತ್ತಾಗುತ್ತಿದ್ದಂತೆ ಗರ್ಭಪಾತ ಮಾಡಿಸುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

'ಆಲೆಮನೆ ಮೇಲೂ ದಾಳಿ ಮಾಡಿ ಯಂತ್ರ ಜಪ್ತಿ ಮಾಡಲಾಗಿದೆ. ದಾಳಿ ವೇಳೆ, ಆಲೆಮನೆಯಲ್ಲಿ ನಾಲ್ವರು ಗರ್ಭಿಣಿಯರು ಇದ್ದರು. ಅವರಿಗೂ ಬುದ್ಧಿವಾದ ಹೇಳಿ ಸಂಬಂಧಿಕರೊಂದಿಗೆ ಕಳುಹಿಸಲಾಗಿದೆ' ಎಂದು ಅಧಿಕಾರಿ ಹೇಳಿದರು.

'ಪ್ರತಿ ತಿಂಗಳು ಎರಡು ದಿನ (ಶುಕ್ರವಾರ ಅಥವಾ ಶನಿವಾರ) ಮಾತ್ರ ಆರೋಪಿಗಳು ಸ್ಕ್ಯಾನಿಂಗ್ ಮಾಡುತ್ತಿದ್ದರು. ಡಾ. ಮಲ್ಲಿಕಾರ್ಜುನ್ ಹಾಗೂ ಇತರರು, ಸ್ಕ್ಯಾನಿಂಗ್ ಕೇಂದ್ರದಲ್ಲಿ ಹಾಜರಿರುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಿಧನ ವಾರ್ತೆ

ಲಿಂಗಪ್ಪ

ಬೆಂಗಳೂರು: ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಕಾರ್ಯಾಧ್ಯಕ್ಷ ಲಿಂಗಪ್ಪ (93) ಮಂಗಳವಾರ ರಾತ್ರಿ ನಿಧನರಾದರು. ಇವರು ಜಯನಗರ ಮಾಧವನ್ ಪಾರ್ಕ್ ಬಳಿಯ ನಿವಾಸಿ. ನಿವೃತ್ತ ಎಂಜಿನಿಯರ್ ಲಿಂಗಪ್ಪ ಅವರು ಶ್ರೀನಗರ ನರ್ಸಿಂಗ್ ಹೋಂ ಆರಂಭಿಸಿದ್ದರು. ಶ್ರೀನಗರ ಎಜುಕೇಶನ್ ಫೌಂಡೇಶನ್ ಸಂಸ್ಥಾಪಕರಾಗಿದ್ದರು. ಅವರಿಗೆ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರಾ ತಾಲ್ಲೂಕು ಹಲಕೂರಿನಲ್ಲಿ (ಕರ್ನಾಟಕದ ಗಡಿ) ಗುರುವಾರ ಬೆಳಿಗ್ಗೆ 11ಕ್ಕೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕಡತ ಕಾಣೆ ಪ್ರಕರಣ: ಬಿಜೆಪಿ, ಕಾಂಗ್ರೆಸ್ ಜಟಾಪಟಿ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾನಗರ ಪಾಲಿಕೆಯಲ್ಲಿ ಆಸ್ತಿಕರ ಪರಿಷ್ಕರಣೆ ಕಡತ ಕಾಣೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ಜಟಾಪಟಿ ತಾರಕಕ್ಕೇರಿದೆ. ಪಾಲಿಕೆ ಆವರಣ ಬುಧವಾರ ಇಡೀ ದಿನ ಪ್ರತಿಭಟನೆ ನಡೆಯಿತು.

'ಮಹಾನಗರ ಪಾಲಿಕೆಯಲ್ಲಿ ಪರಿಶಿಷ್ಟ ಸಮುದಾಯದ ಅಧಿಕಾರಿಗಳಿಗೆ ಶಾಸಕ ಅಭಯ ಪಾಟೀಲ ಮತ್ತು ಮೇಯರ್ ಶೋಭಾ ಸೋಮನಾಚೆ ಅವರು ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

'ಕಡತ ಕಾಣೆ ಪ್ರಕರಣದಲ್ಲಿ ಶಾಸಕ ಅಭಯ ಪಾಟೀಲ ಹಾಗೂ ಮೇಯರ್ ಶೋಭಾ ಅವರ ಕೈವಾಡವಿದೆ. ಆದರೆ, ಅದನ್ನು ಪಾಲಿಕೆ ಆಯುಕ್ತರ ಮೇಲೆ ಹಾಕಿದ್ದಾರೆ. ಇದನ್ನು ತನಿಖೆ ಮಾಡುವಂತೆ ಕೇಂದ್ರ ಲೋಕಸೇವಾ ಆಯೋಗ ಸೇರಿ ಕೇಂದ್ರದ ವಿವಿಧ ಏಜೆನ್ಸಿಗಳಿಗೆ ಮನವಿ ಬರೆದಿದ್ದಾರೆ. ಇದು ಅಕ್ಷಮ್ಯ' ಎಂದು ಮುಖಂಡ ಮಲ್ಲೇಶ ಚೌಗಲೆ ದೂರಿದರು.

'ದೊಡ್ಡಮಟ್ಟದ ಭ್ರಷ್ಟಾಚಾರ, ಹಗರಣ ನಡೆದಿದ್ದರೆ ತನಿಖೆಗೆ ಕೇಂದ್ರ ಸರ್ಕಾರಕ್ಕೆ ಕೋರಬಹುದು. ಆದರೆ, ಕಡತದ ವಿಚಾರ ಚಿಕ್ಕದು. ಇದರ ತನಿಖೆಯನ್ನು ಪೌರಾಡಳಿತ ಇಲಾಖೆ ಅಥವಾ ಸಿಐಡಿ ಮೂಲಕ ಮಾಡಿಸಬೇಕು. ಆಯುಕ್ತರಿಗೆ ಕಿರುಕುಳ ನೀಡಲು, ಅವರ ಬಡ್ತಿ ತಡೆಯುವ ಹುನ್ನಾರದಿಂದ ಶಾಸಕ ಹಾಗೂ ಬಿಜೆಪಿ ಪಾಳೆಯದ ಸದಸ್ಯರು ಈ ಅಡ್ಡ ದಾರಿ ಹಿಡಿದಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಕಿಡಿಕಾರಿದರು.

'ಪಾಲಿಕೆ ಆಡಳಿತ ಅಸ್ತಿತ್ವಕ್ಕೆ ಬಂದು ಆರೇ ತಿಂಗಳಾಗಿದೆ. ಸೂಪರ್‌ಸೀಡ್ ಮಾಡಬೇಕು ಎಂಬ ಉದ್ದೇಶ ನಮಗೇನೂ ಇಲ್ಲ. ಆದರೆ, ಸಣ್ಣ ವಿಚಾರ ಹಿಡಿದು ಅಭಯ ಪಾಟೀಲ ರಾಜಕೀಯ ತಂಟೆ ಶುರು ಮಾಡಿದ್ದಾರೆ' ಎಂದರು.

ಕುಕ್ಕೆ: ದೇವರ ದರ್ಶನ ಸಮಯದಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಚಂದ್ರ ಗ್ರಹಣದ ಕಾರಣ ಶನಿವಾರ (ಅ. 28) ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ದೇವರ ದರ್ಶನದ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ.

ಅಂದು ರಾತ್ರಿಯ ಮಹಾಪೂಜೆಯು ಸಂಜೆ 6.30ಕ್ಕೆ ನಡೆಯಲಿದ್ದು ಆನಂತರ ದೇವರ ದರ್ಶನ ಇರುವುದಿಲ್ಲ.

ಸಂಜೆ ಆಶ್ಲೇಷ ಬಲಿ ಸೇವೆ ಹಾಗೂ ರಾತ್ರಿ ಪ್ರಸಾದ ಭೋಜನ ಇರುವುದಿಲ್ಲ ಎಂದು ದೇವಳದ ಪ್ರಕಟಣೆ ತಿಳಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560040.

ಸಂಖ್ಯೆ: ಕಾಅ(ವಿನ)/ಸಅ/ಟೆಂಡರ್/06/2023-24 ದಿನಾಂಕ: 25-10-2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು ಈ ಕೆಳಗೆ ಪಟ್ಟಿ ಮಾಡಿರುವ ಕಾಮಗಾರಿಗಳನ್ನು ಕೈಗೊಳ್ಳಲು ಜಿ.ಓ. ಸಂಖ್ಯೆ ಯುಡಿಡಿ/299/ಎಂಎನ್‌ವೈ/2022 (ಇ) ಬೆಂಗಳೂರು, ದಿನಾಂಕ: 07-10-2023 ರ ಅನುಸಾರ ತಾತ್ವಿಕ ಅನುಮೋದನೆ ನೀಡಿದೆ ಮತ್ತು ಬಜೆಟ್ ಮಂಜೂರು ಮಾಡಿದೆ. ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ4)**

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 122, ಕೆ.ಪಿ. ಅಗ್ರಹಾರ ಮತ್ತು ವಾರ್ಡ್ ಸಂಖ್ಯೆ. 123, ವಿಜಯನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **ಪ್ಯಾಕೇಜ್ – 01 (6 ಕಾಮಗಾರಿಗಳು)**	1000.00	ರೂ. 10,00,000/- (ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 9,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)
2	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 124, ಹೊಸಹಳ್ಳಿ ಮತ್ತು ವಾರ್ಡ್ ಸಂಖ್ಯೆ. 134, ಬಾಪೂಜಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **ಪ್ಯಾಕೇಜ್ – 02 (7 ಕಾಮಗಾರಿಗಳು)**	800.00	ರೂ. 8,00,000/- (ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 7,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)
3	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132, ಅತ್ತಿಗುಪ್ಪೆ ಮತ್ತು ವಾರ್ಡ್ ಸಂಖ್ಯೆ. 133, ಹಂಪಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು ಮತ್ತು ವಾರ್ಡ್ ಸಂಖ್ಯೆ. 133 ಇಲ್ಲಿ ಬಿಬಿಎಂಪಿ ಕಟ್ಟಡದ ನವೀಕರಣ. **ಪ್ಯಾಕೇಜ್ – 03 (6 ಕಾಮಗಾರಿಗಳು)**	800.00	ರೂ. 8,00,000/- (ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 7,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)
4	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 157, ಗಾಳಿ ಆಂಜನೇಯ ಟೆಂಪಲ್ ಮತ್ತು ವಾರ್ಡ್ ಸಂಖ್ಯೆ. 158, ದೀಪಾಂಜಲಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **ಪ್ಯಾಕೇಜ್ – 04 (6 ಕಾಮಗಾರಿಗಳು)**	900.00	ರೂ. 9,00,000/- (ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 8,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)
5	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132 ರಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣ ಹಾಗೂ ವಿಜಯನಗರ ವಿಧಾನಸಭಾ ಕ್ಷೇತ್ರದ ಪಾರ್ಕ್‌ಗಳಲ್ಲಿ ಆಟದ ಮೈದಾನ ಸುಧಾರಣೆಗಳು ಮತ್ತು ವಾಚ್‌ಮೆನ್ ಶೆಡ್‌ಗಳು, ಮಕ್ಕಳ ಆಟದ ಸಲಕರಣೆಗಳು, ಜಿಮ್ ಸಲಕರಣೆಗಳ ನಿರ್ಮಾಣ ಹಾಗೂ ಇತರೆ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳು, ಎಲ್‌ಇಡಿ ಸ್ಟ್ರೀಟ್ ಲೈಟ್‌ಗಳ ಒದಗಿಸುವಿಕೆ. **ಪ್ಯಾಕೇಜ್ – 05**	500.00	ರೂ. 5,00,000/- (ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 4,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ದಿನಾಂಕ: **10-11-2023 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **16-11-2023 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), ಬಿಬಿಎಂಪಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011 ಇಲ್ಲಿ ನಡೆಯುತ್ತದೆ.** 3) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **15-11-2023 ರಂದು 17.00 ಗಂಟೆವರೆಗೆ.** 4) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **20-11-2023 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **21-11-2023 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-6//2023-24 ದಿನಾಂಕ: 25-10-2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಹಾಗೂ ದಸರಾ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಬೆಳಗ್ಗೆ 11.25 ಗಂಟೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಬೆಳಗ್ಗೆ 11.30 ಗಂಟೆ ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1	3 ಸಂಖ್ಯೆ	13.64	27-10-2023	10-11-2023	13-11-2023
2	Kw-2	1 ಸಂಖ್ಯೆ	34.50	27-10-2023	10-11-2023	13-11-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು
ನೀಸ&ಒಚ(ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ರಾಮನಗರ ಜಿಲ್ಲಾ ಪಂಚಾಯತ್

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ರಾಮನಗರ ವಿಭಾಗ, ರಾಮನಗರ

ಸಂಖ್ಯೆ: 08/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ-1/ಜೆಜೆಎಂ/1431//2023-24/7ನೇ ಕರೆ ದಿನಾಂಕ: 25-10-2023

ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀನ ಪ್ರದೇಶದಲ್ಲಿ **JJM ಯೋಜನೆಯಡಿಯಲ್ಲಿ** ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ನಿರ್ವಹಿಸಲು ವಿವರಗಳು ಈ ಕೆಳಕಂಡಂತಿವೆ:

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 82.64 ಲಕ್ಷಗಳು,** ಇಎಂಡಿ ಮೊತ್ತ: **ರೂ. 1,65,000/-.** 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 51.63 ಲಕ್ಷಗಳು,** ಇಎಂಡಿ ಮೊತ್ತ: **ರೂ. 1,03,000/-.** 3) ಕಾಲಾವಧಿ: **06 ತಿಂಗಳು.** 4) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 09-11-2023 ರಂದು ಸಂಜೆ 5.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 11-11-2023 ರಂದು ಬೆಳಿಗ್ಗೆ 11.00 ಗಂಟೆಯ ನಂತರ.** 6) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 16-11-2023 ರಂದು ಬೆಳಿಗ್ಗೆ 11.00 ಗಂಟೆಯ ನಂತರ.**

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಈ ಕಚೇರಿಯ ಇಲಾಖೆ / ವೆಬ್‌ಸೈಟ್ **https://kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ

DIPR/CP/242/Manipal/2023-24

ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ. ಸರ್ಕಾರಿ ವಸತಿ ಪಾಠಶಾಲೆ ಕಟ್ಟಡ, ಸರ್ಕಾರಿ ವಿಜ್ಞಾನ ಕಾಲೇಜು ಎದುರು, ಚಿತ್ರದುರ್ಗ-577501

Ph:- 08194-295954 e-mail:- ddswdcta@gmail.com

ಸಂ:ಉನಿ/ಸಕಇ/ಚಿದು/ಹೊ.ಸಂ.ಟೆಂಡರ್-2/ಸಿಆರ್-01/2023-24 ದಿ:-21.10.2023

ಟೆಂಡರ್ ಪ್ರಕಟಣೆ

2023-24ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಕಛೇರಿ, ವಿದ್ಯಾರ್ಥಿನಿಲಯ ಹಾಗೂ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ/ ಡಾ॥ಬಿ.ಆರ್. ಅಂಬೇಡ್ಕರ್/ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯ ಮೂಲಕ ಪಡೆಯಲು ಇ-ಪ್ರಕ್ಯೂರಮೆಂಟ್ ಮೂಲಕ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ವಿವರ ಈ ಕೆಳಕಂಡಂತಿದೆ. (1) ಟೆಂಡರ್ ಸಂಖ್ಯೆ: SWD/2023-24/SE0037 Date:- 21-10-2023 (2) ಟೆಂಡರ್ ಅಂದಾಜು ಮೊತ್ತ ರೂ: 17,29,61,000/- (3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 21-10-2023 (4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 06-11-2023 / 5.00 pm (5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: 08-11-2023 / 11.00 am (6) ಆರ್ಥಿಕ ಲಕೋಟೆ ತೆರೆಯುವ ದಿನಾಂಕ:- 09-11-2023 / 11.00 am (7) ಇ.ಎಂ.ಡಿ. ಮೊತ್ತ ರೂ. 34,59,000/-

DIPR/CTA/KSMCA/293/2023-24

ಸಹಿ/- ಉಪನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಚೇರಿ (ಯೋಜನೆ)
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ:ಬೆಂಜಮಂ/ಮುಅ(ಯೋಜನೆ)/ಅಮುಅ(ಕೇಂ.ಉ&ಡಿಸಿಡಬ್ಲ್ಯೂ)/ತಾಂಸ/1060/2023-24 ದಿ:25.10.2023

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಪ್ರತಿಷ್ಠಿತ ತಯಾರಕರು/ಅಧಿಕೃತ ಡೀಲರ್‌ಗಳಿಂದ ಐ.ಎಸ್:779/1994 ಮತ್ತು ಐ.ಎಸ್.ಓ:4064/2014 ಗೆ ಅನುಗುಣವಾಗುವಂತೆ MID ಪ್ರಮಾಣೀಕರಿಸಿದ 35,000 ಸಂಖ್ಯೆಗಳ 15ಎಂಎಂ ಡಯಾ ಮಲ್ಟಿ ಜೆಟ್ ಕ್ಲಾಸ್ 'ಬಿ' ಮ್ಯಾಗ್ನೆಟಿಕ್ ಟೈಪ್ ವಾಟರ್ ಮೀಟರ್‌ಗಳ ಪೂರೈಕೆಗಾಗಿ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟ ಮೊತ್ತ ರೂ.4,95,60,000/- ಇಎಂಡಿ: ರೂ.7,44,000/-.

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **09.11.2023 ರ ಸಂಜೆ 4:00 ಗಂಟೆಯೊಳಗೆ** ಮತ್ತು ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ **ದಿನಾಂಕ 10.11.2023 ಸಂಜೆ 05:00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/-
ಮುಖ್ಯ ಅಭಿಯಂತರರು (ಯೋಜನೆ)

DIPR/CP/KAVITA/1844/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023-24/ 2152 ದಿನಾಂಕ:21.10.2023

ಅಲ್ಪಾವಧಿ ಟೆಂಡರ ಅಧಿಸೂವನೆ

(ಇ-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kppp.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ ರೂ. 254.15 ಲಕ್ಷ

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:26.10.2023 ರ 10.30 ಬೆಳಿಗ್ಗೆ ರಿಂದ 04.11.2023 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:03.10.2023 ರ ಸಾಯಂಕಾಲ 4.00 ವರೆಗೆ, 3:ಪ್ರಿ ಬಿಡ್ ಮಿಟಿಂಗ್ ದಿನಾಂಕ:(ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 02.11.2023 ರ 11.00 ಬೆಳಿಗ್ಗೆ,4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 26.10.2023 ರ 10.30 ಬೆಳಿಗ್ಗೆ ರಿಂದ 04.11.2023 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ) 06.11.2023 ರ ಬೆಳಿಗ್ಗೆ 11.00 ಗಂಟೆಗೆ. 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 08.11.2023 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:07.11.2023 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka. gov.in/kppp-protal /index. seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಎಸ್.ಜಿ. ಶ್ರೀನಾಥ್, ಕಾರ್ಯನಿರ್ವಾಹಕ ಇಂಜಿನೀಯರರು,
ಎಚ್.ಬಿ.ಸಿ ವಿಭಾಗ, ಅಥಣಿ

DIPR/BGM/RO-NO-554/KSMCA/2023-24

ಕರ್ನಾಟಕ ಸರ್ಕಾರದ ಸಚಿವಾಲಯ

ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು-560 001.

ಸಂಖ್ಯೆ: ಆಇ/02/ಬಿಎಂಬಿ/2023 ದಿನಾಂಕ : 21-10-2023

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ ಎಫ್.ಡಿ.01 ಬಿಎಂಬಿ **2021, ದಿನಾಂಕ: 18ನೇ ನವೆಂಬರ್ 2021** ನಿಬಂಧನೆಯ ಮೇರೆಗೆ ಹೊರಡಿಸಲಾದ **4.7%,** ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023, **(4.7% Karnataka SDL 2023) ದಿನಾಂಕ: 23ನೇ ನವೆಂಬರ್ 2023** ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, **ದಿನಾಂಕ: 24ನೇ ನವೆಂಬರ್ 2023ರಂದು** ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಅಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **24ನೇ ನವೆಂಬರ್ 2023ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2) ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ, ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3) ಅದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ / ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **4.7% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023 (4.7% Karnataka SDL 2023)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು, ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ".

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/- (ಡಾ. ಪಿ. ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/RO1843/AAPL/2023-24

‘ರಾಮನಗರ ಬೆಂಗಳೂರಿನ ಭಾಗವೆಂಬ ಸಾಮಾನ್ಯ ಪರಿಜ್ಞಾನ ಕುಮಾರಸ್ವಾಮಿಗಿಲ್ಲ’

ಬಹಿರಂಗ ಚರ್ಚೆಗೆ ಸಿದ್ಧ: ಡಿಕೆಶಿ ಸವಾಲು

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ರಾಮನಗರ ಬೆಂಗಳೂರಿನ ಭಾಗ. ನಂತರ ಗ್ರಾಮಾಂತರ ಆಗಿ ಪ್ರತ್ಯೇಕ ಜಿಲ್ಲೆ ಆಗಿದೆ. ಕುಮಾರಸ್ವಾಮಿಗೆ ಸಾಮಾನ್ಯ ಪರಿಜ್ಞಾನ ಇಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿಗೆ ತಿರುಗೇಟು ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಎಲ್ಲ ವಿಚಾರಗಳು ವಿಧಾನಸಭೆ ಅಧಿವೇಶನದಲ್ಲಿ ಚರ್ಚೆಯಾಗಲಿ. ಬಹಿರಂಗ ಚರ್ಚೆಗೂ ನಾನು ಸಿದ್ಧ’ ಎಂದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಕನಕಪುರವನ್ನು ಮಾತ್ರ ಬೆಂಗಳೂರಿಗೆ ಸೇರಿಸುತ್ತೇನೆ ಎಂದಲ್ಲ. ರಾಮನಗರ, ಕನಕಪುರ, ಮಾಗಡಿ, ಚನ್ನಪಟ್ಟಣದ ನಾವೆಲ್ಲರೂ ಬೆಂಗಳೂರಿನವರು. ಆ ಅಸ್ತಿತ್ವ ಉಳಿಸಿಕೊಳ್ಳಬೇಕು ಎಂದರ್ಥ’ ಎಂದರು.

‘ಯಾವ, ಯಾವ ತಾಲ್ಲೂಕಿನಲ್ಲಿ ಏನೇನು ನಡೆದಿದೆ ಎಂಬುದು ವಿಧಾನಸಭೆಯಲ್ಲಿ ಚರ್ಚೆಯಾಗಲಿ. ನೀವು ಏನೇನು ಹೇಳಬೇಕೊ ಎಲ್ಲ ಹೇಳಿ, ಅದೆಷ್ಟು ಗಂಟೆ ಬೇಕಾದರೂ ಚರ್ಚೆ ನಡೆಯಲಿ’ ಎಂದು ಕುಮಾರಸ್ವಾಮಿಗೆ ಸವಾಲು ಹಾಕಿದರು.

‘ನಿಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ತೆಗೆದವರು ಸಿದ್ದರಾಮಯ್ಯ ಎಂದು ಒಂದಷ್ಟು ದಿನ ಹೇಳುತ್ತಿದ್ದಿರಿ. ಈಗ ಡಿ.ಕೆ.ಶಿವಕುಮಾರ್ ಎಂದು ಹೇಳುತ್ತೀರಿ. ಆದರೆ, ರಾಜೀನಾಮೆ ನೀಡಿದ ನಂತರ,

> **ಅಭಿವೃದ್ಧಿ ದೃಷ್ಟಿಯಿಂದ ಕನಕಪುರವನ್ನು ಬೆಂಗಳೂರಿಗೆ ಸೇರಿಸುವುದಾಗಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಈ ವಿಷಯದಲ್ಲಿ ಎಚ್.ಡಿ. ಕುಮಾರಸ್ವಾಮಿ ಅನಗತ್ಯ ರಾಜಕೀಯ ಮಾಡುತ್ತಿರುವುದು ಸರಿಯಲ್ಲ**
> **ಜಗದೀಶ ಶೆಟ್ಟರ್**
> ವಿಧಾನ ಪರಿಷತ್ ಸದಸ್ಯ

‘ಈ ಸರ್ಕಾರ ಬೀಳಲು ಯಡಿಯೂರಪ್ಪ ಮತ್ತು ಅವರ ಸಹೋದ್ಯೋಗಿಗಳು ಹಣಕೊಟ್ಟು ಪಿತೂರಿ ನಡೆಸಿದ್ದರು ಎಂದು ಭಾಷಣ ಮಾಡಿದ್ದೀರಿ’ ಎಂದರು.

‘ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ, ಇನ್ನೊಂದು ಪಕ್ಷದ ಅಧ್ಯಕ್ಷರು ಹಾಗೂ ಮಾಜಿ ಮುಖ್ಯಮಂತ್ರಿ ಜೊತೆ ಚರ್ಚೆಗೆ ಸಿದ್ಧನಿದ್ದೇನೆ. ಇಷ್ಟು ದಿನ ನನ್ನ ಸಮಾಜದ ಹಿರಿಯರು ಮಾತನಾಡಬೇಡಿ ಎಂದು ನನಗೆ ಹೇಳುತ್ತಿದ್ದರು. ಹೀಗಾಗಿ ತಡೆದುಕೊಂಡಿದ್ದೆ’ ಎಂದರು.

ಮೆಂಟಲ್ ಗಿರಾಕಿಗಳು: ‘ರಾಮನಗರ ಚಿತ್ರಣವನ್ನು ಏಳು ಜನ್ಮವಾದರೂ ಬದಲಾಯಿಸಲು ಸಾಧ್ಯವಿಲ್ಲ’ ಎಂದು ಕುಮಾರಸ್ವಾಮಿ ಮಾಡಿದ ಟ್ವೀಟ್‌ಗೆ, ‘ಅವರಿಗೆ ತಲೆಕೆಟ್ಟಿದೆಯೇ? ಯಾರಾದರೂ ತಲೆಕೆಟ್ಟಿರುವವರು ಈ ರೀತಿ ಮಾತನಾಡಬೇಕಷ್ಟೇ. ಚಿತ್ರಣ ಬದಲು ಮಾಡಲು ಆಗುವುದಿಲ್ಲ ಎಂದು ಸುಮ್ಮನೆ ಹೇಳುವವರು ಮೆಂಟಲ್ ಗಿರಾಕಿಗಳು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಮನಗರದ ವಿಚಾರ ಡಿಕೆಶಿ ಕೇಳಿ–ಸಿದ್ದರಾಮಯ್ಯ: ‘ರಾಮನಗರದ ವಿಚಾರ ಶಿವಕುಮಾರ್ ಅವರನ್ನೇ ಕೇಳಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ರಾಮನಗರ ಜಿಲ್ಲೆ ಶಾಸಕರಲ್ಲಿದೆ 241 ಎಕರೆ ಭೂಮಿ

‘ಆಸ್ತಿ ಮೌಲ್ಯ ಹೆಚ್ಚಿಸಿ ನೀವೇ ಜಾಸ್ತಿ ಹಣ ಮಾಡಲು ಹೊರಟಿದ್ದೀರಿ’ ಎಂಬ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಜನರ ಆಸ್ತಿ ಮೌಲ್ಯ ಹೆಚ್ಚಾಗಬಾರದೇ? ಬೆಂಗಳೂರು ಸುತ್ತ ಇರುವ ಜನರ ಆಸ್ತಿ ಮೌಲ್ಯ ಹೆಚ್ಚಾದರೆ ಯಾರಿಗೆ ಅನುಕೂಲ? ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ನಾನು ಅರ್ಜಿ ಹಾಕದೇ ಇದ್ದರೂ ಒಂದು ನಿವೇಶನ ನೀಡಿದ್ದರು. ಅದರ ಈಗಿನ ಮೌಲ್ಯ ₹ 6 ಕೋಟಿ. ನಾನು ಪಾಲಿಸಿದ್ದನ್ನೇ ಜನರಿಗೆ ಸಲಹೆ ನೀಡಿದ್ದೇನೆ ತಪ್ಪೇನು?’ ಎಂದರು.

ಈ ಹಿನ್ನೆಲೆಯಲ್ಲಿ ರಾಮನಗರದ ಜಿಲ್ಲೆಯ ನಾಲ್ವರು ಶಾಸಕರು ಹೊಂದಿರುವ ಆಸ್ತಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರದ ಆಧಾರದಲ್ಲಿ ವಿಶ್ಲೇಷಿಸಿದಾಗ, ಒಟ್ಟು ₹ 102 ಕೋಟಿ ಮೌಲ್ಯದ 241 ಎಕರೆಗೂ ಹೆಚ್ಚು ಸ್ಥಿರಾಸ್ತಿ ಹೊಂದಿರುವುದು ಗೊತ್ತಾಗಿದೆ. ಎಚ್.ಡಿ. ಕುಮಾರಸ್ವಾಮಿ ಅವರು ರಾಮನಗರದಲ್ಲಿ ₹ 38.91 ಕೋಟಿ ಮೌಲ್ಯದ 44.66 ಎಕರೆ ಕೃಷಿ ಭೂಮಿ ಹೊಂದಿದ್ದು, ರಾಮನಗರ ಶಾಸಕ ಇಕ್ಬಾಲ್ ಹುಸೇನ್ 52.29 ಎಕರೆ ಕೃಷಿ ಭೂಮಿ ಸೇರಿದಂತೆ ₹ 38 ಕೋಟಿ ಮೌಲ್ಯದ ಸ್ಥಿರಾಸ್ತಿಯ ಒಡೆಯ. ಒಟ್ಟು ₹ 1,413 ಕೋಟಿ ಘೋಷಿತ ಆಸ್ತಿ ಇರುವ ಡಿ.ಕೆ. ಶಿವಕುಮಾರ್ ಅವರು ಜಿಲ್ಲೆಯಲ್ಲಿ 10.37 ಕೋಟಿ ಮೌಲ್ಯದ 71 ಎಕರೆ ಕೃಷಿ ಮತ್ತು ಇತರ ಆಸ್ತಿಗಳನ್ನು ಹೊಂದಿದ್ದಾರೆ. ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ₹ 15.14 ಕೋಟಿ ಮೌಲ್ಯದ 77 ಎಕರೆ ಕೃಷಿ ಮತ್ತು ಕೃಷಿಯೇತರ ಆಸ್ತಿ ಹೊಂದಿರುವುದಾಗಿ ನಮೂದಿಸಿದ್ದಾರೆ.

‘ಅಧಿವೇಶನದಲ್ಲಿ ಚರ್ಚೆ ಮಾಡೋಣ’

‘ಅಧಿಕಾರದಿಂದ ಇಳಿಸಿದವರ ಜೊತೆ ಸೇರಿ ಈಗ ಸಿದ್ದರಾಮಯ್ಯ ಅವರನ್ನು 'ಮೀರ್ ಸಾದಿಕ್' ಎನ್ನುತ್ತಿದ್ದೀರಲ್ಲ. ಇದು ನ್ಯಾಯವೇ? ಬೆಳಗಾವಿಯ ಅಧಿವೇಶನದಲ್ಲಿ ಎಲ್ಲ ವಿಚಾರಗಳನ್ನು ದಾಖಲೆಗೆ ತರೋಣ’ ಎಂದು ಕುಮಾರಸ್ವಾಮಿಗೆ ಶಿವಕುಮಾರ್ ಸವಾಲು ಹಾಕಿದರು.

‘ನಾವು (ಕಾಂಗ್ರೆಸ್) ಕೊಟ್ಟ ಬೆಂಬಲ ಉಳಿಸಿಕೊಳ್ಳಲಾಗದೆ, ಸರ್ಕಾರ ಉರುಳಿಸಲು ಹಗಲು-ರಾತ್ರಿ ಕೆಲಸ ಮಾಡಿದ ಬೆಳಗಾವಿ, ಚನ್ನಪಟ್ಟಣ, ಬೆಂಗಳೂರಿನವನ ಜೊತೆ ಸೇರಿದ್ದೀರಿ. ನಿಮ್ಮ ರಾಜಕಾರಣದ ಮೌಲ್ಯ ಏನಾಯಿತು’ ಎಂದೂ ಪ್ರಶ್ನಿಸಿದರು.

‘ಕುಮಾರಸ್ವಾಮಿ ತಂದೆ ಕೇಳಿ ಇತಿಹಾಸ ತಿಳಿದುಕೊಳ್ಳಲಿ’

ಮೈಸೂರು: ‘ಬೆಂಗಳೂರು ನಮ್ಮದು’ ಎಂದು ಮೂರು ಬಾರಿ ಹೇಳಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ವಿದ್ಯೆ ಇಲ್ಲದೆ ಇದ್ದರೂ ಪ್ರಜ್ಞಾವಂತಿಕೆ ಬೇಕು. ಸಾಮಾನ್ಯ ಜ್ಞಾನವಿರಬೇಕು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ರಾಮನಗರದ ಇತಿಹಾಸವನ್ನು ಅವರ ತಂದೆ ಎಚ್.ಡಿ. ದೇವೇಗೌಡರ ಅವರನ್ನು ಕೇಳಿ ತಿಳಿದುಕೊಳ್ಳಲಿ’ ಎಂದು ತಿರುಗೇಟು ನೀಡಿದರು.

ಇಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಬುಧವಾರ ಪ್ರತಿಕ್ರಿಯೆ ನೀಡಿದ ಅವರು, ‘ಆದಿಚುಂಚನಗಿರಿ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ ಹಾಗೂ ಕೆಂಪೇಗೌಡರು ಜನಿಸಿದ್ದು ರಾಮನಗರದಲ್ಲಿ. ನಾವೆಲ್ಲರೂ ಬೆಂಗಳೂರಿನವರು. ಮಂಡ್ಯಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯ ಮಾಡಿದರೂ ಮೈಸೂರು ವಿಶ್ವವಿದ್ಯಾಲಯವೇ ಬಹಳ ಮುಖ್ಯ. ಇದೂ ಅದೇ ರೀತಿಯೇ’ ಎಂದು ಪ್ರತಿಪಾದಿಸಿದರು.

‘ಸಂಪುಟ ಸಭೆಯಲ್ಲಿ ತೀರ್ಮಾನ’

ಕೃಷ್ಣ ಬೈರೇಗೌಡ

ನವದೆಹಲಿ: ಕನಕಪುರವನ್ನು ಬೆಂಗಳೂರು ಜಿಲ್ಲೆಗೆ ಸೇರಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಬಂದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟ ಸಭೆ ತೀರ್ಮಾನ ಕೈಗೊಳ್ಳಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಬುಧವಾರ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯ ಸಂದರ್ಭ ನನಗೂ ತಿಳಿದಿಲ್ಲ. ಈ ಸಂಬಂಧ ಮನವಿ ಸಲ್ಲಿಕೆಯಾದ ಬಳಿಕ ಕಂದಾಯ ಇಲಾಖೆ ತನ್ನ ಅಭಿಪ್ರಾಯ ನೀಡಲಿದೆ’ ಎಂದರು.

ಈ ಬಗ್ಗೆ ಸರ್ಕಾರದ ಮಟ್ಟದಲ್ಲಿಯೂ ಚರ್ಚೆ ನಡೆಯುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ರಾಮನಗರ ಒಡೆಯಲಾಗದು: ಎಚ್‌ಡಿಕೆ

ಬೆಂಗಳೂರು: ‘ಈ ಜನ್ಮವಷ್ಟೇ ಅಲ್ಲ, ಇನ್ನೂ ಏಳು ಜನ್ಮ ಎತ್ತಿ ಬಂದರೂ ರಾಮನಗರ ಜಿಲ್ಲೆಯನ್ನು ಛಿದ್ರ ಮಾಡಲು ಸಾಧ್ಯವಿಲ್ಲ. ಇದನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅರ್ಥ ಮಾಡಿಕೊಳ್ಳಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

‘ಕುಮಾರಸ್ವಾಮಿ ಅವರಿಗೆ ಸಾಮಾನ್ಯ ಜ್ಞಾನ ಇಲ್ಲ’ ಎಂಬ ಶಿವಕುಮಾರ್ ಟೀಕೆಗೆ ಪತ್ರಿಕಾ ಹೇಳಿಕೆ ಮೂಲಕ ಬುಧವಾರ ಪ್ರತಿಕ್ರಿಯೆ ನೀಡಿರುವ ಅವರು, ‘ಜನರ ಅನುಕೂಲ, ಅನನುಕೂಲಗಳನ್ನು ವೈಜ್ಞಾನಿಕವಾಗಿ ಪರಿಗಣಿಸಿ, ಪರಿಶೀಲಿಸಿ ರಾಮನಗರ ಜಿಲ್ಲೆಯನ್ನು ರಚಿಸಲಾಗಿದೆ. ಈಗ ಜಿಲ್ಲೆ ಒಡೆದು ಕನಕಪುರವನ್ನು ಬೆಂಗಳೂರಿಗೆ ಸೇರಿಸುತ್ತೇವೆ ಎಂದರೆ ಇಡೀ ಜಿಲ್ಲೆಯ ಜನ ತಿರುಗಿಬೀಳುತ್ತಾರೆ. ಒಡೆದು ಚೂರುಚೂರು ಮಾಡುವುದಕ್ಕೆ ರಾಮನಗರವೇನು ಕಲ್ಲುಬಂಡೆಯೆ’ ಎಂದು ಪ್ರಶ್ನಿಸಿದ್ದಾರೆ.

‘ಬಡವರ ಹೊಟ್ಟೆ ಮೇಲೆ ಹೊಡೆಯುವ, ಕಂಡವರ ಜಮೀನಿಗೆ ಬೇಲಿ ಹಾಕುವ, ಬೆಟ್ಟಗುಡ್ಡಗಳನ್ನು ಲೂಟಿ ಮಾಡಿ ವಿದೇಶಗಳಿಗೆ ಸಾಗಿಸಿ ಹಣ ಮಾಡಿಕೊಳ್ಳುವ, ಅದಕ್ಕೆ ಅಡ್ಡ ಬಂದವರ ಜೀವ ತೆಗೆಯುವ ‘ದುಷ್ಟ’ಪ್ರಜ್ಞೆ, ‘ಅತಿ’ ಬುದ್ಧಿವಂತಿಕೆ, ‘ಅಸಾಮಾನ್ಯ’ ಜ್ಞಾನ ಖಂಡಿತವಾಗಿಯೂ ನನಗಿಲ್ಲ. ಅದು ಬೇಕಾಗಿಯೂ ಇಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

ಕನಕಪುರವನ್ನು ಬೆಂಗಳೂರಿಗೆ ಸೇರಿಸಬೇಕೆನ್ನುವುದರ ಹಿಂದೆ ಯಾರ ಹಿತ ಅಡಗಿದೆ? ಕನಕಪುರದ ಪ್ರತಿಯೊಬ್ಬರಿಗೂ ಅಸಲಿ ಸತ್ಯ ಗೊತ್ತಿದೆ. ಇರುವ ಶ್ರೀಮಂತಿಕೆ, ಸಂಪತ್ತು ಸಾಲದೆ? ಇನ್ನೆಷ್ಟನ್ನು ಕೂಡಿ ಹಾಕಬೇಕು? ಎಂದರು.

ಡೆವಲಪರ್‌ಗಳ ಅನುಕೂಲಕ್ಕೆ ಯತ್ನ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಿಯಲ್ಎಸ್ಟೇಟ್‌ಗೆ ಮತ್ತು ಡೆವಲಪರ್‌ಗಳಿಗೆ ಅನುಕೂಲ ಮಾಡಿಕೊಡಲು ಡಿ.ಕೆ.ಶಿವಕುಮಾರ್ ಕನಕಪುರವನ್ನು ಬೆಂಗಳೂರಿಗೆ ಸೇರಿಸಲು ಹೊರಟಿದ್ದಾರೆ’ ಎಂದು ಬಿಜೆಪಿ ಶಾಸಕ ಆರ್.ಅಶೋಕ ದೂರಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕನಕಪುರದ ಬಗ್ಗೆ ಬಹಳ ಕಾಳಜಿ ಇದ್ದರೆ ಬೆಂಗಳೂರಿಗೆ ಸೇರಿಸುವುದನ್ನು ಬಿಟ್ಟು, ಪ್ರತ್ಯೇಕ ಜಿಲ್ಲೆಯನ್ನು ಮಾಡಿಕೊಳ್ಳಲಿ. ನಮ್ಮ ಅಭ್ಯಂತರವಿಲ್ಲ’ ಎಂದು ತಿಳಿಸಿದರು.

‘ಶಿವಕುಮಾರ್ ಒಂದಲ್ಲ ನೂರು ಬಾರಿ ಮಾಧ್ಯಮಗಳಿಗೆ ಹೇಳಿಕೆ ಕೊಟ್ಟು, ನಾನು ಮೊದಲು ಬಿಜಿನೆಸ್ ಮ್ಯಾನ್, ರಾಜಕಾರಣ ನನ್ನ ಹವ್ಯಾಸ ಎಂದಿದ್ದಾರೆ. ಅವರು ಏನೇ ಮಾಡಿದರೂ ಬಿಜಿನೆಸ್‌ಗೆ ಮೊದಲ ಸ್ಥಾನ ಪಡೆಯುತ್ತದೆ. ಆ ಮೇಲಿನ ಸ್ಥಾನ ರಾಜಕೀಯಕ್ಕೆ’ ಎಂದು ಅವರು ಕುಟುಕಿದರು.

ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಬೆಂಗಳೂರಿನ ಕಾಂಗ್ರೆಸ್ ಶಾಸಕರು ಏನು ಹೇಳುತ್ತಾರೆ? ಸುಮಾರು 15 ವರ್ಷಗಳ ಹಿಂದೆ 110 ಹಳ್ಳಿಗಳನ್ನು ಬಿಬಿಎಂಪಿಗೆ ಸೇರಿಸಲಾಯಿತು. ಇನ್ನೂ ಶೇ 30 ರಷ್ಟು ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ. ಈ ಪ್ರದೇಶಗಳನ್ನು ಬೆಂಗಳೂರಿನಂತೆ ಮಾಡಲು ಇನ್ನೂ 15 ವರ್ಷಗಳು ಬೇಕಾಗಬಹುದು. ಕನಕಪುರವನ್ನು ಬೆಂಗಳೂರಿಗೆ ಸೇರಿಸುತ್ತೇನೆ ಎನ್ನುವ ಇವರು ಹಾರೋಹಳ್ಳಿ ಮತ್ತು ರಾಮನಗರವನ್ನು ಏನು ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇರುವ ದೇವನಹಳ್ಳಿಯ ಕಥೆ ಏನು? ಅದೂ ಕೂಡ ಬೆಂಗಳೂರು ಗಡಿಯಲ್ಲೇ ಇದೆ. ಹೊಸಕೋಟೆ ಕಥೆ ಏನು? ಬಿಡಿಎಯ ಸಿಡಿಪಿ 10 ವರ್ಷಗಳಿಂದ ಬಾಕಿ ಇದೆ. ಆ ಸಿಡಿಪಿಯಡಿ ಇವೆಲ್ಲವನ್ನೂ ಸೇರಿಸಿ ಯಾವ್ಯಾವುದು ಹೇಗೆ ಬೇಕೋ ಹಳದಿ, ಹಸಿರು, ವಾಣಿಜ್ಯ, ವಸತಿ ಪ್ರದೇಶ ಎಂದು ಗುರುತಿಸಿ ಡೆವಲಪರ್‌ಗಳಿಗೆ ದಂಧೆ ಮಾಡಲು ಅವಕಾಶ ಕಲ್ಪಿಸುವ ಹುನ್ನಾರ ಮಾಡಿದ್ದಾರೆ ಎಂದರು.

ಬೆಂಗಳೂರು ಒಕ್ಕಲಿಗರ ಮೇಲಿನ ಹಿಡಿತಕ್ಕೆ ಯತ್ನ: ಸಿ.ಪಿ. ಯೋಗೇಶ್ವರ್

ಬಿಜೆಪಿಯ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಮಾತನಾಡಿ, ಆಡಳಿತದ ದೃಷ್ಟಿಯಿಂದ ರಾಮನಗರ ಜಿಲ್ಲೆ ಆಗಿರುವುದೇ ಸೂಕ್ತ. ರಾಮನಗರ, ಕನಕಪುರದವರು ಎಲ್ಲ ಕೆಲಸಗಳಿಗೆ ಬೆಂಗಳೂರು ನಗರಕ್ಕೆ ಹೋಗುವುದು ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಒಕ್ಕಲಿಗರ ಸಂಖ್ಯೆ ಜಾಸ್ತಿ ಇರುವುದರಿಂದ, ಸಮುದಾಯದ ಮೇಲೆ ಹಿಡಿತ ಸಾಧಿಸುವ ಆಲೋಚನೆ ಅವರಿಗೆ ಬಂದಿರಬಹುದು. ಅಧಿಕಾರ ಕೈತಪ್ಪಬಾರದು ಎಂಬ ಮುನ್ನೆಚ್ಚರಿಕೆಯೂ ಇರಬಹುದು. ರಾಜಕೀಯ ಮಹತ್ವಾಕಾಂಕ್ಷೆ ಇರುವ ಅವರು ಅದಕ್ಕೆ ತಕ್ಕಂತೆಯೇ ಮಾತನಾಡಿದ್ದಾರೆ ಎಂದರು.

ಸುದ್ದಿ 2 ನಿಮಿಷ

ಪ್ರತ್ಯೇಕ ದಿನಗಳಲ್ಲಿ ಪರೀಕ್ಷೆ ನಡೆಸಲು ಸಿ.ಎಂಗೆ ಮನವಿ

ಬೆಂಗಳೂರು: ನ. 5 ರಂದು ಒಂದೇ ದಿನ ಮೂರು ವಿವಿಧ ಹುದ್ದೆಗಳಿಗೆ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿಗದಿಗೊಳಿಸಿರುವುದರಿಂದ ಅಭ್ಯರ್ಥಿಗಳಲ್ಲಿ ಗೊಂದಲ ಉಂಟಾಗಿದ್ದು, ಈ ಪರೀಕ್ಷೆಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ನಡೆಸಲು ಸೂಚನೆ ನೀಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆಯ 242 ಲೆಕ್ಕ ಸಹಾಯಕರು, ಸಹಕಾರ ಸಂಘಗಳ 47 ನಿರೀಕ್ಷಕರ ಹುದ್ದೆಗಳಿಗೆ ನೇಮಕಾತಿಗೆ ಒಂದೇ ದಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೆಪಿಎಸ್‌ಸಿ ನಿಗದಿಪಡಿಸಿದೆ. ಖಾಲಿ ಇರುವ 454 ಸಿವಿಲ್ ಕಾನ್‌ಸ್ಟೇಬಲ್ ಹುದ್ದೆಗಳಿಗೆ ರಾಜ್ಯ ಪೊಲೀಸ್ ಇಲಾಖೆ ಅದೇ ದಿನ ಪರೀಕ್ಷೆ ನಡೆಸಲಿದೆ. ಈ ಪರೀಕ್ಷೆಗಳನ್ನು ಪ್ರತ್ಯೇಕ ದಿನಗಳಲ್ಲಿ ನಿಗದಿಗೊಳಿಸಲು ಕ್ರಮ ವಹಿಸುವಂತೆ ಹಲವು ಅಭ್ಯರ್ಥಿಗಳು ತಮ್ಮನ್ನು ಕೋರಿದ್ದಾರೆ ಎಂದು ಪತ್ರದಲ್ಲಿ ಸಚಿವರು ತಿಳಿಸಿದ್ದಾರೆ.

ನ. 2ರಿಂದ ಹಾಸನಾಂಬ ಜಾತ್ರೆ

ಹಾಸನ: ಜಿಲ್ಲೆಯ ಅಧಿದೇವತೆ ಹಾಸನಾಂಬ ಜಾತ್ರಾ ಮಹೋತ್ಸವ ನ.2ರಿಂದ 15ರವರೆಗೆ ಜರುಗಲಿದ್ದು, ಜಿಲ್ಲಾಡಳಿತದಿಂದ ಭರದಿಂದ ಸಿದ್ಧತೆಗಳು ನಡೆಯುತ್ತಿವೆ.

‘ನ.2ರಂದು ಮಧ್ಯಾಹ್ನ 12ಕ್ಕೆ ಪೂಜೆ ಕೈಂಕರ್ಯದ ಬಳಿಕ ದೇವಾಲಯದ ಗರ್ಭಗುಡಿ ಬಾಗಿಲನ್ನು ತೆರೆಯಲಾಗುವುದು. ಮೊದಲ ದಿನ ಹಾಗೂ ಬಾಗಿಲು ಮುಚ್ಚುವ ನ.15ರಂದು ಸಾರ್ವಜನಿಕರಿಗೆ ದರ್ಶನ ಇರುವುದಿಲ್ಲ’ ಎಂದು ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ತಿಳಿಸಿದರು.

‘ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಶಾಸಕ ಸ್ವರೂಪ್ ಪ್ರಕಾಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. 10ಲಕ್ಷಕ್ಕೂ ಹೆಚ್ಚು ಮಂದಿ ಭಕ್ತರು ಬರುವ ನಿರೀಕ್ಷೆ ಇದೆ. ‘ಶಕ್ತಿ’ ಯೋಜನೆ ಹಾಗೂ ಹಬ್ಬದ ಸಂದರ್ಭ ಇರುವುದರಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಮೂಲ ಸೌಕರ್ಯ ಹೆಚ್ಚಿಸುವ ಸಂಬಂಧ ತೀರ್ಮಾನ ಕೈಗೊಳ್ಳಲಾಗಿದೆ’ ಎಂದರು.

‘₹ 1 ಸಾವಿರ ಹಾಗೂ ₹ 300ಕ್ಕೆ ಪಾಸ್ ವಿತರಿಸಲಾಗುವುದು. ಅಕ್ರಮ ತಡೆಯುವ ನಿಟ್ಟಿನಲ್ಲಿ ಕ್ಯೂಆರ್ ಕೋಡ್ ಒಳಗೊಂಡ ಪಾಸ್ ವ್ಯವಸ್ಥೆ ಮಾಡಲಾಗುತ್ತಿದೆ. ಪ್ರತಿಯೊಬ್ಬರೂ ದರ್ಶನಕ್ಕೆ ಬರುವ ವೇಳೆ ಪಾಸ್‌ಗಳನ್ನು ಸ್ಕ್ಯಾನ್ ಮಾಡಲಾಗುವುದು. ಒಂದು ಬಾರಿ ಸ್ಕ್ಯಾನ್ ಆದ ಪಾಸ್ ಅನ್ನು ಮತ್ತೊಮ್ಮೆ ಬಳಸಲು ಅವಕಾಶವಿರುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಪ್ಯಾಕೇಜ್ ಟೂರ್: ‘ಹಾಸನಾಂಬ ದರ್ಶನೋತ್ಸವ ಜೊತೆಗೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ‘ಮರೆಯಲಾಗದ ಹಾಸನ ಯಾತ್ರೆ’ ಯೋಜನೆ ಅಡಿ ಜಿಲ್ಲೆಯ ಪ್ರಸಿದ್ಧ ದೇವಾಲಯ, ಪ್ರವಾಸಿ ತಾಣಗಳನ್ನು ಗುರುತಿಸಿ 4.5 ಪ್ಯಾಕೇಜ್ ಟೂರ್ ವ್ಯವಸ್ಥೆ ಮಾಡಲಾಗುವುದು’ ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮಾ ತಿಳಿಸಿದರು.

‘ಜಿಲ್ಲೆ ಶಿಲ್ಪಕಲೆಗಳ ಬೀಡಾಗಿದ್ದು, ಬೇಲೂರು, ಶ್ರವಣಬೆಳಗೊಳ, ಸಕಲೇಶಪುರ, ಹಳೇಬೀಡು, ಅರಸೀಕೆರೆ ಸೇರಿದಂತೆ ನಾನಾ ಪ್ರವಾಸಿ ತಾಣಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ಪ್ಯಾಕೇಜ್ ಟೂರ್ ವ್ಯವಸ್ಥೆಗೆ ಪ್ರಸ್ತಾವ ಮಾಡಲಾಗಿದೆ’ ಎಂದರು.

ಎಪಿಸಿಸಿಎಫ್ ಅಧ್ಯಕ್ಷತೆಯ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವನ್ಯಜೀವಿ ವಸ್ತುಗಳ ಸಂಗ್ರಹ, ಮಾರಾಟದ ವಿರುದ್ಧ ಇನ್ನಷ್ಟು ಕಠಿಣ ನಿಯಮಗಳನ್ನು ರೂಪಿಸಲು ವನ್ಯಜೀವಿ ವಿಭಾಗದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ಸಮಿತಿಯಲ್ಲಿ ಬೆಂಗಳೂರು, ಹಾಸನ, ಚಿಕ್ಕಮಗಳೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ, ತುಮಕೂರು, ಕೊಪ್ಪ ಹಾಗೂ ಶಿವಮೊಗ್ಗ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸದಸ್ಯರಾಗಿರುತ್ತಾರೆ.

ಹುಲಿ ಉಗುರು, ಹಲ್ಲು, ಚರ್ಮ ಸೇರಿದಂತೆ ಯಾವುದೇ ವನ್ಯಜೀವಿಯ ಅಂಗಾಂಗದಿಂದ ಮಾಡಿದ ವಸ್ತುಗಳ ಸಂಗ್ರಹ ಹಾಗೂ ಮಾರಾಟ ನಿಷೇಧಿಸಲಾಗಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ–1972 ರ ಅಡಿಯಲ್ಲಿ ನಿಯಮಗಳನ್ನು ಜಾರಿಗೆ ತರಲಾಗಿದೆ. ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿದರು.

ಗದಗ ನಗರದ ತೋಂಟದಾರ್ಯ ಮಠದಲ್ಲಿ ಬುಧವಾರ ನಡೆದ ಲಿಂಗೈಕ್ಯ ತೋಂಟದ ಸಿದ್ಧಲಿಂಗ ಶ್ರೀಗಳ ಐದನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಸಚಿವ ಎಚ್‌.ಕೆ.ಪಾಟೀಲ ಅವರು ಎಸ್‌.ಎಂ.ಜಾಮದಾರ ಅವರಿಗೆ ‘ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಿದರು. (ಎಡದಿಂದ ಬಲಕ್ಕೆ) ಮುಂಡರಗಿ ಬೈಲೂರು ತೋಂಟದಾರ್ಯ ಶಾಖಾಮಠದ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ತೋಂಟದ ಸಿದ್ಧರಾಮ ಸ್ವಾಮೀಜಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಸಚಿವ ಎಸ್‌.ಎಸ್‌.ಪಾಟೀಲ, ತೋಂಟದಾರ್ಯ ಮಠದ ಜಾತ್ರಾ ಕಮಿಟಿಯ ಅಮರೇಶ ಅಂಗಡಿ, ಮಠದ ಆಡಳಿತಾಧಿಕಾರಿ ಎಸ್‌.ಎಸ್‌.ಪಟ್ಟಣಶೆಟ್ಟಿ ಇದ್ದಾರೆ –ಪ್ರಜಾವಾಣಿ ಚಿತ್ರ

ಹುಲಿ ಉತ್ಪನ್ನ ಶೋಧ ಬಿರುಸು

ಒಂದನೇ ಪುಟದಿಂದ...

ರಾಕ್‌ಲೈನ್‌ಗೆ ನೋಟಿಸ್: ಮಹಾಲಕ್ಷ್ಮಿ ಬಡಾವಣೆಯಲ್ಲಿರುವ ರಾಕ್‌ಲೈನ್ ವೆಂಕಟೇಶ್ ಮನೆಯಲ್ಲಿ ಶೋಧ ನಡೆಸಲು ಅರಣ್ಯ ಇಲಾಖೆ ಅಧಿಕಾರಿಗಳು ಹೋಗಿದ್ದರು. ಆದರೆ, ವೆಂಕಟೇಶ್ ವಿದೇಶ ಪ್ರವಾಸದಲ್ಲಿರುವುದಾಗಿ ಅವರ ಕುಟುಂಬದವರು ಮಾಹಿತಿ ನೀಡಿದರು.

ಹುಲಿ ಉಗುರನ್ನು ಒಳಗೊಂಡಿರುವ ಲಾಕೆಟ್ ಧರಿಸಿರುವ ಆರೋಪ ಕುರಿತು ವಿಚಾರಣೆಗೆ ಹಾಜರಾಗುವಂತೆ ವೆಂಕಟೇಶ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅವರ ಮಗನಿಗೆ ನೋಟಿಸ್ ಪ್ರತಿಯನ್ನು ತಲುಪಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಆಶ್ರಮದಲ್ಲೂ ಶೋಧ: ಹುಲಿ ಚರ್ಮದ ಮೇಲೆ ಕುಳಿತಿರುವ ಚಿತ್ರವು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಮಾಹಿತಿ ಆಧರಿಸಿ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಗೌರಿಗದ್ದೆಯ ವಿನಯ್ ಗುರೂಜಿ ಅವರ ಆಶ್ರಮದಲ್ಲೂ ಶೋಧ ನಡೆಸಿದ್ದಾರೆ.

> **ಕಾನೂನು ದೊಡ್ಡದು. ಅಧಿಕಾರಿಗಳು ಕೇಳಿದ ವಸ್ತು ಒಪ್ಪಿಸಲಾಗಿದೆ. ಅಮ್ಮ ನೀಡಿದ ಬಹಳ ಹಳೆಯ ಲಾಕೆಟ್ ಎಂದು ತಿಳಿಸಿರುವೆ. ತಲೆತಗ್ಗಿಸುವ ಯಾವ ಕೆಲಸ ಮಾಡಿಲ್ಲ, ಮಾಡೋದಿಲ್ಲ**
> **ಜಗ್ಗೇಶ್,** ರಾಜ್ಯಸಭಾ ಸದಸ್ಯ

ಕೊಪ್ಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ನಂದೀಶ್ ನೇತೃತ್ವದ ತಂಡ ಆಶ್ರಮದ ಕೊಠಡಿಗಳಲ್ಲಿ ತಪಾಸಣೆ ನಡೆಸಿತು. ಬಳಿಕ ವಿನಯ್ ಗುರೂಜಿ ಅವರ ವಿಚಾರಣೆಯನ್ನೂ ನಡೆಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಂದೀಶ್, ‘ಮೇಲಧಿಕಾರಿಗಳ ಸೂಚನೆಯಂತೆ ಆಶ್ರಮಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿ, ಗುರೂಜಿ ಜೊತೆ ಮಾತನಾಡಿ ಮಾಹಿತಿ ಪಡೆದುಕೊಂಡಿದ್ದೇವೆ. ‘ಎರಡು ವರ್ಷದ ಹಿಂದೆ ಅಮರೇಂದ್ರ ಕಿರೀಟಿ ಎಂಬುವರು ಉಡುಗೊರೆ ನೀಡಿದ್ದರು. ಅದನ್ನು ವಾಪಸ್ ನೀಡಲಾಗಿದೆ’ ಎಂದು ಗುರೂಜಿ ತಿಳಿಸಿದ್ದಾರೆ. ಎಲ್ಲಾ ಮಾಹಿತಿ ಕಲೆಹಾಕಿ ವರದಿ ನೀಡಲಾಗುವುದು’ ಎಂದು ತಿಳಿಸಿದರು.

ಕುಣಿಗಲ್ ತಾಲ್ಲೂಕಿನ ಬಿದನಗೆರೆಯ ಧನಂಜಯ್ಯ ಸ್ವಾಮೀಜಿ ಅವರಿಗೆ ಸೇರಿದ ಸತ್ಯಶನೇಶ್ವರ ದೇವಸ್ಥಾನದಲ್ಲಿ ಎರಡನೇ ದಿನವೂ ಶೋಧ ನಡೆಸಲಾಗಿದೆ. ಸ್ವಾಮೀಜಿಯ ಆಪ್ತ ಸಹಾಯಕ ಅನಿಲ್ ಎಂಬುವವರು ಹುಲಿ ಉಗುರನ್ನು ಹೋಲುವ ಪ್ರತಿಕೃತಿಯ ಲಾಕೆಟ್ ಅನ್ನು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆ ಮುಂದುವರಿಯಲಿದೆ: ಕಾರ್ಯಾಚರಣೆ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ವನ್ಯಜೀವಿ ವಿಭಾಗದ ಹೆಚ್ಚುವರಿ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್, ‘ಮಾಧ್ಯಮಗಳ ವರದಿಗಳು, ಸಾಮಾಜಿಕ ಮಾಧ್ಯಮಗಳಲ್ಲಿನ ಮಾಹಿತಿ ಮತ್ತು ದೂರುಗಳನ್ನು ಆಧರಿಸಿ ಈ ಕಾರ್ಯಾಚರಣೆ ಆರಂಭವಾಗಿದೆ. ರಾಜ್ಯದ ವಿವಿಧೆಡೆ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ಹೇಳಿದರು.

ತನಿಖೆಗೆ ಸಿದ್ಧ: ವಿನಯ್ ಗುರೂಜಿ

ಚಿಕ್ಕಮಗಳೂರು: ‘ಅಮರೇಂದ್ರ ಕಿರೀಟಿ ಎಂಬುವವರು ಪೂರ್ವಜರಿಂದ ಪಡೆದಿದ್ದ ಹುಲಿ ಚರ್ಮವನ್ನು ನನಗೆ ಉಡುಗೊರೆಯಾಗಿ ನೀಡಿದ್ದರು. ಒಂದೇ ದಿನದಲ್ಲಿ ವಾಪಸ್ ಕೊಟ್ಟಿರುವೆ. ಈ ಬಗ್ಗೆ ತನಿಖೆಗೆ ನಾನು ಸಿದ್ಧನಿದ್ದೇನೆ’ ಎಂದು ವಿನಯ್ ಗುರೂಜಿ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ವೈರಾಗಿಗಳು ಮಾತ್ರ ಹುಲಿ ಚರ್ಮದ ಮೇಲೆ ಕೂರಬಹುದು ಎಂದು ಯಾರೊ ತಿಳಿಸಿದ್ದರಿಂದ ಇಲ್ಲಿಗೆ ತಂದು ಕೊಟ್ಟಿದ್ದರು. ವಿರೋಧ ವ್ಯಕ್ತವಾದ ಕೂಡಲೇ ಅವರಿಗೆ ವಾಪಸ್ ನೀಡಲಾಯಿತು. ಬೇರೆ ಯಾರಿಗಾದರೂ ನೀಡಿದರೆ ದುರ್ಬಳಕೆ ಆಗಬಹುದು ಎಂಬ ಕಾರಣಕ್ಕೆ ಅರಣ್ಯ ಇಲಾಖೆಗೆ ವಾಪಸ್ ನೀಡುವಂತೆ ನಾನೇ ಸಲಹೆ ನೀಡಿದ್ದೆ. ಅದರಂತೆ ಅವರು ಅರಣ್ಯ ಇಲಾಖೆಗೆ ಒಪ್ಪಿಸಿದ್ದರು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನನಗೂ ನೀಡಿದ್ದರು’ ಎಂದು ದಾಖಲೆ ಪ್ರದರ್ಶಿಸಿದರು.

‘ಅರಣ್ಯ ಇಲಾಖೆ ಅಧಿಕಾರಿಗಳು ಅವರ ಕರ್ತವ್ಯ ಮಾಡಿದ್ದಾರೆ. ಅವರ ಇಲಾಖೆಯೇ ನೀಡಿರುವ ದಾಖಲೆ ಪತ್ರಗಳನ್ನು ಅವರಿಗೆ ತೋರಿಸಿದ್ದೇನೆ. ಯಾವ ರೀತಿಯ ತನಿಖೆ ಅಥವಾ ವಿಚಾರಣೆಗೂ ನಾನು ಸಿದ್ಧನಿದ್ದೇನೆ’ ಎಂದರು.

‘ದೂರು ನೀಡಿದರೆ ಕ್ರಮ’

ಕಲಬುರಗಿ: ‘ರಾಜ್ಯದಲ್ಲಿ ಹುಲಿ ಉಗುರಿನ ಪೆಂಡೆಂಟ್ ಸೇರಿದಂತೆ ಇತರೆ ವಸ್ತುಗಳ ಬಳಕೆ ಮಾಡುತ್ತಿರುವುದು ಕಂಡು ಬಂದಿದೆ. ಈಗಾಗಲೇ ಕೆಲವರ ಬಂಧನವಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ನೆಲದ ಕಾನೂನು ಬಳಕೆ ಮಾಡಲಾಗುವುದು’ ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಚಿತ್ರನಟ ದರ್ಶನ್ ತೂಗುದೀಪ ಹುಲಿ ಉಗುರು ಧರಿಸಿರುವುದು ಮತ್ತು ವಿನಯ ಗುರೂಜಿ ಹುಲಿ ಚರ್ಮ ಬಳಸುತ್ತಿರುವ ಆರೋಪಗಳ ಕುರಿತು ಕ್ರಮ ಜರುಗಿಸಲು ಅಧಿಕಾರಿಗಳು ಬದ್ಧರಾಗಿದ್ದಾರೆ’ ಎಂದರು.

ಲಿಂಗಾಯತ ಜಾತಿಗಳಿಗೆ ಮೀಸಲಾತಿ ಅಸಾಧ್ಯ: ಜಾಮದಾರ

ಪ್ರಜಾವಾಣಿ ವಾರ್ತೆ

ಗದಗ: ‘ಲಿಂಗಾಯತ ಸಮುದಾಯದ ಎಲ್ಲ ಜಾತಿಗಳಿಗೆ ಮೀಸಲಾತಿ ದೊರಕಿಸಿಕೊಡುತ್ತೇವೆ ಎಂದು ಲಿಂಗಾಯತ ಮಠಾಧೀಶರು ಮತ್ತು ಸಂಸ್ಥೆಗಳು ಹೇಳುವ ಮಾತು ಬಸವಣ್ಣನಿಗೆ ಮಾಡುವ ಅವಮಾನ. ಇನ್ನೂ ನೂರು ವರ್ಷಗಳಾದರೂ ಅದು ಅಸಾಧ್ಯ’ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಹೇಳಿದರು.

ಲಿಂಗೈಕ್ಯ ತೋಂಟದ ಸಿದ್ಧಲಿಂಗ ಶ್ರೀಗಳ ಐದನೇ ಪುಣ್ಯಸ್ಮರಣೋತ್ಸವದ ಪ್ರಯುಕ್ತ ನಗರದ ತೋಂಟದಾರ್ಯ ಮಠದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ‘ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಸ್ವೀಕರಿಸಿ ಅವರು ಮಾತನಾಡಿದರು.

‘ಲಿಂಗಾಯತ ಒಳಪಂಗಡಕ್ಕೆ ಮೀಸಲಾತಿ ಕೊಡಿಸುವುದಾಗಿ ಹೇಳುತ್ತ ಕೆಲ ಲಿಂಗಾಯತ ಸಂಘಟನೆಗಳು, ಮುಖಂಡರು ಬೀದಿಗಳಲ್ಲಿ ಹೋರಾಟ ನಡೆಸಿದ್ದಾರೆ. ಇವೆಲ್ಲವೂ ಕೇವಲ ರಾಜಕೀಯ ‘ಸ್ಟಂಟ್’. ಲಿಂಗಾಯತ ಸಮುದಾಯದಲ್ಲಿರುವ ನೂರಾರು ಜಾತಿಗಳಿಗೆ ಸಮಾನ ಮೀಸಲಾತಿ ಕೊಡಿಸುತ್ತೇವೆ ಎಂಬುದು ಬಸವತತ್ವಕ್ಕೆ ವಿರುದ್ಧವಾದ ಮಾತು’ ಎಂದರು.

‘ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ 104 ವರ್ಷಗಳ ಇತಿಹಾಸ ಇದೆ. ಮಿಲ್ಲರ್ ಕಮಿಟಿ, ನಾಗನಗೌಡ ಕಮಿಟಿ, ಹಾವನೂರು ಆಯೋಗ, ವೆಂಕಟಸ್ವಾಮಿ ಆಯೋಗ, ಚಿನ್ನಪ್ಪರೆಡ್ಡಿ ಆಯೋಗ ಮತ್ತು ರವಿವರ್ಮ ಕುಮಾರ ಆಯೋಗ ನೀಡಿದ ಆರು ಬೃಹತ್ ಸಂಪುಟಗಳ ವರದಿ ಸರ್ಕಾರದ ಬಳಿ ಇದೆ. ಆ ವರದಿಗಳಲ್ಲಿ ಲಿಂಗಾಯತರು ಮತ್ತು ಜಾತಿಗಳ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ಪ್ರತಿಯೊಬ್ಬ ರಾಜಕೀಯ ನಾಯಕ ಹಾಗೂ ಲಿಂಗಾಯತ ಧರ್ಮಗುರು ಓದಬೇಕು. ಆಗ, ಮೀಸಲಾತಿ ಕೊಡಿಸುವ ಭರವಸೆ ಸತ್ಯಕ್ಕೆ ಎಷ್ಟು ದೂರ ಎಂಬುದು ತಿಳಿಯುತ್ತದೆ’ ಎಂದರು.

‘ಜಾತಿ ಪದ್ಧತಿಯ ವಿರುದ್ಧ ಮತ್ತು ಜಾತಿ ನಾಶಕ್ಕಾಗಿ ಬಸವಣ್ಣ ಹೋರಾಡಿದರು. ಆದರೆ, ಇವರು ಜಾತಿ, ಮೀಸಲಾತಿಗಾಗಿ ಹೋರಾಡುತ್ತಿದ್ದಾರೆ. ಒಬಿಸಿ ಅಂದರೆ ಹಿಂದುಳಿದ ವರ್ಗಗಳು, ಜಾತಿಗಳಲ್ಲ. ವರ್ಗ, ಧರ್ಮ ಮತ್ತು ಜಾತಿ ಬೇರೆ ಬೇರೆ. ಅಲ್ಪಸಂಖ್ಯಾತರ ಧರ್ಮದಲ್ಲಿ ಕೇವಲ ಧಾರ್ಮಿಕ ವಿಷಯ ಬರುತ್ತದೆ. ಹಿಂದುಳಿದ ವಿಷಯ ಬರುವುದಿಲ್ಲ. ಜೈನರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಇದನ್ನು ಸ್ಪಷ್ಟವಾಗಿ ಹೇಳಿದೆ. ಅದು ಲಿಂಗಾಯತರಿಗೆ ನೆನಪಿರಲಿ’ ಎಂದರು.

₹5 ಲಕ್ಷ ನಗದು ವಾಪಸ್

‘ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಜೊತೆ ನೀಡಲಾದ ₹ 5 ಲಕ್ಷ ನಗದಿನ ಚೆಕ್‌ಅನ್ನು ಎಸ್.ಎಂ.ಜಾಮದಾರ ಅವರು ತೋಂಟದಾರ್ಯ ಮಠಕ್ಕೆ ಹಿಂದಿರುಗಿಸಿದರು. ‘ಸಮಾಜದ ಹಣ ಸಮಾಜಕ್ಕೆ ಸಲ್ಲಬೇಕು’ ಎಂದು ಹೇಳಿದರು.

ಸಾರ್ವಜನಿಕರಿಂದ ಅಭಿಪ್ರಾಯ ಕೇಳಿದ ಜಿಲ್ಲಾಡಳಿತ

ವಿಜಯಪುರ ಜಿಲ್ಲೆಗೆ ಬಸವೇಶ್ವರರ ಹೆಸರು?

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಜಯಪುರ ಜಿಲ್ಲೆಗೆ 12ನೇ ಶತಮಾನದ ಸಮಾಜಸುಧಾರಕ ಬಸವೇಶ್ವರರ ಹೆಸರಿಡಬೇಕು ಎಂಬ ಬೇಡಿಕೆ ಪುನಃ ಮುನ್ನಲೆಗೆ ಬಂದಿದೆ. ಬಸವ ಜಿಲ್ಲೆ ಅಥವಾ ಬಸವೇಶ್ವರ ಜಿಲ್ಲೆ ಎಂದು ಮರು ನಾಮಕರಣ ಮಾಡಬೇಕು ಎಂಬ ಚರ್ಚೆ ನಡೆದಿದೆ. ಪರ–ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಬಸವೇಶ್ವರರು ಇಲ್ಲಿಯೇ ಜನಿಸಿದ್ದು ಮತ್ತು ಕೊಡುಗೆಗಳು ನೀಡಿದ್ದನ್ನು ಪರಿಗಣಿಸಿ ಜಿಲ್ಲೆಗೆ ಅವರ ಹೆಸರನ್ನು ಇಡುವ ಬಗ್ಗೆ ಜಿಲ್ಲಾಡಳಿತವು ಜಿಲ್ಲೆಯ ಪ್ರತಿನಿಧಿಗಳು, ಗಣ್ಯ ವ್ಯಕ್ತಿಗಳು, ಸಂಘಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಅಭಿಪ್ರಾಯ ಕೇಳಿದೆ. 15 ದಿನಗಳೊಳಗೆ ಸ್ಪಷ್ಟ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಜಿಲ್ಲಾಧಿಕಾರಿಗೆ ಸಲ್ಲಿಸಲು ಕೋರಲಾಗಿದೆ.

‘ಜಿಲ್ಲೆಗೆ ಬಸವೇಶ್ವರರ ಹೆಸರು ಇಡುವುದು ಸೂಕ್ತ’ ಎಂದು ಕೆಲ ಸಂಘಸಂಸ್ಥೆಗಳು ಮತ್ತು ಬಸವೇಶ್ವರರ ಅನುಯಾಯಿಗಳು ಹೇಳಿದರೆ, ಮರುನಾಮಕರಣ ಪ್ರಕ್ರಿಯೆಯಿಂದ ಆಡಳಿತಾತ್ಮಕವಾಗಿ ಜಿಲ್ಲೆಗೆ ಹಿನ್ನಡೆಯಾಗಲಿದೆ ಎಂಬ ಅಭಿಪ್ರಾಯ ಕೆಲ ಸಂಘಟನೆಯ ಪ್ರಮುಖರು ಹೇಳಿದ್ದಾರೆ. ‘ಹೆಸರು ಬದಲಾವಣೆಗಿಂತ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕಿದೆ’ ಎಂದು ಹಲವರು ಅಭಿಪ್ರಾಯಪಡುತ್ತಾರೆ.

‘ಬಿಜಾಪುರವನ್ನು 2014 ರಲ್ಲಿ ವಿಜಯಪುರ ಎಂದು ಮರುನಾಮಕರಣ ಮಾಡಲಾಗಿದೆ. ಈಗ ಮತ್ತೆ ಹೆಸರು ಬದಲಾವಣೆ ಮಾಡುವುದರಿಂದ ರಾಷ್ಟ್ರಮಟ್ಟದಲ್ಲಿ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಜಿಲ್ಲೆ ಹೆಸರು ಗೊಂದಲಕ್ಕೆ ಕಾರಣವಾಗುತ್ತದೆ. ಈಗಾಗಲೇ ಹಲವು ವೆಬ್‌ಸೈಟ್‌ಗಳಲ್ಲಿ ಜಿಲ್ಲೆಯ ಹೆಸರು ಸಾಲಿನಲ್ಲಿ ವಿಜಯಪುರ ಕೊನೆಯ ಕಾಣಿಸಿಕೊಳ್ಳುತ್ತಿದೆ’ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.



ವಿಜಯಪುರದ ಗೋಳಗುಮ್ಮಟ

‘ಜಿಲ್ಲೆಯ ಬದಲಿಗೆ ರಾಜ್ಯಕ್ಕೆ ಬಸವನಾಡು ಸೂಕ್ತ’

ಕೃಷ್ಣಕೊಲ್ಹಾರ ಕುಲಕರ್ಣಿ

‘ಜಾಗತಿಕ ಮಟ್ಟದಲ್ಲಿ ಅಲ್ಲದೇ ವ್ಯವಹಾರಿಕ ದೃಷ್ಟಿಯಿಂದಲೂ ವಿಜಯಪುರ ಈಗಾಗಲೇ ಪ್ರಸಿದ್ಧಿ ಗಳಿಸಿದೆ. ಬಸವೇಶ್ವರರ ಬಗ್ಗೆ ನಮಗೆಲ್ಲರಿಗೂ ಗೌರವ ಇದೆ. ಅಂತಹ ಮಹಾನ್ ಮಾನವತಾವಾದಿ ಜಿಲ್ಲೆಯಲ್ಲಿ ಜನ್ಮ ತಾಳಿದ್ದು ಹೆಮ್ಮೆಯ ಸಂಗತಿ. ಆದರೆ, ಜಿಲ್ಲೆಗೆ ಬಸವೇಶ್ವರರ ಹೆಸರು ಇಡುವುದು ಅಷ್ಟು ಸೂಕ್ತವಲ್ಲ’ ಎಂದು ಇತಿಹಾಸ ತಜ್ಞ ಕೃಷ್ಣಕೊಲ್ಹಾರ ಕುಲಕರ್ಣಿ ಹೇಳಿದರು.

‘ಬಸವಣ್ಣನ ಹೆಸರು ಚಿರಸ್ಥಾಯಿಯಾಗಿಸಲು ಹಲವು ವಿಧಾನ, ಮಾರ್ಗಗಳಿವೆ. ರಾಜಕೀಯ ಪ್ರೇರಿತವಾಗಿ ಜಿಲ್ಲೆಗೆ ಬಸವೇಶ್ವರರ ಹೆಸರಿಡುವ ಬದಲು ಕರ್ನಾಟಕ ರಾಜ್ಯದ ಹೆಸರನ್ನೇ ಬಸವನಾಡು ಎಂದು ಬದಲಿಸುವುದು ಸೂಕ್ತ. ಬಸವನ ಬಾಗೇವಾಡಿಯ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗೆ ಆದ್ಯತೆ ನೀಡಲಿ. ಇದರಿಂದ ಬಸವ ಜನ್ಮಭೂಮಿ ವಿಶ್ವ ಪ್ರಸಿದ್ಧ ಮಾಡಲಿ’ ಎಂದರು.

ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನ: ಎಂ.ಬಿ. ಪಾಟೀಲ



‘ವಿಜಯಪುರ ಹೆಸರು ಬದಲಾವಣೆ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ, ತೀರ್ಮಾನಿಸಲಾಗುವುದು. ಈಗಾಗಲೇ ಬಿಜಾಪುರವನ್ನು ವಿಜಯಪುರ ಎಂದು ಬದಲಾಯಿಸಲಾಗಿದೆ. ಮತ್ತೆ ಜಿಲ್ಲೆಯ ಹೆಸರು ಬದಲಾವಣೆ ಆಡಳಿತಾತ್ಮಕವಾಗಿ ಸೂಕ್ತವೇ ಎಂಬುದು ನೋಡಬೇಕಿದೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ ಪಾಟೀಲ ತಿಳಿಸಿದ್ದಾರೆ.

‘ಬಸವೇಶ್ವರ ಹೆಸರು ಇಡಲು ಯಾರ ವಿರೋಧವೂ ಇಲ್ಲ. ಆದರೆ, ಜಿಲ್ಲೆಗೆ ಹೆಸರಿಡುವ ಬದಲು, ವಿಜಯಪುರ ವಿಮಾನ ನಿಲ್ದಾಣ, ವಿಜಯಪುರ ರೈಲು ನಿಲ್ದಾಣ ಮತ್ತು ಬೆಂಗಳೂರು ಮೆಟ್ರೋ ನಿಲ್ದಾಣಕ್ಕೆ ಬಸವೇಶ್ವರರ ಹೆಸರು ಇಡಲು ಪ್ರಸ್ತಾವ ಸಲ್ಲಿಸಲಾಗುವುದು. ಜಿಲ್ಲಾಧಿಕಾರಿ ಅಧಿಸೂಚನೆ ಹೊರಡಿಸಿದ್ದಾರೆ. ಜನರು, ಜನಪ್ರತಿನಿಧಿಗಳ ಅಭಿಪ್ರಾಯ ಏನಿದೆ ನೋಡೋಣ’ ಎಂದರು.

ರಾಜಸ್ಥಾನದಲ್ಲಿ ಸಾರ್ವಜನಿಕ ರ್‍ಯಾಲಿಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಆಶ್ವಾಸನೆ

ಮನೆ ಯಜಮಾನಿಗೆ ವಾರ್ಷಿಕ ₹ 10,000

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ, ಮನೆ ಯಜಮಾನಿಗೆ ₹ 10,000 ವಾರ್ಷಿಕ ಗೌರವಧನ ನೀಡುವುದಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಬುಧವಾರ ಆಶ್ವಾಸನೆ ನೀಡಿದರು. ಇದೇ ವೇಳೆ ಬಿಜೆಪಿ ಘೋಷಿಸಿರುವ ಕಲ್ಯಾಣ ಕಾರ್ಯಕ್ರಮಗಳು ಟೊಳ್ಳು, ಅವು ಕಾರ್ಯಗತವಾಗುವಂಥವಲ್ಲ ಎಂದು ಇಲ್ಲಿ ಟೀಕಿಸಿದರು.

ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಪ್ರಿಯಾಂಕಾ ಮತ್ತು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು, ಎರಡು ಗ್ಯಾರಂಟಿಗಳನ್ನು ಪ್ರಕಟಿಸಿದರು. ಕಾಂಗ್ರೆಸ್ ಮರು ಆಯ್ಕೆಯಾದರೆ 1.05 ಕೋಟಿ ಜನರಿಗೆ ₹ 500 ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಮತ್ತು ಮನೆ ಯಜಮಾನಿಗೆ ₹ 10,000 ವಾರ್ಷಿಕ ಗೌರವಧನ ನೀಡುವುದಾಗಿ ಪ್ರಕಟಿಸಿದರು.

ಜುಂಜುನು ಜಿಲ್ಲೆಯ ಅರ್ಡಾವತಾ ಗ್ರಾಮದಲ್ಲಿ ರ್‍ಯಾಲಿ ನಡೆಯಿತು. ರಾಜ್ಯದಲ್ಲಿ ವಾರದೊಳಗೆ ಪ್ರಿಯಾಂಕಾ ಅವರು ಭಾಗವಹಿಸುತ್ತಿರುವ ಎರಡನೇ ರ್‍ಯಾಲಿ ಇದಾಗಿದೆ.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಹಿಳಾ ಮೀಸಲು ಮಸೂದೆ ಅಂಗೀಕಾರವಾಗಿದೆ. ಆದರೆ ಇದು ಜಾರಿಗೊಳ್ಳಲು 10 ವರ್ಷಗಳು ಬೇಕಿದೆ. ಪೂರ್ವ ರಾಜಸ್ಥಾನ ಕಾಲುವೆ ಯೋಜನೆ (ಇಆರ್‌ಸಿಪಿ) ಪ್ರಕಟಿಸಿ 10 ವರ್ಷಗಳು ಕಳೆದೇ ಹೋಗಿದ್ದರೂ ಕಾರ್ಯಗತವಾಗಿಲ್ಲ ಎಂದು ಟೀಕಿಸಿದರು.

'ಕೇಂದ್ರ ಸರ್ಕಾರದ ಯೋಜನೆಗಳು ಟೊಳ್ಳಾಗಿವೆ. ಆದರೆ ಕಾಂಗ್ರೆಸ್ ಸರ್ಕಾರದ ಯೋಜನೆಗಳು ಅನುಷ್ಠಾನಕ್ಕೆ ಬರುವಂಥದ್ದು. ಕೇಂದ್ರ ಸರ್ಕಾರ ಜನರನ್ನು ನಿಗ್ರಹಿಸಲು ಯತ್ನಿಸುತ್ತಿದೆ. ಅಧಿಕಾರದಲ್ಲಿ ಇರಲು ಮಾತ್ರ ಅದು ಬಯಸುತ್ತಿದೆ' ಎಂದು ಟೀಕಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಆಯ್ದ ಕೆಲವು ಉದ್ದಿಮೆದಾರರಿಗಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸರ್ಕಾರ ಸಾರ್ವಜನಿಕರ ದೂರು–ದುಮ್ಮಾನಗಳನ್ನು ಆಲಿಸುವುದಿಲ್ಲ ಎಂದು ಅವru ಆರೋಪಿಸಿದರು.

ಕಾಂಗ್ರೆಸ್‌ಗೆ ಸೇರ್ಪಡೆಗೊಂಡ ಬಿಜೆಪಿ ಶಾಸಕಿ: ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದಕ್ಕಾಗಿ ಪಕ್ಷದಿಂದ ಅಮಾನತುಗೊಂಡಿರುವ ಧೋಲ್‌ಪುರ ಕ್ಷೇತ್ರದ ಶಾಸಕಿ ಬಿಜೆಪಿಯ ಶೋಭಾರಾಣಿ ಕುಶ್ವಾಹ ಅವರು ಇತರ ಮೂವರ ಜತೆ ಬುಧವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಸಾರ್ವಜನಿಕ ಸಭೆಯಲ್ಲಿ ಇವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಕಿಷನ್‌ಗಡದ ಬಿಜೆಪಿ ನಾಯಕ ವಿಕಾಸ್ ಚೌಧರಿ ಮತ್ತು ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಮತಾ ಶರ್ಮಾ ಕಾಂಗ್ರೆಸ್ ಸೇರಿದರು.

ರಾಜಸ್ಥಾನದ ಜುಂಜುನು ಜಿಲ್ಲೆಯ ಅರ್ಡಾವತಾ ಗ್ರಾಮದಲ್ಲಿ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಪಾಲ್ಗೊಂಡಿದ್ದರು. ಸಚಿನ್ ಪೈಲಟ್, ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಸುಖ್‌ಜಿಂದರ್ ಸಿಂಗ್ ಇದ್ದಾರೆ ಪಿಟಿಐ ಚಿತ್ರ

ಪ್ರಿಯಾಂಕಾ ಗಾಂಧಿ ವಿರುದ್ಧ ಕ್ರಮಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಅವರ ಧಾರ್ಮಿಕ ನಿಲುವನ್ನು ಪ್ರಸ್ತಾಪಿಸಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ವಾದ್ರಾ ಅವರು ರಾಜಸ್ಥಾನದಲ್ಲಿ ಪ್ರಚಾರದ ವೇಳೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಅಲ್ಲದೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

ಕೇಂದ್ರ ಸಚಿವರಾದ ಹರ್ದೀಪ್‌ಸಿಂಗ್ ಪುರಿ, ಅರ್ಜುನ್ ರಾಮ್ ಮೇಘ್‌ವಾಲ್, ಪಕ್ಷದ ನಾಯಕರಾದ ಅನಿಲ್ ಬಲೂನಿ ಮತ್ತು ಓಂ ಪಾಠಕ್ ಅವರನ್ನು ಒಳಗೊಂಡ ಬಿಜೆಪಿ ನಿಯೋಗವು ಈ ಬಗ್ಗೆ ಆಯೋಗಕ್ಕೆ ದೂರು ಸಲ್ಲಿಸಿದೆ.

ದೇವಸ್ಥಾನಕ್ಕೆ ಮೋದಿ ಅವರು ಕಾಣಿಕೆಯಾಗಿ ನೀಡಿದ ಲಕೋಟೆಯನ್ನು ತೆರೆದಾಗ ಅದರಲ್ಲಿ ಕೇವಲ ₹ 21 ಮಾತ್ರ ಇತ್ತು ಎಂಬುದನ್ನು ಟಿವಿಯಲ್ಲಿ ನೋಡಿದ್ದಾಗಿ ಪ್ರಿಯಾಂಕಾ ಅವರು ದೌಸಾದಲ್ಲಿ ಈಚೆಗೆ ನಡೆದ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದರು. ಈ ಸುದ್ದಿ ನಿಜವೋ ಸುಳ್ಳೋ ಎಂಬುದು ತಮಗೆ ತಿಳಿದಿಲ್ಲ ಎಂದಿದ್ದರು ಎಂದು ಬಿಜೆಪಿ ದೂರಿನಲ್ಲಿ ತಿಳಿಸಿದೆ.

ಬಿಜೆಪಿಯು ಸಾರ್ವಜನಿಕರಿಗೆ ಲಕೋಟೆಗಳನ್ನು ತೋರಿಸುತ್ತದೆ. ಆದರೆ ಚುನಾವಣೆ ಬಳಿಕ ಅದರಲ್ಲಿ ಏನೂ ಇರುವುದಿಲ್ಲ ಎಂದು ಅವರು ಬಿಜೆಪಿ ವಿರುದ್ಧ ಆರೋಪಿಸುತ್ತಾ ಬಂದಿದ್ದಾರೆ ಎಂದಿರುವ ಬಿಜೆಪಿ ಪ್ರಿಯಾಂಕಾ ಅವರ ಟೀಕೆಗಳಿರುವ ವಿಡಿಯೊವನ್ನು ಕೂಡ ಆಯೋಗಕ್ಕೆ ಸಲ್ಲಿಸಿದೆ.

ಅನುಷ್ಠಾನಕ್ಕೆ ಬರುವಂಥದ್ದು. ಚುನಾವಣೆ ವೇಳೆ ಧರ್ಮ ಮತ್ತು ಜಾತಿ ಬಗ್ಗೆ ಮಾತನಾಡಿದರೆ ಬಿಜೆಪಿ ಜಯ ಗಳಿಸುತ್ತದೆ ಎಂದು ಆ ಪಕ್ಷ ತಿಳಿದಿದೆ.

ಬಿಜೆಪಿಯ ಸೂರ್ಯಕಾಂತಾ ಭೇಟಿಯಾದ ಗೆಹಲೋತ್

ಜೋಧ್‌ಪುರ (ಪಿಟಿಐ): ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಬಿಜೆಪಿಯ ಹಿರಿಯ ನಾಯಕಿ ಸೂರ್ಯಕಾಂತಾ ವ್ಯಾಸ್ ಅವರನ್ನು ಈಚೆಗೆ ಅವರ ನಿವಾಸದಲ್ಲಿ ಭೇಟಿ ಮಾಡಿದರು.

ಸರ್ದಾರಪುರ ಕ್ಷೇತ್ರದಿಂದ ಕಣಕ್ಕಿಳಿದಿರುವ ಗೆಹಲೋತ್, ಅಲ್ಲಿ ಎರಡು ದಿನಗಳವರೆಗೆ ಪ್ರಚಾರ ನಡೆಸಿ ಬಳಿಕ ಸೂರ್ಯಕಾಂತಾ ಅವರನ್ನು ಭೇಟಿ ಮಾಡಿ ಸುಮಾರು 15 ನಿಮಿಷಗಳವರೆಗೆ ಮಾತುಕತೆ ನಡೆಸಿದರು.

ಇದು ಸೌಜನ್ಯದ ಭೇಟಿ. ಜೋಧ್‌ಪುರದ ಜನರಿಗಾಗಿ ಅವರು ದೀರ್ಘಕಾಲದವರೆಗೆ ಕೆಲಸ ಮಾಡಿದ್ದಾರೆ. ಅವರಿಗೆ ನನ್ನ ಗೌರವ ಸೂಚಿಸಲು ಅವರನ್ನು ಭೇಟಿಯಾಗಿದ್ದೆ ಎಂದು ಗೆಹಲೋತ್ ಹೇಳಿದ್ದಾರೆ.

ಅಭ್ಯರ್ಥಿಗಳ ಪಟ್ಟಿಯಲ್ಲಿ ಬಿಜೆಪಿಯು ಸೂರ್ಯಕಾಂತಾ ಅವರ ಹೆಸರನ್ನು ಕೈಬಿಟ್ಟಿದೆ. ಅವರ ವಯಸ್ಸಿನ ಕಾರಣ ಅವರಿಗೆ ಮತ್ತೆ ಟಿಕೆಟ್ ನೀಡಿಲ್ಲ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ. ಆದರೆ ತಮ್ಮನ್ನು ಹೊಗಳಿದ ಕಾರಣಕ್ಕೇ ಅವರಿಗೆ ಟಿಕೆಟ್ ನೀಡಿಲ್ಲ. ಯಾರದೋ ಕಾರ್ಯವನ್ನು ಹೊಗಳುವುದು ಕೆಟ್ಟತನವಲ್ಲ ಎಂದು ಗೆಹಲೋತ್ ಹೇಳಿದ್ದಾರೆ.

'ಸರ್ಕಾರ ಒಳ್ಳೆಯ ಕೆಲಸ ಮಾಡಿದ್ದರೆ, ಮುಖ್ಯಮಂತ್ರಿಯನ್ನು ವಿರೋಧ ಪಕ್ಷದ ಶಾಸಕರು ಹೊಗಳುವುದು ತಪ್ಪೇ? ನನ್ನೊಂದಿಗೆ ಸೌಹಾರ್ದ ಬಾಂಧವ್ಯ ಹೊಂದಿರುವವರನ್ನು ಯಾಕೆ ಶಿಕ್ಷಿಸಬೇಕು?'ಎಂದೂ ಕೇಳಿದ್ದಾರೆ.

ಮುಖ್ಯಾಂಶಗಳು

- ₹500 ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಒದಗಿಸುವ ಆಶ್ವಾಸನೆ
- ಬಿಜೆಪಿಯಿಂದ ಟೊಳ್ಳು ಭರವಸೆ: ಕಾಂಗ್ರೆಸ್ ಆರೋಪ

ಅಮಿತ್ ಶಾ ವಿರುದ್ಧ ಆಯೋಗಕ್ಕೆ ಕಾಂಗ್ರೆಸ್ ದೂರು

ನವದೆಹಲಿ (ಪಿಟಿಐ): ಛತ್ತೀಸಗಢ ಚುನಾವಣಾ ಪ್ರಚಾರದ ವೇಳೆ ಕೇಂದ್ರ ಗೃಹಸಚಿವ ಅಮಿತ್ ಶಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ನೀಡಿದ ಹೇಳಿಕೆಗಳು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಆಗಿವೆ ಎಂದು ಕಾಂಗ್ರೆಸ್ ಬುಧವಾರ ದೂರು ನೀಡಿದೆ.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರುಗಳನ್ನು ಭೇಟಿ ಮಾಡಿದ ಕಾಂಗ್ರೆಸ್ ನಾಯಕರ ನಿಯೋಗವು ಛತ್ತೀಸಗಢ, ಮಧ್ಯಪ್ರದೇಶ ಮತ್ತು ತೆಲಂಗಾಣದಲ್ಲಿ ನೀತಿ ಸಂಹಿತೆಯ ಉಲ್ಲಂಘನೆಗೆ ಸಂಬಂಧಿಸಿದಂತೆ ಎಂಟು ಮನವಿ ಪತ್ರಗಳನ್ನು ಸಲ್ಲಿಸಿತು.

'ಸೀಟು: ಸ್ಥಳೀಯವಾಗಿ ನಿರ್ಧಾರ'

ವಿಧಾನಸಭಾ ಚುನಾವಣೆ: 'ಇಂಡಿಯಾ' ಸೀಟು ಹಂಚಿಕೆ ವಿವಾದಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: 'ವಿಧಾನಸಭಾ ಚುನಾವಣೆಯಲ್ಲಿ 'ಇಂಡಿಯಾ' ಮಿತ್ರ ಪಕ್ಷಗಳ ನಡುವಿನ ಸೀಟು ಹಂಚಿಕೆಯ ನಿರ್ಧಾರವನ್ನು ಆಯಾ ರಾಜ್ಯಗಳ ಕಾಂಗ್ರೆಸ್ ನಾಯಕರು ತೆಗೆದುಕೊಳ್ಳಲಿದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

'ಮೈತ್ರಿ ಬೇಕೇ ಬೇಡವೇ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದಿದ್ದ ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಹೇಳಿಕೆಗೆ ಬುಧವಾರ ಪ್ರತಿಕ್ರಿಯೆ ನೀಡಿದ ಖರ್ಗೆ, 'ವಿಧಾನಸಭಾ ಚುನಾವಣೆಯಲ್ಲಿ ಒಂದು ಕಡೆ ಕಮ್ಯುನಿಸ್ಟ್ ಪಕ್ಷದೊಂದಿಗೆ ಹೊಂದಾಣಿಕೆಯಾದರೆ, ಮತ್ತೊಂದು ಕಡೆ ಎಸ್‌ಪಿಯೊಂದಿಗೆ ಆಗಬಹುದು. ಹೀಗಾಗಿ, ಸ್ಥಳೀಯವಾಗಿ ಪಕ್ಷಕ್ಕೆ ಯಾರು ಹೊಂದಾಣಿಕೆ ಆಗಬಹುದು ಎಂಬುದನ್ನು ರಾಜ್ಯ ಕಾಂಗ್ರೆಸ್ ನಾಯಕರೇ ತೀರ್ಮಾನಿಸುವರು' ಎಂದರು.

'ಕಳೆದ ಬಾರಿ ಎಷ್ಟು ಸ್ಥಾನ ಗೆದ್ದಿದ್ದರು, ಈಗ ಎಷ್ಟು ಕೇಳುತ್ತಿದ್ದಾರೆ ಇದೆಲ್ಲವನ್ನು ಪರಿಗಣಿಸಿ ಅವರೇ ಅಂತಿಮ ನಿರ್ಧಾರ ತೆಗೆದುಕೊಳ್ಳುವರು. ಐದು ರಾಜ್ಯಗಳ ಚುನಾವಣೆ ನಡೆಯುತ್ತಿರುವುದರಿಂದ ಲೋಕಸಭೆಯ ಸೀಟು ಹಂಚಿಕೆ ಆಗಿಲ್ಲ' ಎಂದು ಸ್ಪಷ್ಟಪಡಿಸಿದರು.

'ಬಿಜೆಪಿ ವಿರುದ್ಧ ಆಡಳಿತ ವಿರೋಧಿ ಅಲೆ ಇದ್ದು, ಚುನಾವಣೆಯಲ್ಲಿ ಕೊಟ್ಟ ಭರವಸೆಗಳನ್ನು ಈಡೇರಿಸಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿ ಚುನಾವಣೆಯನ್ನು ತನ್ನದೇ ಚುನಾವಣೆ ಎಂಬಂತೆ ಪ್ರತಿ ಕ್ಷೇತ್ರಕ್ಕೂ ಹೋಗಿ ಅಭ್ಯರ್ಥಿ, ಮುಖ್ಯಮಂತ್ರಿಗಳ ಮುಖ ನೋಡಿ ಮತ ಹಾಕಬೇಡಿ. ನನ್ನನ್ನು ನೋಡಿ ಮತ ಕೊಡಿ ಎನ್ನುತ್ತಾರೆ. ಮೋದಿ ಅವರು ರಾಜ್ಯಕ್ಕೆ ಮಂತ್ರಿಯಾಗುತ್ತಾರಾ? ಸ್ಥಳೀಯವಾಗಿ ಕೆಲಸ ಮಾಡುವವರನ್ನು ನೋಡಿ ಮತದಾರರು ಮತ ಕೊಡುತ್ತಾರೆ' ಎಂದರು.

'ಮೋದಿ ಅವರು ವಿರೋಧ ಪಕ್ಷದವರನ್ನು ಕುಗ್ಗಿಸಲು ಮತ್ತು ಗೆಲ್ಲುವ ಪ್ರದೇಶದಲ್ಲಿನ ಮುಖಂಡರನ್ನು ಗುರಿಯಾಗಿಸಿಕೊಂಡು ಮೊದಲಿಂದಲೂ ಐಟಿ ದಾಳಿ ಮಾಡಿಸುತ್ತಿದ್ದಾರೆ. ಈ ಮೂಲಕ ಜನರನ್ನು ಬೆದರಿಸಿ, ಕಾಂಗ್ರೆಸ್ ಮತ್ತು ವಿರೋಧ ಪಕ್ಷವನ್ನು ಬೆಂಬಲಿಸದಂತೆ ಯತ್ನಿಸುತ್ತಿದ್ದಾರೆ. ಜನರಿಗೆ ಇದೆಲ್ಲ ಗೊತ್ತಾಗಿ, ಐಟಿ ದಾಳಿಗೂ ಹೆದರದೆ ನಮ್ಮ ಪಕ್ಷಕ್ಕೆ ಬೆಂಬಲ ಕೊಡಲಿದ್ದಾರೆ' ಎಂದರು.

'ಕಾಂಗ್ರೆಸ್ ಸರ್ಕಾರ ಬಂದು ಕೆಲವು ತಿಂಗಳಾಗಿದೆ. ಮಂಡನೆಯಾದ ಬಜೆಟ್ ಅನುದಾನ ಹೊರ ಬಂದು ಖರ್ಚಾಗಿಲ್ಲ. ಚುನಾವಣೆಗಾಗಿ ಬಿಜೆಪಿಯವರು ಸರ್ಕಾರದ ವಿರುದ್ಧ ಅಪಪ್ರಚಾರ ಮಾಡಲು ಯತ್ನಿಸುತ್ತಿದ್ದಾರೆ. ಅದು ನಡೆಯುವುದಿಲ್ಲ' ಎಂದರು.

ಬಿಜೆಪಿ ತೊರೆದ ರಾಜ್ ಗೋಪಾಲ್

ಹೈದರಾಬಾದ್ (ಪಿಟಿಐ): ಕಳೆದ ವರ್ಷ ಮುನುಗೋಡು ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಕೋಮಟಿರೆಡ್ಡಿ ರಾಜ್ ಗೋಪಾಲ್ ರೆಡ್ಡಿ ಅವರು ಬುಧವಾರ ಪಕ್ಷಕ್ಕೆ ರಾಜೀನಾಮೆ ನೀಡಿರುವುದಾಗಿ ಘೋಷಿಸಿದ್ದಾರೆ.

ಕಾಂಗ್ರೆಸ್‌ಗೆ ಮರಳಲು ಅವರು ಸಜ್ಜಾಗಿದ್ದು ಬಿಜೆಪಿಗೆ ಹಿನ್ನಡೆ ಆದಂತೆ ಆಗಿದೆ. ಮುನುಗೋಡು ಶಾಸಕರಾಗಿದ್ದ ರಾಜ್ ಗೋಪಾಲ್ ಅವರು ಕಳೆದ ವರ್ಷ ಆಗಸ್ಟ್‌ನಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು. ಬಿಜೆಪಿ ಟಿಕೆಟ್‌ನಿಂದ ಮರು ಆಯ್ಕೆ ಬಯಸಿದ್ದರು. ಆದರೆ ಬಿಆರ್‌ಎಸ್ ಅಭ್ಯರ್ಥಿ ಕೆ. ಪ್ರಭಾಕರ್ ರೆಡ್ಡಿ ಅವರ ವಿರುದ್ಧ ಸೋತಿದ್ದರು.

'ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಅವರ ಭ್ರಷ್ಟಾಚಾರ ಕುರಿತು ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ' ಎಂದು ಅವರು ದೂರಿದರು.

ಚುನಾವಣಾ ಕಣದಲ್ಲಿ...

ಖರ್ಗೆ ವಿರುದ್ಧ ರಾಮ ರಾವ್ ಟೀಕೆ

ಹೈದರಾಬಾದ್ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ರಾಜ್ಯವಾಗಿರುವ ಕರ್ನಾಟಕದಲ್ಲಿಯೇ ಅಗತ್ಯ ಪ್ರಮಾಣದಲ್ಲಿ ವಿದ್ಯುತ್ ಪೂರೈಸಲು ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಆಗುತ್ತಿಲ್ಲ ಎಂದು ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ. ರಾಮ ರಾವ್ ಅವರು ವಾಗ್ದಾಳಿ ನಡೆಸಿದ್ದಾರೆ.

ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ರಾಜ್ಯ ಸಾಧಿಸಿರುವ ಅಭಿವೃದ್ಧಿಯು ಹಳಿತಪ್ಪಲಿದೆ ಎಂದು ರಾಮ ರಾವ್ ಅವರು ಎಚ್ಚರಿಸಿದ್ದಾರೆ. ತೆಲಂಗಾಣ ವಿಧಾನಸಭೆಗೆ ನವೆಂಬರ್ 30ರಂದು ಚುನಾವಣೆ ನಡೆಯಲಿದೆ.

ಕಾಂಗ್ರೆಸ್ಸಿಗೆ ಮತ ಹಾಕಿ, ಅದನ್ನು ಅಧಿಕಾರಕ್ಕೆ ತಂದಿದ್ದಕ್ಕಾಗಿ ಕರ್ನಾಟಕದ ರೈತರು ಈಗ ಪಶ್ಚಾತ್ತಾಪಪಡುತ್ತಿದ್ದಾರೆ ಎಂದು ಇಲ್ಲಿನ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ರಾವ್ ಹೇಳಿದ್ದಾರೆ. 'ಖರ್ಗೆಯವರೇ, ಯಾವ ಖಾತರಿಯೂ ಇಲ್ಲ. ನಿಮ್ಮ ತವರು ರಾಜ್ಯದಲ್ಲಿ ಐದು ತಾಸು ಮಾತ್ರ ವಿದ್ಯುತ್ ಸಿಗುತ್ತಿದೆ. ನೀವು ಮತ್ತು ನಿಮ್ಮ ಪಕ್ಷವು ತೆಲಂಗಾಣದಲ್ಲಿ ಯಾವ ಸಾಧನೆ ತೋರಬಲ್ಲಿರಿ' ಎಂದು ರಾಮ ರಾವ್ ಪ್ರಶ್ನಿಸಿದ್ದಾರೆ.

ನಟ ರಾಜ್‌ಕುಮಾರ್ ರಾವ್ ರಾಷ್ಟ್ರೀಯ ಐಕಾನ್

ನವದೆಹಲಿ (ಪಿಟಿಐ): 'ನ್ಯೂಟನ್' ಚಲನಚಿತ್ರದ ನಟ ರಾಜ್‌ಕುಮಾರ್ ರಾವ್ ಅವರನ್ನು ರಾಷ್ಟ್ರೀಯ ಐಕಾನ್ ಆಗಿ ಚುನಾವಣಾ ಆಯೋಗ ನೇಮಕ ಮಾಡಿದೆ.

ಚುನಾವಣೆಯಲ್ಲಿ ಭಾಗವಹಿಸುವಂತೆ ಮತದಾರರನ್ನು ಪ್ರೋತ್ಸಾಹಿಸಲು ಆಯೋಗವು ದೇಶದ ಪ್ರಮುಖರನ್ನು ರಾಷ್ಟ್ರೀಯ ಐಕಾನ್ ಎಂದು ನೇಮಿಸುತ್ತದೆ. ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಅವರು ರಾವ್ ಅವರ ನೇಮಕವನ್ನು ಗುರುವಾರ ಅಧಿಕೃತವಾಗಿ ಘೋಷಣೆ ಮಾಡುವರು. ನಟರಾದ ಪಂಕಜ್ ತ್ರಿಪಾಠಿ ಮತ್ತು ಅಮೀರ್‌ಖಾನ್, ಕ್ರೀಡಾಪಟುಗಳಾದ ಸಚಿನ್ ತೆಂಡುಲ್ಕರ್, ಎಂ.ಎಸ್.ಧೋನಿ ಮತ್ತು ಮೇರಿ ಕೋಮ್ ಅವರಿಗೆ ಈಗಾಗಲೇ ಈ ಗೌರವ ಲಭಿಸಿದೆ. 'ನ್ಯೂಟನ್' ಚಿತ್ರದಲ್ಲಿ ನಕ್ಸಲ್ ಪೀಡಿತ ಛತ್ತೀಸಗಢದಲ್ಲಿ ಚುನಾವಣೆ ನಡೆಸುವ ಪ್ರಮುಖ ವ್ಯಕ್ತಿ ಪಾತ್ರದಲ್ಲಿ ರಾವ್ ಅಭಿನಯಿಸಿದ್ದು ಈ ಪಾತ್ರಕ್ಕಾಗಿ ಇವರು ಪ್ರಶಸ್ತಿಯನ್ನೂ ಪಡೆದಿದ್ದಾರೆ.

112 ಮಂದಿ ಕೋಟ್ಯಧಿಪತಿಗಳು

ಐಜ್ವಾಲ್ (ಪಿಟಿಐ): ಮಿಜೋರಾಂ ವಿಧಾನಸಭಾ ಚುನಾವಣೆಯ ಕಣದಲ್ಲಿರುವ ಒಟ್ಟು 174 ಅಭ್ಯರ್ಥಿಗಳಲ್ಲಿ 112 ಮಂದಿ ಕೋಟ್ಯಧಿಪತಿಗಳಾಗಿದ್ದು, ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಾಧ್ಯಕ್ಷ ಆಂಡ್ರ್ಯೂ ಲಾಲ್ರೆಮ್ಕಿಮಾ ಪಚುವು ಅವರು ಅತ್ಯಂತ ಶ್ರೀಮಂತ ಅಭ್ಯರ್ಥಿಯಾಗಿದ್ದಾರೆ.

ಅಭ್ಯರ್ಥಿಗಳು ಸಲ್ಲಿಸಿರುವ ಅಫಿಡವಿಟ್‌ಗಳ ಪ್ರಕಾರ, ಶೇಕಡಾ 64.4 ರಷ್ಟು ಅಭ್ಯರ್ಥಿಗಳು ₹1 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿಯನ್ನು ಘೋಷಿಸಿದ್ದಾರೆ. ₹68.93 ಕೋಟಿ ಮೌಲ್ಯದ ಘೋಷಿತ ಆಸ್ತಿಯೊಂದಿಗೆ, ಎಎಪಿಯ ಮಿಜೋರಾಂ ರಾಜ್ಯ ಘಟಕದ ಅಧ್ಯಕ್ಷ ಆಂಡ್ರ್ಯೂ ಲಾಲ್ರೆಮ್ಕಿಮಾ ಪಚುವು ಕಣದಲ್ಲಿರುವ ಅಭ್ಯರ್ಥಿಗಳಲ್ಲೇ ಅತ್ಯಂತ ಶ್ರೀಮಂತರಾಗಿದ್ದಾರೆ. ಅವರು ಐಜ್ವಾಲ್ ಉತ್ತರ-III ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಪಚುವು ನಂತರದ ಸ್ಥಾನಗಳಲ್ಲಿ ₹55.6 ಕೋಟಿ ಆಸ್ತಿ ಘೋಷಿಸಿ ಕೊಂಡಿರುವ ಕಾಂಗ್ರೆಸ್‌ನ ಆರ್ ವನ್ಲಾಲ್ಟ್ಲುವಾಂಗಾ (ಸೆರ್ಚಿಪ್ ಕ್ಷೇತ್ರ) ಮತ್ತು ಜೋರಾಮ್ ಪೀಪಲ್ಸ್ ಮೂವ್‌ಮೆಂಟ್‌ನ ಎಚ್ ಗಿಂಜಲಾಲಾ (ಚಾಂಫೈ ಉತ್ತರ ಕ್ಷೇತ್ರ) ₹36.9 ಕೋಟಿ ಘೋಷಿತ ಆಸ್ತಿಯೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಜೆಡಿ(ಯು) ಮೊದಲ ಪಟ್ಟಿ ಬಿಡುಗಡೆ

ಪಟ್ನಾ (ಪಿಟಿಐ): ಮಧ್ಯಪ್ರದೇಶದಲ್ಲಿ ಜೆಡಿ(ಯು) ಐದು ಸ್ಥಾನಕ್ಕಾಗಿ ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ. ಪಕ್ಷ ಪ್ರಕಟಿಸಿದ ಮೊದಲ ಪಟ್ಟಿ ಇದಾಗಿದೆ.

ಚಂದ್ರಪಾಲ್ ಯಾದವ್ (ಪಿಚ್ಚೋರ್), ರಾಮ್ ಕುನ್ವರ್ (ರಾಜ್‌ನಗರ್), ಶಿವ ನಾರಾಯಣ್ ಸೋನಿ (ವಿಜಯ ರಾಘವ್‌ಗಡ), ತೋಲ್ ಸಿಂಗ್ ಭುರಿಯಾ (ಥಾಂಡ್ಲಾ) ಮತ್ತು ರಾಮೇಶ್ವರ್ ಸಿಂಗ್ಲಾ (ಪೆಟಲವಾಡ್) ಅವರು ಸ್ಪರ್ಧಿಸಲಿದ್ದಾರೆ ಎಂದು ಎಂದು ಜೆಡಿ (ಯು) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಫ್ಜಖ್ ಅಹ್ಮದ್ ಖಾನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗಾಜಾದಲ್ಲಿ ವಿಶ್ವಸಂಸ್ಥೆಯ ನೆರವಿಗೆ ಅಡ್ಡಿ

ರಫಾ (ಎಪಿ): ಇಂಧನ ಪೂರೈಕೆಯು ತಕ್ಷಣ ಆರಂಭವಾಗದೆ ಇದ್ದಲ್ಲಿ ಗಾಜಾ ಪಟ್ಟಿಯ ಆದ್ಯಂತ ತಾನು ನೆರವು ಕಾರ್ಯವನ್ನು ಕಡಿಮೆ ಮಾಡಬೇಕಾಗುತ್ತದೆ ಎಂದು ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿನ ವಿಶ್ವಸಂಸ್ಥೆಯ ಏಜೆನ್ಸಿಯು ಬುಧವಾರ ಎಚ್ಚರಿಕೆ ನೀಡಿದೆ.

ಅಗತ್ಯ ವಸ್ತುಗಳ ಸಂಗ್ರಹವು ಖಾಲಿಯಾಗುತ್ತಿರುವ ಕಾರಣ ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಗಾಜಾದ ಆಸ್ಪತ್ರೆಗಳು ಹೆಣಗುತ್ತಿವೆ. ಇಸ್ರೇಲ್‌ನ ವಾಯುದಾಳಿ ಮುಂದುವರಿದಿರುವ ಪರಿಣಾಮವಾಗಿ ಮಂಗಳವಾರದಿಂದ ಬುಧವಾರದವರೆಗಿನ ಅವಧಿಯಲ್ಲಿ ಒಟ್ಟು 750ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಹೇಳಿದೆ.

ಗಾಜಾ ಪಟ್ಟಿಯ 23 ಲಕ್ಷ ಜನರ ಪೈಕಿ ಅಂದಾಜು 14 ಲಕ್ಷ ಮಂದಿ, ಗಾಜಾ ಪಟ್ಟಿಯಲ್ಲಿಯೇ ನಿರಾಶ್ರಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ. ಆರು ಲಕ್ಷ ಮಂದಿ ವಿಶ್ವಸಂಸ್ಥೆಯ ಶಿಬಿರಗಳಲ್ಲಿ ನೆರವು ಪಡೆದಿದ್ದಾರೆ.

ಕೆಲವು ಅಗತ್ಯ ವಸ್ತುಗಳನ್ನು ಈಜಿಪ್ಟ್ ಕಡೆಯಿಂದ ಗಾಜಾ ಪಟ್ಟಿಗೆ ಸಾಗಿಸಲು ಇಸ್ರೇಲ್ ಅನುಮತಿ ನೀಡಿದೆ. ಆದರೆ ಇಂಧನ ಪೂರೈಕೆಗೆ ಅವಕಾಶ ಕಲ್ಪಿಸಿಲ್ಲ.

ಗಾಯಾಳುಗಳಲ್ಲಿ ಹಲವರನ್ನು ಸರಳವಾದ ವೈದ್ಯಕೀಯ ನೆರವೂ ಇಲ್ಲದೆ ಆಸ್ಪತ್ರೆಗಳಲ್ಲಿ ನೆಲದ ಮೇಲೆ ಮಲಗಿಸಲಾಗುತ್ತಿದೆ. ಶಸ್ತ್ರಚಿಕಿತ್ಸೆ ಪಡೆಯಬೇಕಾದವರು ದಿನಗಟ್ಟಲೆ ಕಾಯಬೇಕಾಗಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಸಿರಿಯಾದ ಮಿಲಿಟರಿ ನೆಲೆಗಳ ಮೇಲೆ ಇಸ್ರೇಲ್ ಬುಧವಾರ ವಾಯುದಾಳಿ ನಡೆಸಿದೆ. ಇದರಲ್ಲಿ ಎಂಟು ಮಂದಿ ಸೈನಿಕರು ಸತ್ತಿದ್ದಾರೆ ಎಂದು ಸಿರಿಯಾದ ಸನಾ ಸುದ್ದಿಸಂಸ್ಥೆ ಹೇಳಿದೆ.

ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆಯ ನಾಯಕ ಹಸನ್ ನಸ್ರಲ್ಲಾ, ಹಮಾಸ್ ಮತ್ತು ಪ್ಯಾಲೆಸ್ಟೀನಿಯನ್ ಇಸ್ಲಾಮಿಕ್ ಜಿಹಾದ್ ಸಂಘಟನೆಯ ಮುಖಂಡರು ಬುಧವಾರ ಭೇಟಿ ಮಾಡಿದ್ದಾರೆ ಎಂದು ವರದಿಯಾಗಿದೆ. ಯುದ್ಧ ಆರಂಭವಾದ ನಂತರದಲ್ಲಿ ಈ ಮೂರು ಸಂಘಟನೆಗಳ ಮುಖಂಡರು ಭೇಟಿಯಾದ ಬಗ್ಗೆ ವರದಿಯಾಗಿರುವುದು ಇದೇ ಮೊದಲು. ಈ ಮೂರು ಸಂಘಟನೆಗಳ ನಡುವೆ ಸಮನ್ವಯ ಇದ್ದಿರಬಹುದು ಎಂಬುದನ್ನು ಭೇಟಿಯು ಸೂಚಿಸುತ್ತಿದೆ.

ಈ ಯುದ್ಧದಲ್ಲಿ ಇದುವರೆಗೆ 6,500ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ನಾಗರಿಕರು ಬಲಿಯಾಗಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ.

ಒತ್ತೆಯಾಳುಗಳ ಬಿಡುಗಡೆಗೆ ಮಧ್ಯಸ್ಥಿಕೆ ಕೆಲಸ ಮಾಡುತ್ತಿರುವ ಕತಾರ್, ಮಾತುಕತೆಗಳಲ್ಲಿ ಶೀಘ್ರದಲ್ಲಿಯೇ ಒಂದಿಷ್ಟು ಫಲ ಸಿಗಬಹುದು ಎಂಬ ಆಶಾಭಾವನೆ ವ್ಯಕ್ತಪಡಿಸಿದೆ. ಕತಾರ್ ನೆರವಿಗೆ ಇಸ್ರೇಲ್ ಮೆಚ್ಚುಗೆಯ ಮಾತು ಹೇಳಿದೆ.

ರಫಾದಲ್ಲಿನ ಪ್ಯಾಲೆಸ್ಟೀನ್ ನಾಗರಿಕರ ನಿರಾಶ್ರಿತರ ಶಿಬಿರದಲ್ಲಿ ಧ್ವಂಸಗೊಂಡಿರುವ ಕಟ್ಟಡವೊಂದರಿಂದ ಗಾಯಾಳುವೊಬ್ಬರನ್ನು ರಕ್ಷಿಸಲಾಯಿತು (ಎಎಫ್‌ಪಿ ಚಿತ್ರ)

ಹಮಾಸ್ ಭಯೋತ್ಪಾದಕ ಸಂಘಟನೆ ಅಲ್ಲ: ಟರ್ಕಿ

ಅಂಕಾರಾ (ರಾಯಿಟರ್ಸ್): ಪ್ಯಾಲೆಸ್ಟೀನ್‌ನ ಹಮಾಸ್ ಸಂಘಟನೆಯು 'ಭಯೋತ್ಪಾದಕ ಸಂಘಟನೆ ಅಲ್ಲ' ಎಂದು ಟರ್ಕಿ ಅಧ್ಯಕ್ಷ ತಯ್ಯಿಪ್ ಎರ್ಡೊಗನ್ ಅವರು ಹೇಳಿದ್ದಾರೆ. ಅದು ತನ್ನ ನೆಲವನ್ನು ರಕ್ಷಿಸಿಕೊಳ್ಳಲು ಹೋರಾಟ ನಡೆಸುತ್ತಿರುವ ವಿಮೋಚನಾ ಗುಂಪು ಎಂದು ಅವರು ಬಣ್ಣಿಸಿದ್ದಾರೆ.

ಟರ್ಕಿ ಸಂಸತ್ತಿನಲ್ಲಿ ಮಾತನಾಡಿರುವ ಎರ್ಡೊಗನ್ ಅವರು, 'ನಮ್ಮ ದೇಶದ ಒಳ್ಳೆಯ ಉದ್ದೇಶವನ್ನು ಇಸ್ರೇಲ್ ಬಳಸಿಕೊಂಡಿದೆ. ಮೊದಲು ಯೋಜಿಸಿದಂತೆ ನಾನು ಇಸ್ರೇಲ್‌ಗೆ ಭೇಟಿ ನೀಡುವುದಿಲ್ಲ' ಎಂದು ಹೇಳಿದ್ದಾರೆ.

ವಿಶ್ವಸಂಸ್ಥೆ ಸಿಬ್ಬಂದಿಗೆ ವೀಸಾ ಇಲ್ಲ: ಇಸ್ರೇಲ್ ರಾಯಭಾರಿ

ವಿಶ್ವಸಂಸ್ಥೆಯ ಸಿಬ್ಬಂದಿಗೆ ವೀಸಾ ನೀಡುವುದನ್ನು ಇಸ್ರೇಲ್ ಸ್ಥಗಿತಗೊಳಿಸಲಿದೆ ಎಂದು ವಿಶ್ವಸಂಸ್ಥೆಯಲ್ಲಿ ಇಸ್ರೇಲ್‌ನ ರಾಯಭಾರಿ ಆಗಿರುವ ಗಿಲಾದ್ ಎರ್ಡನ್ ಹೇಳಿದ್ದಾರೆ. ಹಮಾಸ್ ದಾಳಿಯುವ 'ಪ್ರಚೋದನೆ ಇಲ್ಲದೆ ಆಗಿದ್ದಲ್ಲ' ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರು ಹೇಳಿದ ನಂತರದಲ್ಲಿ ಇಸ್ರೇಲ್ ಈ ತೀರ್ಮಾನ ಪ್ರಕಟಿಸಿದೆ.

- ಗಾಜಾ ಪಟ್ಟಿಯಲ್ಲಿ 14 ಲಕ್ಷ ಮಂದಿ ನಿರಾಶ್ರಿತರು
- ಸಿರಿಯಾ ಮೇಲೆ ಇಸ್ರೇಲ್ ದಾಳಿ
- ಹಿಜ್ಬುಲ್ಲಾ, ಹಮಾಸ್, ಪ್ಯಾಲೆಸ್ಟೀನಿಯನ್ ಇಸ್ಲಾಮಿಕ್ ಜಿಹಾದ್ ಸಂಘಟನೆಗಳ ಮುಖ್ಯಸ್ಥರ ಮಾತುಕತೆ
- ಯುದ್ಧದಲ್ಲಿ 6,500ಕ್ಕೂ ಹೆಚ್ಚು ನಾಗರಿಕರು ಬಲಿ

'ಹಮಾಸ್ ದಾಳಿ ಪ್ರಚೋದನೆ ಇಲ್ಲದೇ ಆಗಿದ್ದಲ್ಲ'

ಒಂದನೇ ಪುಟದಿಂದ...

'ಬೇರೆಯವರು ಬಂದು ನೆಲೆಸಿ ತಮ್ಮ ನೆಲವನ್ನು ಕ್ರಮೇಣ ಕಬಳಿಸಿದ್ದನ್ನು, ಅರ್ಥವ್ಯವಸ್ಥೆಯು ಹಾಳಾಗಿದ್ದನ್ನು, ತಮ್ಮ ಜನರು ವಲಸೆ ಹೋಗಿದ್ದನ್ನು, ತಮ್ಮ ಮನೆಗಳು ಧ್ವಂಸಗೊಂಡಿದ್ದನ್ನು ಪ್ಯಾಲೆಸ್ಟೀನ್ ಜನ ಕಂಡಿದ್ದಾರೆ. ತಮ್ಮ ಸಂಕಷ್ಟಗಳಿಗೆ ರಾಜಕೀಯ ಪರಿಹಾರ ಸಿಗುತ್ತದೆ ಎಂಬ ಭರವಸೆಯು ಅವರಲ್ಲಿ ಅಳಿಸಿಹೋಗುತ್ತಿದೆ' ಎಂದು ಗುಟೆರಸ್ ಹೇಳಿದ್ದರು. ಈ ಸಭೆಯಲ್ಲಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರೂ ಇದ್ದರು.

'ಆದರೆ ಪ್ಯಾಲೆಸ್ಟೀನ್ ನಾಗರಿಕ ಕುಂದುಕೊರತೆಗಳು ಹಮಾಸ್ ನಡೆಸಿದ ದಾಳಿಗೆ ಸಮರ್ಥನೆಯಲ್ಲ. ಹಾಗೆಯೇ, ಹಮಾಸ್ ನಡೆಸಿದ ದಾಳಿಯು, ಪ್ಯಾಲೆಸ್ಟೀನ್ ಜನರಿಗೆ ನೀಡುತ್ತಿರುವ ಸಾಮೂಹಿಕ ಶಿಕ್ಷೆಗೆ ಸಮರ್ಥನೆ ಆಗಲಾರದು' ಎಂದು ಕೂಡ ಹೇಳಿದ್ದರು.

'ಮಹಾಪ್ರಧಾನ ಕಾರ್ಯದರ್ಶಿಯವರೇ ನೀವು ನೈತಿಕತೆ, ನಿಷ್ಪಕ್ಷಪಾತ ಧೋರಣೆಯನ್ನು ಕಳೆದುಕೊಂಡಿದ್ದೀರಿ. ದಾಳಿಯು ಪ್ರಚೋದನೆ ಇಲ್ಲದೆ ಆಗಿದ್ದಲ್ಲ ಎನ್ನುವ ಮೂಲಕ ನೀವು ಭಯೋತ್ಪಾ ದನೆಯನ್ನು ಸಹಿಸಿಕೊಳ್ಳುತ್ತಿದ್ದೀರಿ. ಅದನ್ನು ಸಹಿಸಿಕೊಳ್ಳುವ ಮೂಲಕ ಸಮರ್ಥನೆಯನ್ನೂ ಮಾಡುತ್ತಿದ್ದೀರಿ' ಎಂದು ವಿಶ್ವಸಂಸ್ಥೆಯಲ್ಲಿನ ಇಸ್ರೇಲ್ ರಾಯಭಾರಿ ಗಿಲಾದ್ ಎರ್ಡನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮ್ಮ ಮಾತುಗಳನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ ಎಂದು ಗುಟೆರಸ್ ಹೇಳಿದ್ದಾರೆ. 'ಹಮಾಸ್ ಕೃತ್ಯವನ್ನು ನಾನು ಸಮರ್ಥಿಸಿದ್ದೇನೆ ಎಂಬ ರೀತಿಯಲ್ಲಿ ತಪ್ಪು ವ್ಯಾಖ್ಯಾನ ಮಾಡಿರುವುದನ್ನು ಕಂಡು ನನಗೆ ಆಘಾತವಾಗಿದೆ... ' ಎಂದಿದ್ದಾರೆ.

ಭರತ್‌ಪುರ: ಟ್ರ್ಯಾಕ್ಟರ್ ಹರಿಸಿ ಕೊಲೆ ಪ್ರಕರಣ, ರಾಜಕೀಯ ಕೆಸರೆರೆಚಾಟ

ಪ್ರಜಾವಾಣಿ ವಾರ್ತೆ

ಜೈಪುರ: ಭೂವಿವಾದಕ್ಕೆ ಸಂಬಂಧಿಸಿದಂತೆ ಭರತ್‌ಪುರ ಜಿಲ್ಲೆಯಲ್ಲಿ ಟ್ರ್ಯಾಕ್ಟರ್ ಹರಿಸಿ ವ್ಯಕ್ತಿಯೊಬ್ಬನನ್ನು ಸಾಯಿಸಿದ ಪ್ರಕರಣ ಕುರಿತಂತೆ ರಾಜಕೀಯ ಕೆಸರೆರೆಚಾಟ ಆರಂಭವಾಗಿದೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಬಿಜೆಪಿಯು ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದೆ.

ಭರತ್‌ಪುರ ಜಿಲ್ಲೆಯ ಅಡ್ಡಾ ಗ್ರಾಮದಲ್ಲಿ 30 ವರ್ಷದ ವ್ಯಕ್ತಿ ನಿರ್ಪತ್ ಸಿಂಗ್ ಗುರ್ಜರ್ ಅವರ ಮೇಲೆ ಕನಿಷ್ಠ ಎಂಟು ಬಾರಿ ಟ್ರ್ಯಾಕ್ಟರ್ ಹರಿಸಲಾಗಿದೆ. ಈ ಆಘಾತಕಾರಿ ಘಟನೆಯ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿದೆ.

'ನೆರೆಹೊರೆಯವರಾದ ಅತರ್ ಸಿಂಗ್ ಗುರ್ಜರ್ ಮತ್ತು ಬಹದೂರ್ ಸಿಂಗ್ ಗುರ್ಜರ್ ನಡುವೆ ಜಾಗಕ್ಕಾಗಿ ವಿವಾದ ಇತ್ತು. ಬುಧವಾರ ಬೆಳಿಗ್ಗೆ 7.30ರ ವೇಳೆಗೆ ಇವರ ನಡುವೆ ಘರ್ಷಣೆ ಆರಂಭವಾಗಿ ಹಲವರು ಗಾಯಗೊಂಡರು. ನಂತರ ಎಲ್ಲರೂ ಅಲ್ಲಿಂದ ತೆರಳಿದ್ದರು. ಆ ಬಳಿಕ ದಾಮೋದರ್ ಗುರ್ಜರ್ ಅವರು ಟ್ರ್ಯಾಕ್ಟರ್ ಚಾಲನೆ ಮಾಡಿಕೊಂಡು ಬಂದು ನಿರ್ಪತ್ ಮೇಲೆ ಹರಿಸಿದ್ದಾರೆ. ಕುಟುಂಬದವರು ಎಷ್ಟು ತಡೆದರೂ ಕೇಳಲಿಲ್ಲ. ದಾಮೋದರ್ ಅವರು ನಿರ್ಪತ್ ಅವರಿಗೆ ಸೋದರನೇ ಆಗಬೇಕು' ಎಂದು ಸರ್ದಾರ್ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಜೈಪ್ರಕಾಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ನಿರ್ಪತ್ ಅವರಿಗೆ ಪತ್ನಿ ಮತ್ತು ನಾಲ್ವರು ಮಕ್ಕಳು ಇದ್ದಾರೆ. ಆರೋಪಿ ಮತ್ತು ಇತರ ಐವರನ್ನು ವಶಕ್ಕೆ ಪಡೆಯಲಾಗಿದ್ದು ವಿಚಾರಣೆ ನಡೆಸಲಾಗುತ್ತಿದೆ. ಆದರೆ ಯಾರನ್ನೂ ಬಂಧಿಸಿಲ್ಲ.

ಎರಡೂ ಕುಟುಂಬಗಳು ಕೃಷಿಯನ್ನೇ ಅವಲಂಬಿಸಿದ್ದು ಕೆಲ ಕಾಲದಿಂದ ಜಾಗದ ಬಗ್ಗೆ ವಿವಾದ ಇತ್ತು. ಹಲವು ಬಾರಿ ಪ್ರಕರಣಗಳೂ ದಾಖಲಾಗಿದ್ದವು ಎಂದು ಪೊಲೀಸರು ಹೇಳಿದ್ದಾರೆ.

ಖಂಡನೆ: ಇದೊಂದು ಹೃದಯವಿದ್ರಾವಕ ಘಟನೆ, ಖಂಡನೀಯ ಕೃತ್ಯ ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಕ್ರಿಮಿನಲ್ ಶಕ್ತಿಗಳು ಬೆಳೆದಿರುವುದೇ ಇಂತಹ ಪ್ರಕರಣಗಳು ಹೆಚ್ಚಲು ಕಾರಣ ಎಂದು ಹೇಳಿದ್ದಾರೆ.

ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರು, ಪ್ರಿಯಾಂಕಾ ಗಾಂಧಿ ಅವರು ಗ್ರಾಮಕ್ಕೆ ತೆರಳಿ ಸಂತ್ರಸ್ತ ಕುಟುಂಬದವರನ್ನು ಭೇಟಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದೂ ಆಗ್ರಹಿಸಿದ್ದಾರೆ.

ಪಠ್ಯದಿಂದ 'ಇಂಡಿಯಾ'ಕ್ಕೆ ಕೊಕ್?

ಒಂದನೇ ಪುಟದಿಂದ...

ಬೇರೆ ಬೇರೆ ಯುದ್ಧಗಳಲ್ಲಿನ 'ಹಿಂದೂ ವಿಜಯ'ವನ್ನು ಪಠ್ಯಪುಸ್ತಕಗಳಲ್ಲಿ ಪ್ರಮುಖವಾಗಿ ಚಿತ್ರಿಸಬೇಕು ಎಂದು ಎಂದು ಕೂಡ ಸಮಿತಿಯು ಶಿಫಾರಸು ಮಾಡಿದೆ ಎಂದು ಅವರು ತಿಳಿಸಿದ್ದಾರೆ.

'ಪಠ್ಯಕ್ರಮಗಳಲ್ಲಿ ಈಗ ನಮ್ಮ ವೈಫಲ್ಯಗಳನ್ನು ಉಲ್ಲೇಖಿಸಲಾಗಿದೆ. ಆದರೆ ಮೊಘಲರು ಮತ್ತು ಸುಲ್ತಾನರ ವಿರುದ್ಧ ನಮ್ಮ ವಿಜಯವನ್ನು ಉಲ್ಲೇಖಿಸಿಲ್ಲ' ಎಂದು ಇಸಾಕ್ ಅವರು ಹೇಳಿದ್ದಾರೆ. ಇಸಾಕ್ ಅವರು ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ತಿನ (ಐಸಿಎಚ್‌ಆರ್) ಸದಸ್ಯ ಕೂಡ ಹೌದು.

'ಬ್ರಿಟಿಷರು ಭಾರತದ ಇತಿಹಾಸವನ್ನು ಪುರಾತನ, ಮಧ್ಯಕಾಲ ಮತ್ತು ಆಧುನಿಕ ಎಂದು ಮೂರು ಭಾಗಗಳನ್ನಾಗಿ ವಿಭಜಿಸಿದ್ದರು. ಭಾರತವು ಅಂಧಕಾರದಲ್ಲಿತ್ತು, ವೈಜ್ಞಾನಿಕ ಪ್ರಗತಿಯ ಬಗ್ಗೆ ಅರಿವಿರಲಿಲ್ಲ, ನಂತರದಲ್ಲಿ ಪ್ರಗತಿ ಸಾಧಿಸಿತು ಎಂದು ಈ ಮೂರು ಭಾಗಗಳಿಗೆ ಸಂಬಂಧಿಸಿದಂತೆ ವಿವರಿಸಲಾಗಿದೆ. ಹೀಗಾಗಿ, ಭಾರತೀಯ ಇತಿಹಾಸದ ಶಾಸ್ತ್ರೀಯ ಕಾಲಘಟ್ಟವನ್ನು ಮಧ್ಯಯುಗ ಹಾಗೂ ಆಧುನಿಕ ಯುಗದ ಜೊತೆಯಲ್ಲಿ ಶಾಲೆಗಳಲ್ಲಿ ಬೋಧಿಸಬೇಕು ಎಂದು ಸಲಹೆ ನೀಡಿದ್ದೇವೆ' ಎಂದು ಇಸಾಕ್ ವಿವರಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ಕ್ಕೆ ಅನುಗುಣವಾಗಿ ಎನ್‌ಸಿಇಆರ್‌ಟಿ ಶಾಲಾ ಪಠ್ಯಕ್ರಮವನ್ನು ಪರಿಷ್ಕರಿಸುತ್ತಿದೆ. ಕಲಿಕಾ ಪರಿಕರಗಳು, ಪಠ್ಯಪುಸ್ತಕ ಹಾಗೂ ಪಠ್ಯಕ್ರಮವನ್ನು ಅಂತಿಮಗೊಳಿಸಲು ಮಂಡಳಿಯು 19 ಜನ ಸದಸ್ಯರು ಇರುವ ರಾಷ್ಟ್ರೀಯ ಪಠ್ಯಕ್ರಮ ಮತ್ತು ಶಿಕ್ಷಣ ಕಲಿಕಾ ಪರಿಕರ ಸಮಿತಿಯನ್ನು ಈಚೆಗೆ ರಚಿಸಿದೆ.

ಐಸಿಎಚ್‌ಆರ್ ಅಧ್ಯಕ್ಷ ರಘುವೇಂದ್ರ ತನ್ವಾರ್, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ವಂದನಾ ಮಿಶ್ರ, ಡೆಕ್ಕನ್ ಕಾಲೇಜ್ (ಡೀಮ್ಡ್) ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ವಸಂತ್ ಶಿಂದೆ, ಹರಿಯಾಣದ ಸರ್ಕಾರಿ ಶಾಲೆಯೊಂದರಲ್ಲಿ ಸಮಾಜಶಾಸ್ತ್ರ ಬೋಧಿಸುವ ಮಮತಾ ಯಾದವ್ ಅವರು ಈ ಸಮಿತಿಯ ಸದಸ್ಯರು.

ಇಸಾಕ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೊತೆ ಗುರುತಿಸಿಕೊಂಡಿರುವ 'ಭಾರತೀಯ ವಿಚಾರ ಕೇಂದ್ರಂ'ನ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. 1970ರ ದಶಕದಿಂದಲೂ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಜೊತೆ ಇದ್ದಾರೆ. ಅವರು ಪದ್ಮಶ್ರೀ ಪುರಸ್ಕೃತರೂ ಹೌದು.

ಚುನಾವಣಾ ರಾಜಕೀಯಕ್ಕೆ ನಿವೃತ್ತಿ: ಸುಶೀಲ್ ಕುಮಾರ್

ಮುಂಬೈ: ಚುನಾವಣಾ ರಾಜಕೀಯ ದಿಂದ ನಿವೃತ್ತಿಯಾಗುವುದಾಗಿ ಕಾಂಗ್ರೆಸ್ ಪಕ್ಷದ ನಾಯಕ ಮತ್ತು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶೀಲ್ ಕುಮಾರ್ ಶಿಂಧೆ ಬುಧವಾರ ಘೋಷಿಸಿದ್ದಾರೆ.

ಸೊಲ್ಲಾಪುರ ಲೋಕಸಭಾ ಕ್ಷೇತ್ರ ದಿಂದ ತಮ್ಮ ಪುತ್ರಿ ಸ್ಪರ್ಧಿಸಲಿದ್ದಾರೆ ಎಂದು ಇದೇ ಸಂದರ್ಭದಲ್ಲಿ ಅವರು ತಿಳಿಸಿದ್ದಾರೆ. ದಲಿತ ನಾಯಕ ಶಿಂಧೆ(82) ಸುಮಾರು ಆರು ದಶಕಗಳ ರಾಜಕೀಯ ಜೀವನದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು.

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಗೃಹ ಸಚಿವರಾಗಿ ಮತ್ತು ಅವಿಭಜಿತ ಆಂಧ್ರಪ್ರದೇಶದ ರಾಜ್ಯಪಾಲರಾಗಿಯೂ ಶಿಂಧೆ ಕಾರ್ಯನಿರ್ವಹಿಸಿದ್ದರು. 2014ರಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದರು.

ಶಿಂಧೆ ಅವರ ಪುತ್ರಿ ಪ್ರಣಿತಿ ಶಿಂಧೆ (42) ಸೊಲ್ಲಾಪುರ ನಗರ ಕೇಂದ್ರ ಕ್ಷೇತ್ರದ ಶಾಸಕರಾಗಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಪ್ರತಿ ಮಗುವೂ ಒಬ್ಬ ಕಲಾವಿದ. ಒಮ್ಮೆ ಅದು ಬೆಳೆದ ನಂತರ ಆ ಕಲಾವಿದನನ್ನು ಉಳಿಸಿಕೊಳ್ಳುವುದು ಹೇಗೆ ಎಂಬುದೇ ಸಮಸ್ಯೆ.

–ಪಾಬ್ಲೊ ಪಿಕಾಸೊ

‘ಗಗನಯಾನ’ದ ಪ್ರಾಯೋಗಿಕ ಪರೀಕ್ಷೆ ಯಾನಿಗಳ ರಕ್ಷಣೆಗೆ ಪರಮೋಚ್ಚ ಆದ್ಯತೆ

ಭಾರತದ ಗಗನಯಾತ್ರಿಗಳನ್ನು ಭಾರತದ್ದೇ ನೌಕೆಯ ಮೂಲಕ ಬಾಹ್ಯಾಕಾಶಕ್ಕೆ ಕಳಿಸಬೇಕೆಂಬ ನಮ್ಮೆಲ್ಲರ ಮಹತ್ವಾಕಾಂಕ್ಷೆಯ ಕನಸು ನನಸಾಗುವ ದಿಸೆಯಲ್ಲಿ ಮೊದಲ ಪ್ರಾರಂಭಿಕ ಪರೀಕ್ಷೆಯನ್ನು ಕಳೆದ ಶನಿವಾರ ಇಸ್ರೊ ಸಂಸ್ಥೆ ಯಶಸ್ವಿಯಾಗಿ ಪೂರೈಸಿದೆ. ಇತ್ತೀಚೆಗಷ್ಟೇ ‘ಚಂದ್ರಯಾನ್-3ರ’ ಮೂಲಕ ‘ವಿಕ್ರಮ್’ ಲ್ಯಾಂಡರ್ ಅನ್ನು ಚಂದ್ರನ ಮೇಲೆ ಹೂವಿನಂತೆ ಹಗುರವಾಗಿ ಇಳಿಸಿ ಭೇಷ್ ಎನ್ನಿಸಿಕೊಂಡ ಇಸ್ರೊ ಸಂಸ್ಥೆಗೆ ಈಗಿನ ಪ್ರಯೋಗ ಇನ್ನೂ ಗುರುತರವಾಗಿತ್ತು; ಏಕೆಂದರೆ ಮನುಷ್ಯರಿರುವ ನೌಕೆಯನ್ನು ಬಾಹ್ಯಾಕಾಶಕ್ಕೆ ಏರಿಸಬೇಕಾದರೆ ಯಾನಿಗಳ ಸುರಕ್ಷೆಗೆ ಇನ್ನಿಲ್ಲದ ಕಾಳಜಿ ವಹಿಸಬೇಕಾಗುತ್ತದೆ. ಯುದ್ಧ ವಿಮಾನಗಳು ಸಂಕಷ್ಟಕ್ಕೆ ಸಿಲುಕಿದಾಗ ಪೈಲಟ್‌ಗಳು ಬಟನ್ ಒತ್ತಿ ತಾವು ಕೂತ ಆಸನದ ಸಮೇತ ಹೊರಕ್ಕೆ ಜಿಗಿದು ನೆಲಕ್ಕಿಳಿಯುವ ವ್ಯವಸ್ಥೆ ಇರುತ್ತದೆ. ಜಾಗ್ವಾರ್, ಮಿರಾಜ್, ರಫೇಲ್ ಅಷ್ಟೇಕೆ ನಮ್ಮ ಸ್ವದೇಶಿ ನಿರ್ಮಿತ ತೇಜಸ್ ವಿಮಾನದಲ್ಲೂ ಅಂಥ ವ್ಯವಸ್ಥೆ ಇದೆ. ಆದರೆ ಆಕಾಶದ ಹಾರಾಟಕ್ಕಿಂತ ತುಂಬ ಎತ್ತರದಲ್ಲಿ ಅದೆಷ್ಟೋ ಪಟ್ಟು ಹೆಚ್ಚಿನ ವೇಗದ ರಾಕೆಟ್‌ಗಳಲ್ಲಿ ಸವಾರಿ ಮಾಡುವಾಗಿನ ಸವಾಲುಗಳೇ ಬೇರೆ ಇರುತ್ತವೆ. ಗಗನಯಾನಿಗಳು ಅಪಾರ ಒತ್ತಡದಲ್ಲಿರುವಾಗ ತುರ್ತು ಜಿಗಿತದ ಬಟನ್ ಒತ್ತುವ ವ್ಯವಸ್ಥೆ ಕೂಡ ಸ್ವಯಂಚಾಲಿತವೇ ಆಗಿರಬೇಕಾಗುತ್ತದೆ. ಉಪಗ್ರಹ ನಿಯಂತ್ರಣ ಕೇಂದ್ರದಲ್ಲಿನ ವ್ಯವಸ್ಥೆಯೇ ಅದಕ್ಕೆ ಚಾಲನೆ ನೀಡಬೇಕಾಗುತ್ತದೆ. ಯಾನಿಗಳು ನೇರವಾಗಿ ಸಮುದ್ರಕ್ಕೇ ಜಿಗಿಯಬೇಕಿರುವುದರಿಂದ ಅವರ ಆಸನವಷ್ಟೇ ಅಲ್ಲ, ಅವರು ಕೂತಿರುವ ‘ಗೂಡು’ (ಮಾಡ್ಯೂಲ್) ಕೂಡ ಜಲನಿರೋಧಕ ಕವಚವನ್ನೇ ಹೊದ್ದಿರಬೇಕಾಗುತ್ತದೆ. ಅದಕ್ಕೇ ಮೊದಲ ಬಾರಿಗೆ ನಡೆಸಿದ ಈ ಪ್ರಯೋಗದಲ್ಲಿ ಯಾನಿಗಳು ಕೂರುವ ಮಾಡ್ಯೂಲನ್ನು ಜಿಎಸ್‌ಎಲ್‌ವಿಎಂ-3 ರಾಕೆಟ್ ಮೂಲಕ ಹಾರಿಸಲಾಗಿತ್ತು. ಆ ರಾಕೆಟ್ ಶ್ರೀಹರಿಕೋಟ ಉಡ್ಡಯನದ ನೆಲೆಯಿಂದ ಸುರಕ್ಷಿತವಾಗಿ 12 ಕಿಲೊಮೀಟರ್ ಎತ್ತರಕ್ಕೇರಿ ತಾನು ಉರಿದು ಬೀಳುವ ಮೊದಲು ತನ್ನೊಳಗಿನ ಗೂಡನ್ನು ಇನ್ನೂ ಐದು ಕಿಲೊಮೀಟರ್ ಎತ್ತರಕ್ಕೆ ಚಿಮ್ಮಿಸಿತು. ಯಾನಿಗಳು ಕೂತಿರಬೇಕಿದ್ದ ಮಾಡ್ಯೂಲ್ ಪ್ರತ್ಯೇಕಗೊಂಡು ಸಮುದ್ರಕ್ಕೆ ಧುಮುಕಿತು. ಅದನ್ನು ಸುರಕ್ಷಿತವಾಗಿ ಧುಮುಕಿಸಲೆಂದೇ ಎರಡು ಹಂತಗಳ ಪ್ಯಾರಾಚೂಟ್‌ಗಳನ್ನು ಬಳಸಲಾಗಿದ್ದು ಅವನ್ನೂ ಈ ಮೊದಲು ಹದಿನಾರು ಬಾರಿ ಪರೀಕ್ಷಿಸಲಾಗಿತ್ತು ಎಂದರೆ ಅದೆಷ್ಟೊಂದು ಮುನ್ನೆಚ್ಚರಿಕೆಯ ಉಡ್ಡಯನ ಪ್ರಯೋಗ ಇದಾಗಿತ್ತೆಂದು ನಾವು ಮನಗಾಣಬಹುದು. ನೆಗೆತಕ್ಕೆ ಕೇವಲ ನಾಲ್ಕು ಸೆಕೆಂಡ್ ಮೊದಲು ಸುರಕ್ಷಾ ಕಣ್ಗಾವಲಿನ ವ್ಯವಸ್ಥೆಯಲ್ಲಿ ಕೆಂಪು ದೀಪ ಮೊಳಗಿದರೂ ಅಷ್ಟೇ ತ್ವರಿತವಾಗಿ ಅದು ತನ್ನಲ್ಲಿನ ದೋಷವನ್ನು ಕ್ಷಣಾರ್ಧದಲ್ಲಿ ತಾನೇ ಸರಿಪಡಿಸಿಕೊಂಡಿದ್ದೂ ಇಸ್ರೊ ವಿಜ್ಞಾನಿಗಳ ಸಂತಸಕ್ಕೆ ಕಾರಣವಾಗಿದೆ. ಬಂಗಾಳ ಕೊಲ್ಲಿಯಲ್ಲಿ ನೀರಿಗೆ ಜಿಗಿದ ತಾಣವೂ ಪೂರ್ವನಿಗದಿತವೇ ಆಗಿದ್ದು, ನೌಕಾ ಸಿಬ್ಬಂದಿ ಆ ಮಾಡ್ಯೂಲನ್ನು ವಶಕ್ಕೆ ಪಡೆದು ಚೆನ್ನೈ ಬಂದರಿಗೆ ತಂದಿದ್ದಾರೆ. ಸುರಕ್ಷಾ ಹೊಣೆಗಾರಿಕೆಯಲ್ಲಿ- ಅದು ಯಂತ್ರದ್ದೇ ಆಗಿರಲಿ, ಮನುಷ್ಯನದೇ ಆಗಿರಲಿ, ಅತ್ಯಂತ ಚಿಕ್ಕ ಲೋಪವೂ ಆಗದಂತೆ ಇಡೀ ಕಾರ್ಯಾಚರಣೆ ಯಶಸ್ವಿಯಾಗಿದೆ.

ಚಂದ್ರನ ಮೇಲೆ ಯಂತ್ರಗಳನ್ನಿಳಿಸಿದ ನಾಲ್ಕು ದೇಶಗಳ ಸಾಲಿಗೆ ಸೇರಿದ ಭಾರತ ಸಹಜವಾಗಿಯೇ ಈ ಪೈಪೋಟಿಯಲ್ಲಿ ಭಾಗವಹಿಸಲು ತಾನೂ ಸಮರ್ಥ ಎಂಬುದನ್ನು ತೋರಿಸಿದೆ

ಮನುಷ್ಯನಿರ್ಮಿತ ಯಂತ್ರಗಳು ಮನುಷ್ಯನಿಗಿಂತ ದಕ್ಷತೆಯಿಂದ ಕೆಲಸ ಮಾಡಬಹುದಾದರೆ ನಾವು ಅಪಾರ ವೆಚ್ಚದಲ್ಲಿ ಇಷ್ಟೊಂದು ಕಷ್ಟಪಟ್ಟು ಸಶರೀರವಾಗಿ ಬಾಹ್ಯಾಕಾಶಕ್ಕೆ, ಚಂದ್ರಲೋಕಕ್ಕೆ ಅಥವಾ ಅದರಾಚೆಗೆ ಹೋಗಿ ಬರಬೇಕಾದ ಅನಿವಾರ್ಯ ಏನಿದೆ ಎಂಬ ಪ್ರಶ್ನೆ ಏಳುತ್ತದೆ. ಅಮೆರಿಕದ ಅಪೊಲೊ ಮಿಷನ್ ಮೂಲಕ 1969ರಿಂದ ನೀಲ್ ಆರ್ಮ್‌ಸ್ಟ್ರಾಂಗ್‌ನಿಂದ ಮೊದಲ್ಗೊಂಡು ಮೂರು ವರ್ಷಗಳ ಅವಧಿಯಲ್ಲಿ ಹನ್ನೆರಡು ಗಗನಯಾತ್ರಿಗಳು ಚಂದ್ರಯಾನವನ್ನು ಪೂರೈಸಿ ಬಂದ ನಂತರ ಈ ಪ್ರಶ್ನೆಯೇ ಮುಖ್ಯಭೂಮಿಕೆಗೆ ಬಂದಿತ್ತು. ಸಾಧನೆಯ ಉತ್ತುಂಗಕ್ಕೇರಿದ ನಂತರ, ಅಪಾರ ವೆಚ್ಚದಲ್ಲಿ ಮತ್ತೆ ಮತ್ತೆ ಮನುಷ್ಯನನ್ನು ಅನ್ಯಲೋಕಕ್ಕೆ ಕಳಿಸುವ ಬದಲು ಪೃಥ್ವಿಯ ಸಮೀಪ ಕಕ್ಷೆಯಲ್ಲೇ ಅಟ್ಟಣಿಗೆಯನ್ನು ನಿರ್ಮಿಸಿ ಹೆಚ್ಚಿನ ಅಧ್ಯಯನವನ್ನು ಕೈಗೊಳ್ಳಲು ನಾಸಾ ನಿರ್ಧರಿಸಿತ್ತು. ಆದರೆ ತಾನು ಸಮರ್ಥ, ತಾನು ಇತರರಷ್ಟೇ ಅಲ್ಲ, ಇತರರಿಗಿಂತ ಬಲಾಢ್ಯ ಎಂದು ತೋರಿಸಬೇಕೆಂಬ ಸಾಮೂಹಿಕ ತುಡಿತವೊಂದಿದೆಯಲ್ಲ? ಅದು ಯಾವುದೇ ದೇಶಕ್ಕೆ ಸೀಮಿತವಾಗಿರುವುದಿಲ್ಲ. ಚೀನಾ ತಾನು ಬಾಹ್ಯಾಕಾಶ ಅಟ್ಟಣಿಗೆ ನಿರ್ಮಿಸಿ, ಚಂದ್ರನಲ್ಲಿಗೆ 2030ರ ವೇಳೆಗೆ ಕಾಲಿಡುವ ತಯಾರಿಯಲ್ಲಿರುವಾಗ ಈಗ ನಾಸಾ ತಾನು ಅದಕ್ಕಿಂತ ಐದು ವರ್ಷ ಮೊದಲೇ ಅಲ್ಲಿಗೆ ಮತ್ತೆ ಹೋಗಲು ಸಿದ್ಧತೆ ನಡೆಸಿದೆ. ಚಂದ್ರನ ಮೇಲೆ ಯಂತ್ರಗಳನ್ನಿಳಿಸಿದ ನಾಲ್ಕು ದೇಶಗಳ ಸಾಲಿಗೆ ಸೇರಿದ ಭಾರತ ಸಹಜವಾಗಿಯೇ ಈ ಪೈಪೋಟಿಯಲ್ಲಿ ಭಾಗವಹಿಸಲು ತಾನೂ ಸಮರ್ಥ ಎಂಬುದನ್ನು ತೋರಿಸಿದೆ. ಇದು ಕೇವಲ ಛಲದ, ಅಥವಾ ಆತ್ಮನಿರ್ಭರತೆಯ ಪ್ರಶ್ನೆಯಷ್ಟೇ ಅಲ್ಲ, ಆ ಸಾಹಸದಲ್ಲಿ ಅಪಾರ ಉಪಲಾಭಗಳೂ ಇವೆ. ಎಪ್ಪತ್ತರ ದಶಕದಲ್ಲಿಟ್ಟ ಅಂಬೆಗಾಲು ಇಂದು ಗಟ್ಟಿ ಹೆಜ್ಜೆಗಳಾಗಿದ್ದು, ನಾಳಿನ ಹನುಮಲಂಘನವಾಗಲೆಂದು ನಾವೆಲ್ಲ ಹಾರೈಸಬೇಕಿದೆ.

ದಿನದ ಟ್ವೀಟ್

ನೀತಿ ಬದಲಾಗಲಿ

ಭಾರತದಲ್ಲಿ ಯುವಕರ ನಿರುದ್ಯೋಗದ ಪ್ರಮಾಣ ಕಳವಳಕಾರಿಯಾಗಿದೆ. ಇದು ಭಾರತ ಇರಬೇಕಾದ ಸ್ಥಿತಿಯಲ್ಲ. ಈ ಬೆಳವಣಿಗೆಯು ಮಧ್ಯಮ ವರ್ಗದ ಯುವಕರ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದರಿಂದ ನೀತಿ–ನಿಲುವುಗಳಲ್ಲಿ ಬದಲಾವಣೆಯ ಅಗತ್ಯವಿದೆ. ಭಾರತ ಹಲವು ಬಗೆಯ ಸಾಮರ್ಥ್ಯಗಳನ್ನು ಹೊಂದಿದೆ. ಆದರೆ ದೌರ್ಬಲ್ಯಗಳನ್ನು ನಿರಾಕರಿಸುವುದು ಸೋಲಿಗೆ ಆಸ್ಪದ ನೀಡುತ್ತದೆ.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಸಾರ್ವಜನಿಕ ಸಾರಿಗೆ ಬಲಗೊಳಿಸಿ

ಸಾರ್ವಜನಿಕ ಸಾರಿಗೆಯು ಸರ್ಕಾರಿ ಶಾಲೆಗಳು ಮತ್ತು ಆಸ್ಪತ್ರೆಗಳಿದ್ದಂತೆ. ಅವು ಲಾಭ ಮಾಡುವುದಿಲ್ಲ, ಆದರೆ ಯೋಗ್ಯ ಜೀವನಕ್ಕೆ ಪೂರಕವಾಗಿ ಇರುತ್ತವೆ. ನಮ್ಮ ನಗರ ಬದುಕನ್ನು ಸುಲಲಿತಗೊಳಿಸಲು ನಾವು ಮಾಡಬೇಕಾದ ಏಕೈಕ ಕಾರ್ಯವೆಂದರೆ, ನಿರಂತರವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. ಅದು, ಜನರ ಅದರಲ್ಲೂ ಕಡಿಮೆ ಆದಾಯದ ವರ್ಗಗಳ ಜೀವನವನ್ನು ಹೇಗೆ ಬದಲಿಸಬಹುದು ಎಂಬುದರ ಬಗ್ಗೆ ವಿದೇಶಗಳಲ್ಲಿ ಸಂಚರಿಸಿರುವವರು ಹೇಳಬಲ್ಲರು.

ಅರುಣ್ ಬೋತ್ರ, ಐಪಿಎಸ್ ಅಧಿಕಾರಿ

ಕಿಡಿನುಡಿ

ತಮಿಳುನಾಡಿನ ರಾಜಭವನದ ಮೇಲೆ ಪೆಟ್ರೋಲ್ ಬಾಂಬ್ ಎಸೆಯಲಾಗಿದೆ! ರಾಜ್ಯಪಾಲರ ನಡೆಯನ್ನು ನೀವು ಒಪ್ಪುವಿರೋ ಇಲ್ಲವೋ, ಆದರೆ ಅವರಿಗೆ ಸುರಕ್ಷತೆಯನ್ನು ಖಾತರಿಪಡಿಸಬೇಕಾದುದು ಪ್ರಭುತ್ವದ ಕರ್ತವ್ಯ. ಇದು ಖಂಡಿತವಾಗಿಯೂ ಆಗಬಾರದಿತ್ತು!

ಸಂಧ್ಯಾ ರವಿಶಂಕರ್, ಪತ್ರಕರ್ತೆ

25 ವರ್ಷಗಳ ಹಿಂದೆ

ಸೋಮವಾರ, 26-10-1998

- **ಜನತಾದಳ ವರಿಷ್ಠರ ಆದೇಶಕ್ಕೆ ಪಟೇಲ್ ತಿರಸ್ಕಾರ**

ಬೆಂಗಳೂರು, ಅ. 25– ಇದೇ ತಿಂಗಳ 29ರಿಂದ ಕರೆಯಲು ಉದ್ದೇಶಿಸಲಾಗಿದ್ದ ವಿಧಾನಮಂಡಲ ಅಧಿವೇಶನವನ್ನು ಮುಂದೂಡಬೇಕೆಂದು ಜನತಾದಳದ ವರಿಷ್ಠರು ನೀಡಿದ್ದ ಸೂಚನೆಯನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

ವಿಧಾನಮಂಡಲ ಅಧಿವೇಶನ ನಡೆಯುತ್ತಿರುವಾಗ ಶಾಸಕಾಂಗ ಪಕ್ಷದ ಸಭೆಯನ್ನು ನಡೆಸುವುದಿಲ್ಲ ಎಂದು ಪ್ರಕಟಿಸುವ ಮೂಲಕ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಪಕ್ಷದ ವರಿಷ್ಠರಿಗೂ ಸಡ್ಡು ಹೊಡೆದು ಸಂಪೂರ್ಣ ಸಮರ ಸಾರಿದ್ದಾರೆ.

ಇದರೊಂದಿಗೆ, ರಾಜ್ಯದಲ್ಲಿ ಆಡಳಿತ ಪಕ್ಷವಾದ ಜನತಾದಳದಲ್ಲಿ ಉಂಟಾಗಿರುವ ಬಿಕ್ಕಟ್ಟು ಅಂತಿಮ ಘಟ್ಟ ತಲುಪಿದ್ದು, ಸರ್ಕಾರದ ಮೇಲೆ ಹಾಗೂ ಮುಖ್ಯಮಂತ್ರಿ ಪದವಿಯ ಮೇಲೆ ತೂಗುಗತ್ತಿ ತೂಗುತ್ತಿದೆ.

- **ಗೌಡ–ಬೊಮ್ಮಾಯಿ ರಹಸ್ಯ ಮಾತುಕತೆ**

ಬೆಂಗಳೂರು, ಅ. 25– ರಾಜ್ಯ ಜನತಾ ದಳದಲ್ಲಿ ಉದ್ಭವಿಸಿರುವ ಬಿಕ್ಕಟ್ಟಿಗೆ ಪರಿಹಾರ ಕಂಡುಹಿಡಿಯುವ ದಿಸೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಕೇಂದ್ರದ ಮಾಜಿ ಸಚಿವ ಎಸ್. ಆರ್ ಬೊಮ್ಮಾಯಿ ಅವರು ಇಂದು ಇಲ್ಲಿ ಪರಸ್ಪರ ಭೇಟಿಯಾಗಿ ‘ರಹಸ್ಯ’ ಮಾತುಕತೆ ನಡೆಸಿದರು.

ಶಾಸಕಾಂಗ ಪಕ್ಷದ ತುರ್ತು ಸಭೆ ಕರೆದು ವಿಶ್ವಾಸಮತ ಯಾಚಿಸಬೇಕೆಂದು ಜನತಾ ದಳದ ಸುಮಾರು ಐವತ್ತು ಮಂದಿ ಶಾಸಕರು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ, ಪಕ್ಷದ ಮುಖಂಡರಾದ ದೇವೇಗೌಡ ಮತ್ತು ಬೊಮ್ಮಾಯಿ ಮಾತುಕತೆ ನಡೆಸಿರುವುದು ಮಹತ್ವದ ಬೆಳವಣಿಗೆ.

- **ಬೀದರ್: 2.50 ಲಕ್ಷ ರೂ. ಡಕಾಯಿತಿ**

ಬೀದರ್, ಅ. 25– ಇಲ್ಲಿಯ ನ್ಯೂಟೌನ್ ಪೊಲೀಸ್ ಠಾಣೆ ವ್ಯಾಪ್ತಿಯ ನಂದಿ ಕಾಲೊನಿಯಲ್ಲಿಯ ಡಾ. ವಿಶ್ವನಾಥ ನಾಗಶೆಟ್ಟೆಪ್ಪ ಪ್ರಭಾ ಅವರ ಮನೆಗೆ ಇಂದು ಬೆಳಗಿನ ಜಾವ 3 ಗಂಟೆಗೆ ನುಗ್ಗಿದ 5-6 ಜನ ಡಕಾಯಿತರು, ಮನೆಯಲ್ಲಿದ್ದವರನ್ನು ಚಾಕುವಿನಿಂದ ಬೆದರಿಸಿ ಸುಮಾರು 2.50 ಲಕ್ಷ ರೂ. ಮೌಲ್ಯದ ನಗನಾಣ್ಯ ದೋಚಿ ಪರಾರಿಯಾಗಿದ್ದಾರೆ.

ವಿಶ್ವಕಪ್ ಕ್ರಿಕೆಟ್ ಸೌಂದರ್ಯ ಹೆಚ್ಚಿಸುವ ಅನಿರೀಕ್ಷಿತ ಫಲಿತಾಂಶಗಳು

ಅಫ್ಗನ್ ಅಂಗಳದಲ್ಲಿ ಕ್ರಿಕೆಟ್ ನಗು

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಅಫ್ಗಾನಿಸ್ತಾನದ ನೆಲದಲ್ಲಿ ಇನ್ನೂ ರಕ್ತದ ಕಲೆಗಳು ಮಾಯವಾಗಿಲ್ಲ. ಭಯೋತ್ಪಾದನೆಯ ಕರಿನೆರಳು, ಸಂತ್ರಸ್ತರ ಆಕ್ರಂದನ, ಗುಂಡಿನ ಮೊರೆತ, ಬಾಂಬ್‌ಗಳ ಸಿಡಿತದ ನಡುವೆಯೇ ಈ ದೇಶದಲ್ಲಿ ಕ್ರಿಕೆಟ್ ಅರಳುತ್ತಿದೆ. ಅಲ್ಲಿಯ ನೊಂದ ಜೀವಗಳಿಗೆ ತಂಪೆರೆಯುತ್ತಿದೆ. ಅಲ್ಲಿಯ ಜನಸಾಮಾನ್ಯರು ಸಂಭ್ರಮದಿಂದ ಕುಣಿದು ಕುಪ್ಪಳಿಸಲು ಅಫ್ಗಾನಿಸ್ತಾನ ಕ್ರಿಕೆಟ್ ತಂಡ ಕಾರಣವಾಗುತ್ತಿದೆ.

ಭಾರತದ ಆತಿಥ್ಯದಲ್ಲಿ ನಡೆಯುತ್ತಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಎಂಟು ದಿನಗಳ ಅಂತರದಲ್ಲಿ ಎರಡು ಬಲಿಷ್ಠ ತಂಡಗಳನ್ನು ಮಣ್ಣು ಮುಕ್ಕಿಸಿದ ಅಫ್ಗನ್ ತಂಡದ ಸಾಧನೆ ಸಣ್ಣದೇನಲ್ಲ. ಹಾಲಿ ಚಾಂಪಿಯನ್ ಇಂಗ್ಲೆಂಡ್ ಮತ್ತು 1992ರ ಚಾಂಪಿಯನ್ ಪಾಕಿಸ್ತಾನ ತಂಡಗಳನ್ನು ಮಣಿಸಿದ ಅಫ್ಗನ್ ಬಳಗವು ಭವ್ಯ ಭವಿಷ್ಯದತ್ತ ಮುಖ ಮಾಡಿದೆ.

ಈ ಎರಡೂ ಪಂದ್ಯಗಳಲ್ಲಿ ಗೆದ್ದಾಗಲೂ ಕ್ರಿಕೆಟ್ ಪ್ರೇಮಿಗಳ ವಲಯದಲ್ಲಿ ಅಚ್ಚರಿ ಮೂಡಿದೆ. ಆದರೆ ಈ ಗೆಲುವಿನ ಸಂಭ್ರಮಗಳನ್ನು ಅಫ್ಗನ್ ಆಟಗಾರರು ಆಚರಿಸಿದ ರೀತಿಯೂ ಇಲ್ಲಿ ಗಮನಾರ್ಹ. ಅತಿರೇಕದ ಕೂಗಾಟ, ನೃತ್ಯಗಳು ಇರಲಿಲ್ಲ. ಅಪ್ಪಟ ಸಂತಸದ ಸೆಳಕು ಅವರ ನೃತ್ಯದಲ್ಲಿತ್ತು. ಸ್ಪಿನ್ನರ್ ರಶೀದ್ ಖಾನ್ ಜೊತೆಗೆ ಭಾರತದ ವೀಕ್ಷಕ ವಿವರಣೆಕಾರ ಇರ್ಫಾನ್ ಪಠಾಣ್ ಕೂಡ ಹೆಜ್ಜೆಹಾಕಿದ್ದು ನೋಡುಗರ ಮನಕ್ಕೆ ಮುದ ನೀಡಿತು. ಮುಖ್ಯ ಕೋಚ್ ಜೊನಾಥನ್ ಟ್ರಾಟ್ (ಇಂಗ್ಲೆಂಡ್ ಮಾಜಿ ಆಟಗಾರ) ಅವರ ಸಮಾಧಾನಚಿತ್ತದ ತರಬೇತಿಯ ಪ್ರಭಾವ ಅದು.

ಭಾರತದ ಮಾಜಿ ಆಟಗಾರ ಅಜಯ್ ಜಡೇಜ ಮೆಂಟರ್ ಆಗಿರುವ ಅಫ್ಗನ್ ತಂಡದ ಬ್ಯಾಟರ್‌ಗಳು, ಪಾಕ್ ತಂಡದ ಬಲಾಢ್ಯ ಬೌಲರ್‌ಗಳನ್ನು ಎದುರಿಸಿದ ರೀತಿಯೂ ವಿಶೇಷ. ಇದರೊಂದಿಗೆ ತಾವು ದುರ್ಬಲರಲ್ಲ, ಕಿರೀಟ ಧರಿಸುವ ಕನಸು ನನಸುಗೊಳಿಸುವ ಸಾಮರ್ಥ್ಯವೂ ತಮಗಿದೆ ಎಂಬ ಸಂದೇಶವನ್ನು ಆಟಗಾರರು ನೀಡಿದ್ದಾರೆ.

ಇಂಗ್ಲೆಂಡ್ ಮತ್ತು ಪಾಕ್ ತಂಡಗಳ ಕ್ರಿಕೆಟ್ ಆಟದ ಅನುಭವ ಮತ್ತು ಸಾಮರ್ಥ್ಯಗಳಿಗೆ ಹೋಲಿಕೆ ಮಾಡಿದರೆ ಅಫ್ಗಾನಿಸ್ತಾನ ಇನ್ನೂ ಕಿಶೋರಾವಸ್ಥೆಯಲ್ಲಿದೆ. ಅಫ್ಗಾನಿಸ್ತಾನ ಆಡುತ್ತಿರುವ ಮೂರನೇ ವಿಶ್ವಕಪ್ ಟೂರ್ನಿ ಇದು. 2009ರಿಂದ ಇಲ್ಲಿಯವರೆಗೂ ಆಡಿರುವ 157 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ 75ರಲ್ಲಿ ಗೆದ್ದಿದೆ. ಅದೇ ಪಾಕ್ ತಂಡವು 966 ಏಕದಿನ ಪಂದ್ಯಗಳಲ್ಲಿ ಆಡಿದೆ. 12 ವಿಶ್ವಕಪ್ ಟೂರ್ನಿಗಳಲ್ಲಿ ಆಡಿರುವ ಅನುಭವಿ. ಇನ್ನು ಇಂಗ್ಲೆಂಡ್ 789 ಪಂದ್ಯಗಳನ್ನು ಆಡಿದೆ. ಆದರೆ ಈ ಬಾರಿಯ ವಿಶ್ವಕಪ್ ಟೂರ್ನಿಯ ಅಂಕಪಟ್ಟಿಯಲ್ಲಿ ಇದುವರೆಗೆ ಅಫ್ಗಾನಿಸ್ತಾನ ತಂಡವು ಇವೆರಡೂ ತಂಡಗಳಿಗಿಂತ ಮೇಲಿನ ಸ್ಥಾನ ಗಳಿಸಿದೆ.

ಸದಾ ಯುದ್ಧ, ಹಿಂಸೆಯ ಬೀಡಾಗಿರುವ ಅಫ್ಗಾನಿಸ್ತಾನದಲ್ಲಿ ಈ ಎರಡೂವರೆ ದಶಕದಲ್ಲಿ ಹತ್ತಾರು ಅಡೆತಡೆಗಳ ನಡುವೆಯೇ ಕ್ರಿಕೆಟ್ ಬೆಳೆದ ರೀತಿಯನ್ನು ಕಂಡು ಇಡೀ ಜಗತ್ತು ಬೆರಗಾಗಿದೆ. ಕೆಲವು ವರ್ಷಗಳ ಹಿಂದೆ ಭಾರತವು ಅಫ್ಗನ್ ಕ್ರಿಕೆಟ್ ತಂಡಕ್ಕೆ ನೆರವಿನ ಹಸ್ತ ಚಾಚಿತ್ತು. ಭಾರತದಲ್ಲಿಯೇ ತರಬೇತಿಗಾಗಿ ಸಕಲ ವ್ಯವಸ್ಥೆ ಕಲ್ಪಿಸಿಕೊಟ್ಟಿತ್ತು. ಇದು ಆ ದೇಶವು ಟೆಸ್ಟ್ ಮಾನ್ಯತೆ ಗಳಿಸಲು ಕೂಡ ನೆರವಾಯಿತು. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಸ್ಪಿನ್ನರ್ ರಶೀದ್ ಖಾನ್, ಮೊಹಮ್ಮದ್ ನಬಿ, ನೂರ್ ಅಹಮದ್ ಮತ್ತು ನವೀನ್ ಉಲ್ ಹಕ್ ಅವರಂತಹ ಆಟಗಾರರೂ ಅಫ್ಗನ್ ಯುವಜನತೆಗೆ ಪ್ರೇರಣೆಯಾಗುತ್ತಿದ್ದಾರೆ.

ಇನ್ನು ನೆದರ್ಲೆಂಡ್ಸ್ ತಂಡದ ಕಥೆ ಕೂಡ ಆಸಕ್ತಿದಾಯಕ. ಈ ಟೂರ್ನಿಯಲ್ಲಿ ತಾನು ಆಡಿದ ಪಂದ್ಯಗಳಲ್ಲಿ ರನ್‌ಗಳ ಹೊಳೆ ಹರಿಸುತ್ತಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ ಸೋಲಿನ ರುಚಿ ತೋರಿದ್ದು ಸ್ಕಾಟ್ ಎಡ್ವರ್ಡ್ಸ್ ನಾಯಕತ್ವದ ಡಚ್ ಬಳಗ. ಟೂರ್ನಿಯಲ್ಲಿ ಆಫ್ರಿಕಾ ಬಳಗವು ಇದುವರೆಗೆ ಆಡಿದ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ನೂರು ರನ್‌ಗಳಿಗಿಂತ ಹೆಚ್ಚಿನ ಅಂತರದಿಂದ ಗೆದ್ದಿದೆ.

ನೆದರ್ಲೆಂಡ್ಸ್ ತಂಡದಲ್ಲಿರುವ ಬಹುತೇಕ ಆಟಗಾರರು ವೃತ್ತಿಪರ ಕ್ರಿಕೆಟಿಗರಲ್ಲ. ಡೆಲಿವರಿ ಬಾಯ್, ಮೆಕ್ಯಾನಿಕ್, ಉಪನ್ಯಾಸಕ, ಕಂಪ್ಯೂಟರ್ ಆಪರೇಟರ್ ಇತ್ಯಾದಿ ಕೆಲಸಗಳಿಂದ ಉಪಜೀವನ ನಡೆಸುತ್ತಿರುವವರಿದ್ದಾರೆ. ಕ್ರಿಕೆಟ್ ಅವರಿಗೆ ಹವ್ಯಾಸವಷ್ಟೇ. ಆದ್ದರಿಂದ ಅದನ್ನು ಮನಃಪೂರ್ತಿ ಆಸ್ವಾದಿಸುತ್ತಿದ್ದಾರೆ. ಪ್ರತಿಯೊಂದು ಕ್ಷಣವನ್ನೂ ಕಲಿಕೆಯಾಗಿ ಸ್ವೀಕರಿಸುತ್ತಿದ್ದಾರೆ. ಬೆಂಗಳೂರು ಹೊರವಲಯದ ಆಲೂರು ಕ್ರೀಡಾಂಗಣದಲ್ಲಿ ವಿಶ್ವಕಪ್ ಟೂರ್ನಿಗೂ ಮುನ್ನ ಒಂದು ತಿಂಗಳು ಅಭ್ಯಾಸ ನಡೆಸಿದ್ದರು. ಕರ್ನಾಟಕ ಕ್ರಿಕೆಟ್ ತಂಡದ ಎದುರೇ ಎರಡು ಪಂದ್ಯಗಳಲ್ಲಿ ಸೋತಿದ್ದರು. ಅವೆಲ್ಲವನ್ನೂ ಪಾಠವಾಗಿ ಸ್ವೀಕರಿಸಿದ್ದರು. ಉದಾಸೀನ ಮಾಡದೆ, ಬದ್ಧತೆಯಿಂದ ಆಡುತ್ತಿರುವ ತಂಡ ಇದು.

ಡಚ್ಚರ ಪಡೆಯು ಹೋದ ವರ್ಷ ಅಡಿಲೇಡ್‌ನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಪಂದ್ಯದಲ್ಲಿಯೂ ದಕ್ಷಿಣ ಆಫ್ರಿಕಾಕ್ಕೆ ಸೋಲುಣಿಸಿತ್ತು.

ಇಂತಹ ಒಂದೊಂದೇ ಅಚ್ಚರಿಯ ಗೆಲುವುಗಳನ್ನು ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಯಶಸ್ವಿಯಾಗಿ ಮುನ್ನುಗ್ಗುತ್ತಿರುವ ತಂಡ ಇದು. ವಿಶ್ವದ ಪ್ರಮುಖ ಐದು ತಂಡಗಳಾದ ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ತಂಡಗಳು ಆಡುವಷ್ಟು ಪಂದ್ಯಗಳನ್ನು ನೆದರ್ಲೆಂಡ್ಸ್ ಆಡುವುದಿಲ್ಲ. ಆದರೂ ಆಟಗಾರರ ಫಿಟ್‌ನೆಸ್ ಮಟ್ಟ ಮತ್ತು ಆಟದ ಬಗೆಗಿನ ಪ್ರೀತಿಯು ಯಶಸ್ಸಿಗೆ ಕಾರಣವಾಗಿರುವುದರಲ್ಲಿ ಅನುಮಾನವಿಲ್ಲ. ಇದೇ ರೀತಿ ಮುಂದುವರಿದರೆ ಭವಿಷ್ಯದಲ್ಲಿ ಕಿರೀಟ ಧರಿಸಿದರೂ ಅಚ್ಚರಿಯೇನಿಲ್ಲ. ಏಕೆಂದರೆ ಇಂತಹ ಅಚ್ಚರಿಗಳು ಈ ಹಿಂದೆಯೂ ನಡೆದಿವೆ.

ಭಾರತ ತಂಡವೂ ದಶಕಗಳ ಹಿಂದೆ ‘ಕಪ್ಪು ಕುದುರೆ’ ಆಗಿತ್ತು. ಮೊದಲೆರಡು ಬಾರಿಯ ವಿಶ್ವ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವನ್ನು ಭಾರತದ ಕಪಿಲ್ ದೇವ್ ಬಳಗವು 1983ರಲ್ಲಿ ಹಣಿದಾಗ ಕ್ರಿಕೆಟ್ ಅಭಿಮಾನಿಗಳು ರೋಮಾಂಚನಗೊಂಡಿದ್ದರು. ಆ ಟೂರ್ನಿಯ ಫೈನಲ್‌ನಲ್ಲಿ ವಿಂಡೀಸ್ ದೈತ್ಯರನ್ನು ಮಣಿಸಿದ್ದ ಭಾರತ ಪ್ರಶಸ್ತಿಗೆ ಮುತ್ತಿಕ್ಕಿತ್ತು. ಅದೂ ಕ್ರಿಕೆಟ್ ಕಾಶಿ ಲಾರ್ಡ್ಸ್ ಅಂಗಳದಲ್ಲಿ. ಈ ಬಾರಿ ವೆಸ್ಟ್ ಇಂಡೀಸ್ ತಂಡವು ವಿಶ್ವ ಕಪ್ ಕ್ವಾಲಿಫೈಯರ್‌ನಲ್ಲಿಯೇ ಸೋತು ನಿರ್ಗಮಿಸಿದ್ದು ಕೂಡ ಸಣ್ಣಪುಟ್ಟ ತಂಡಗಳ ಎದುರು ಎಂಬುದು ಸೋಜಿಗ.

ಈ ಹಿಂದಿನ ವಿಶ್ವಕಪ್‌ಗಳಲ್ಲಿಯೂ ಇಂತಹ ಅಚ್ಚರಿಗಳು ನಡೆದಿವೆ. 1983ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಜಿಂಬಾಬ್ವೆ ಗೆದ್ದಿದ್ದು ಕೂಡ ಇತಿಹಾಸ. 1992ರಲ್ಲಿ ಜಿಂಬಾಬ್ವೆ ಎದುರು ಇಂಗ್ಲೆಂಡ್ ಮಣಿದಿತ್ತು. ವೆಸ್ಟ್ ಇಂಡೀಸ್ ತಂಡವನ್ನು ಕೆನ್ಯಾ (1996) ಸೋಲಿಸಿತ್ತು. 1999ರಲ್ಲಿ ಪಾಕ್ ತಂಡಕ್ಕೆ ಬಾಂಗ್ಲಾ ಸೋಲುಣಿಸಿತ್ತು. 1996ರ ವಿಶ್ವ ಚಾಂಪಿಯನ್ ಶ್ರೀಲಂಕಾಗೆ 2003ರಲ್ಲಿ ಕೆನ್ಯಾ ಮಣ್ಣುಮುಕ್ಕಿಸಿತ್ತು. 2007ರಲ್ಲಿ ಪಾಕ್ ತಂಡವು ಐರ್ಲೆಂಡ್ ಎದುರು ಹಾಗೂ ಭಾರತವು ಬಾಂಗ್ಲಾ ಎದುರು ಸೋತಿದ್ದವು. 2011ರಲ್ಲಿ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಆಘಾತ ನೀಡಿದ್ದ ಐರ್ಲೆಂಡ್, 2015ರಲ್ಲಿ ವಿಂಡೀಸ್ ತಂಡಕ್ಕೂ ಪಾಠ ಕಲಿಸಿತ್ತು. ಹೋದ ಬಾರಿ ವಿಶ್ವಕಪ್‌ನಲ್ಲಿಯೂ ದಕ್ಷಿಣ ಆಫ್ರಿಕಾಕ್ಕೆ ಬಾಂಗ್ಲಾದೇಶ ತಂಡ ಸೋಲುಣಿಸಿತ್ತು.

ವಿಶ್ವದ ಎಲ್ಲೆಡೆ ಅಬ್ಬರಿಸುತ್ತಿರುವ ಟಿ20 ಕ್ರಿಕೆಟ್ ಮತ್ತು ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಹಣ ಗಳಿಕೆಯನ್ನೂ ಮಾಡುತ್ತ ಸಾಂಪ್ರದಾಯಿಕವಾದ ಟೆಸ್ಟ್ ಮತ್ತು ಏಕದಿನ ಮಾದರಿಗಳಲ್ಲಿ ಅಸ್ತಿತ್ವ ಉಳಿಸಿಕೊಳ್ಳುವ ಸವಾಲು ಎಲ್ಲ ದೇಶಗಳಿಗೂ ಇದೆ. ಅದಕ್ಕೆ ಬೇಕಾದ ಸಂಪನ್ಮೂಲವೂ ಅತ್ಯಧಿಕ. ಇದು ಎಲ್ಲ ದೇಶಗಳಿಂದ ಸಾಧ್ಯವಾಗುತ್ತಿಲ್ಲ. ಆದರೆ ಭಾರತ ಹಣಕಾಸಿನ ವಿಚಾರದಲ್ಲಿ ಬಲಾಢ್ಯವಾಗಿರುವುದರಿಂದ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿದೆ. ಇದರ ಶ್ರೇಯ ಇಲ್ಲಿಯ ಕ್ರಿಕೆಟ್ ತಾರೆಗಳು ಮತ್ತು ಅಭಿಮಾನಿಗಳಿಗೇ ಸಲ್ಲಬೇಕು.

ಸದ್ಯ ಏಕದಿನ ಮಾದರಿಯ ಅಳಿವು ಉಳಿವು ಕೂಡ ಈ ವಿಶ್ವಕಪ್ ಟೂರ್ನಿಯ ಯಶಸ್ಸಿನ ಮೇಲೆ ಅವಲಂಬಿತವಾಗಿದೆ. ಅಫ್ಗಾನಿಸ್ತಾನ ಮತ್ತು ನೆದರ್ಲೆಂಡ್ಸ್‌ನಂತಹ ತಂಡಗಳು ಆಡುತ್ತಿರುವ ರೀತಿಯು ಏಕದಿನ ಕ್ರಿಕೆಟ್‌ನತ್ತ ಅಭಿಮಾನಿಗಳು ಚಿತ್ತ ಹರಿಸುವಂತೆ ಮಾಡುತ್ತಿರುವುದು ಸುಳ್ಳಲ್ಲ.

ಚುರುಮುರಿ

ಹುಲಿ ಉಗುರು

• ಗುರು ಪಿ.ಎಸ್.

‘ರಜೆ ಇದ್ದರೂ ಮನೇಲಿ ಒಂದೇ ಒಂದ್ ಕೆಲಸ ಮಾಡಲ್ಲ, ನನಗಂತೂ ಸಾಕಾಗಿ ಹೋಗಿದೆ’ ಮನೆ ಸ್ವಚ್ಛ ಮಾಡುತ್ತಾ ನನಗೆ ಬೈಯುತ್ತಿದ್ದಳು ಹೆಂಡತಿ.

‘ನನ್ನ ಉಗುರುಗಳನ್ನ ಕಟ್ ಮಾಡಿ, ಅಲ್ಲಿ ಮೂಲೇಲಿ ಇಟ್ಟದೀನಿ. ಅದನ್ನೆಲ್ಲ ತಗೊಂಡ್ ಹೋಗಿ ಲಾಕೆಟ್ ಮಾಡಿಸ್ಕೊಂಡಿಯ ಮತ್ತೆ...’ ನಗುತ್ತಲೇ ಹೇಳಿದೆ.

‘ಓಹ್, ನೀವೇನ್ ಹುಲೀನಾ, ನಿಮ್ ಉಗುರುಗಳನ್ನೆಲ್ಲ ಲಾಕೆಟ್ ಮಾಡಿಸಿ ಸರದಲ್ಲಿ ಹಾಕ್ಕೊಳೋಕೆ?’

‘ಹೌದು ಕಣೆ, ನಾನೊಂಥರಾ ಹುಲಿ ಇದ್ದಂಗೆ’.

‘ಇರಬಹುದು, ಇರಬಹುದು. ಅದಕ್ಕೇ ನನಗೆ ಆಗಾಗ ಅನಿಸ್ತಿರುತ್ತೆ, ಯಾವುದೋ ಪ್ರಾಣಿ ಜೊತೆಗೆ ಸಂಸಾರ ಮಾಡ್ತಿದೀನೇನೋ ಅಂತ’ ಕಾಲೆಳೆದಳು ಪತ್ನಿ.

‘ಹೀಗೇ ಆಡ್ತಿರು, ಹುಲಿ ಉಗುರು ಇಟ್ಕೊಂಡಿದಾಳೆ ಅಂತ ಕಂಪ್ಲೇಂಟ್ ಕೊಟ್ಟು ಜೈಲಿಗೆ ಹಾಕಿಸ್ತೀನಿ’.

‘ಹೌದು ರೀ, ಟಿ.ವಿ ರಿಯಾಲಿಟಿ ಷೋದಲ್ಲಿದ್ದ ಅದ್ಯಾರನ್ನೋ ಅರೆಸ್ಟ್ ಮಾಡಿದಾರಂತೆ... ಆದರೂ, ಹೀರೊ, ಹೀರೊ ಕಮ್ ಪೊಲಿಟೀಷಿಯನ್ ಕೊರಳಲ್ಲಿ ಹುಲಿ ಉಗುರಿನ ಲಾಕೆಟ್ ಇದ್ದಿದ್ದನ್ನ, ಅದ್ಯಾರೋ ಗುರೂಜಿ ಹುಲಿ ಚರ್ಮದ ಮೇಲೆ ಕುಳಿತಿದ್ದನ್ನೆಲ್ಲ ನೋಡಿದ ನೆನಪು. ಅವರನ್ನೂ ವಶಕ್ಕೆ ತಗೊಳ್ತಾರಾ?’

‘ಡೌಟು, ಬಡಪಾಯಿಯಂಗೆ ಕಾನೂನ ಮೇಲೆ ದಬ್ಬಾಳಿಕೆ ಅಷ್ಟೇ. ನಮ್ ಮನೆಯಲ್ಲೇ ನೋಡು, ಇಲ್ಲಿ ನಿಮ್ ಅಪ್ಪ, ತಮ್ಮ, ಮಗನಿಗೊಂದು ರೂಲ್ಸ್, ನನ್ನಂಥ ಬಡಪಾಯಿಗೇ ಒಂದು ರೂಲ್ಸ್ ಅನ್ನೋ ಹಾಗಿದೆಯಲ್ವ, ಸೊಸೈಟಿಲೂ ಅಂಥದೇ ವ್ಯವಸ್ಥೆ ಇದೆ’ ನಾನೂ ಕಾಲೆಳೆದೆ.

‘ಆದರೂ, ಹುಲಿ ಉಗುರು ಹಾಕ್ಕೊಳ್ಳೋದೆಲ್ಲ ಎಂಥ ಷೋಕಿ ರೀ?’

‘ಅವರಿಗೆಲ್ಲ ಹುಲಿ ಉಗುರು, ಚರ್ಮ ಇಷ್ಟ ಅನಿಸುತ್ತೆ ಬಿಡು’.

‘ಹಾಗಿದ್ದರೆ, ಕಾಡಿನ ಹುಲಿಗಳನ್ನ ನೇರವಾಗಿ ಇಂಥವರ ಮನೆಯೊಳಗೇ ಬಿಟ್ಟು, ಉಗುರು ಕಟ್ ಮಾಡ್ಕೊಳ್ರಪ್ಪ ಅನ್ನಬೇಕು’.

‘ಆಗ, ಹುಲಿನೇ ಇವರನ್ನೆಲ್ಲ ಕಟ್ ಮಾಡಿಬಿಡುತ್ತೆ’ ಇಬ್ಬರೂ ನಗಲಾರಂಭಿಸಿದೆವು.

ಸಂಗತ

ನದಿಯ ಬಿಕ್ಕಳಿಕೆ ತೆರೆದಿಟ್ಟ ಚಿತ್ರಪಟ

ನಮ್ಮದೇ ಆರೋಗ್ಯಕ್ಕೂ ಒಳಿತಿಗೂ ಪೂರಕವಾಗಿರುವ ಹಸಿರನ್ನೂ ಪರಿಸರ ಘಟಕಗಳನ್ನೂ ತಾಜಾ ಆಗಿ ಉಳಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ತುಂಗೆಯ ತಟದಲ್ಲಿ ನದಿಯ ನಡಿಗೆಗುಂಟ ಸಾಗುವ ಹೆದ್ದಾರಿಯ ನಿತ್ಯಸಂಚಾರಿಗೆ ನದಿಯೊಂದು ನಿತ್ಯಬೆಡಗು- ಬೆರಗಿನ ಸಂಗಾತಿ. ಅದೇ ಹೊತ್ತಿಗೆ ಕಿವಿತಾಕುವ ನದಿಯ ಆರ್ತನಾದವು ಬೇರೆಯದೇ ಕತೆ ಹೇಳುತ್ತದೆ... ಅಬ್ಬರದ ಮಳೆ ಕಾಣುವ ಮಲೆನಾಡಲ್ಲೂ ಈ ಬಾರಿ ಬರದ ಛಾಯೆ! ಭತ್ತ ಮತ್ತು ಹುಲ್ಲಿಗೆ ಸಣ್ಣ ಬೆಲೆ ಬಂತೆಂಬ ಖುಷಿಯಲ್ಲಿ ಮಳೆಯಾಶ್ರಿತ ಮಕ್ಕಿಗದ್ದೆಗಳಲ್ಲೂ ಕಂಡ ಭತ್ತದ ಬೇಸಾಯಕ್ಕೆ ಈ ಬಾರಿ ಮುಗಿಲು ಯಾಕೋ ಮುನಿದಿದೆ.

ಹನಿಹನಿ ನೀರೂ ಅಮೂಲ್ಯವೆನಿಸಿರುವ ಸಮಯದಲ್ಲಿ ನದಿಯ ಒಡಲು ಖಾಲಿಯಾಗುತ್ತದೆಂಬ ಕಳವಳ. ಪಶ್ಚಿಮಘಟ್ಟಗಳು ಹೆರುವ ನದಿತೊರೆಗಳು ಸರ್ವಋತು ಜಲನಿಧಿಗಳಾಗಿ ವರ್ಷವಿಡೀ ಮೈದುಂಬಿ ಮೆರೆಯುತ್ತಿದ್ದ, ಜೀವಪೊರೆಯುತ್ತಿದ್ದ ದಿನಗಳು ಮರೆಯಾಗಿವೆ. ಈಗೆಲ್ಲಾ ಮುಂಗಾರು ಕಳೆಯುತ್ತಿದ್ದಂತೆ ನದಿಗಳಿಗೂ ಎದೆಬೇನೆ ಕಾಡುತ್ತಿದೆ. ಫಲವತ್ತಾದ ಕಾಡುಗುಡ್ಡಗಳನ್ನು ಬಳಸಿ ಮಳೆಗಾಲದಲ್ಲೂ ತಿಳಿಯಾಗಿ ಹರಿಯುತ್ತಿದ್ದ ‘ತುಂಗಾ ಪಾನ, ಗಂಗಾ ಸ್ನಾನ...’ ಶೀರ್ಷಿಕೆ ಹೊತ್ತಿದ್ದ ನದಿ ತುಂಗೆಗೆ ಬಿಸಿಲುಗಾಲಕ್ಕೆ ವಿಪರೀತ ಬಳಲಿಕೆ. ಎರಡು ದಂಡೆಗಳ ನಡುವಿನ ಕಮರು- ಕೊರಕಲಿನಾಳದಲ್ಲಿ ಹರಿಯುತ್ತಿದ್ದ ನದಿ, ತೊರೆಗಳ ಆಳವೀಗ ಹೂಳು ತುಂಬಿ ಕೆಲವೆಡೆ ಸಪಾಟಾಗಿ ನೆಲಮಟ್ಟದಲ್ಲಿದೆ. ಹೂಳು ತುಂಬಿದ ಕೆರೆ, ಹೊಳೆಗಳು ಮೊದಲ ಮಳೆಗೇ ಊರು ಮುಳುಗಿಸಿದ ಉದಾಹರಣೆಗಳಿವೆ.

ಮಣ್ಣಿನ ನೀರುಹೀರಿಕೆ, ಸಂಗ್ರಹ, ಧಾರಣೆಯ ಸಾಮರ್ಥ್ಯ ಕುಂಠಿತಗೊಂಡ ಕಾರಣಕ್ಕೆ ಈಗೀಗ ಮಲೆನಾಡಿನಲ್ಲಿ ‘ಮಳೆಗಾಲ ಮುಗಿದ ಮಾರನೇ ತಿಂಗಳೇ ಬರಗಾಲ’ ಎನ್ನುವಂತಾಗಿದೆ. ಘಟ್ಟಭಾಗದಲ್ಲಿ ಕಾಡು ನಾಶವಾಗುತ್ತಿರುವ ಕಾರಣಕ್ಕೆ ಜಲಮೂಲ, ಸಂಗ್ರಹಾಗಾರಗಳು ತೀವ್ರಗತಿಯಲ್ಲಿ ಬತ್ತುತ್ತಿವೆ. ಅರಣ್ಯ ಒತ್ತುವರಿ, ಕೃಷಿಭೂಮಿ ನಾಶ, ನಗರೀಕರಣ, ಕೊಳವೆಬಾವಿ ಹಾವಳಿ, ಅವೈಜ್ಞಾನಿಕ ಅಭಿವೃದ್ಧಿ ಕಾಮಗಾರಿಗಳಲ್ಲಿ ಬಿಕ್ಕಳಿಸುತ್ತಿರುವ ಜಲನಿಧಿಗಳ ಅರಣ್ಯರೋದನಕ್ಕೆ ಕಿವಿಗೊಡುವವರು ಇಲ್ಲವಾಗಿದೆ.

ಮುಂಗಾರಿನ ಆರಂಭದಲ್ಲೇ ಭರ್ತಿಯಾಗುತ್ತಿರುವ ತುಂಗಾ ಜಲಾಶಯ ತುಂಬಿಕೊಳ್ಳುತ್ತಿರುವುದು ನೀರನ್ನೋ ಹೂಳನ್ನೋ ಅನ್ನುವ ಅನುಮಾನ ಕೆಲವರಿಗಿದೆ. ಮೊದಲಿನಂತಿಲ್ಲ, ಮಳೆಗಾಲದಲ್ಲಿ ನದಿಗಳು ಕೆಂಪಾಗುತ್ತವೆ. ಭಾರಿ ಪ್ರಮಾಣದಲ್ಲಿ ಮಣ್ಣು, ಮರಳು, ಹೂಳನ್ನು ಹೊತ್ತು ಸಾಗುವ ಹಳ್ಳಕೊಳ್ಳಗಳು ಜಲಾಶಯವನ್ನು ತುಂಬಿಕೊಳ್ಳುತ್ತವೆ. ಹೀಗೇ ಮುಂದುವರಿದರೆ ಕೆಲವೇ ವರ್ಷಗಳಲ್ಲಿ ನಾಡಿನ ಬಹುತೇಕ ಜಲಾಶಯಗಳು ಆಟದ ಬಯಲಾಗುವ ಸಾಧ್ಯತೆಯೇ ಹೆಚ್ಚು! ಸಾವಿರಾರು ಕೋಟಿ ವಿನಿಯೋಗಿಸಿ, ಸಾವಿರಗಟ್ಟಲೆ ಹೆಕ್ಟೇರ್ ದಟ್ಟಾರಣ್ಯ, ಫಲವತ್ತಾದ ಕೃಷಿಭೂಮಿ ಹಾಗೂ ನೆಲೆನಿಂತ ಜನಜೀವನವನ್ನೂ ಮುಳುಗಿಸಿ ಮೇಲೆದ್ದ ವಿವಿಧೋದ್ದೇಶ ಯೋಜನೆಗಳು ಹೀಗೆ ಮಣ್ಣುಪಾಲಾದರೆ ಹೇಗೆ?

28,000 ಚದರ ಕಿ.ಮೀ. ವಿಸ್ತಾರದಲ್ಲಿ ಹಬ್ಬಿರುವ ತುಂಗಭದ್ರಾ ಜಲಾಶಯದ ಹಿನ್ನೀರಿನಲ್ಲಿ ಹೂಳು ತುಂಬಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿರುವುದು ನೀರಾವರಿ ಯೋಜನೆಗೆ ತೊಡಕಾಗಿದೆ. ಸುಮಾರು ₹ 8,000 ಕೋಟಿ ಖರ್ಚು ಮಾಡಿ 31 ಟಿಎಂಸಿ ಅಡಿಯಷ್ಟು ನೀರು ಸಂಗ್ರಹಕ್ಕಾಗಿ ಉದ್ದೇಶಿತ ಸಮಾನಾಂತರ ಜಲಾಶಯವೆಂಬ ಮತ್ತೊಂದು ಮುಳುಗಡೆ ಯೋಜನೆಯ ಬದಲು, ₹ 6,000 ಕೋಟಿ ವೆಚ್ಚದಲ್ಲಿ ತುಂಗಭದ್ರೆಯ ಹೂಳು ತೆಗೆಯುವ ಯೋಜನೆಯನ್ನು ಸ್ಥಳೀಯ ರೈತರು ಬೆಂಬಲಿಸುತ್ತಿದ್ದಾರೆ. ಹಾಗಾದಲ್ಲಿ ಅಂದಾಜು ಐದೂವರೆ ಸಾವಿರ ಹೆಕ್ಟೇರ್ ಭೂಮಿಯನ್ನೂ ಮುಳುಗಡೆಯಿಂದ ಉಳಿಸಿಕೊಳ್ಳಬಹುದು.

ಜಲಾಶಯಗಳ ಹೂಳು ತೆಗೆಯುವುದು ಕಷ್ಟದ ಕೆಲಸ. ಅದರೊಟ್ಟಿಗೆ ತಗಲುವ ವೆಚ್ಚವೂ ಅಧಿಕ. ಹೂಳು ತೆಗೆಯದೇಹೋದರೆ ಕೆರೆಕಟ್ಟೆ, ಜಲಾಶಯಗಳಿಗೆ ಉಳಿಗಾಲವಿಲ್ಲ. ಈಗಾಗಲೇ ಬೆಂಗಳೂರು ಒಂದರಲ್ಲೇ ಇದ್ದ ಸುಮಾರು ಎಂಟುನೂರು ಕೆರೆಗಳ ಪೈಕಿ ಪ್ರಸ್ತುತ ಅಳಿದುಳಿದ 80- 90 ಕೆರೆಗಳೇ ಜಲನಿಧಿಯ ವಿನಾಶಕ್ಕೊಂದು ಜೀವಂತ ಮತ್ತು ಜ್ವಲಂತ ಉದಾಹರಣೆ! ನದಿದಂಡೆಯ ಹೆಕ್ಟೇರ್ ಗಟ್ಟಲೆ ಕಾಡುಗುಡ್ಡಗಳು ಕರಗಿ ಅಡಿಕೆ ತೋಟಗಳಾಗಿವೆ. ಉದ್ದಕ್ಕೂ ಹತ್ತಾರು ಅಶ್ವಶಕ್ತಿಯ ಅಸಂಖ್ಯ ಪಂಪ್‌ಸೆಟ್‌ಗಳು ಹಗಲಿರುಳು ನೀರು ಹೀರುತ್ತಿವೆ. ನದಿತಟದಲ್ಲಿ ಅವ್ಯಾಹತವಾಗಿರುವ ಮರಳು ಗಣಿಗಾರಿಕೆ ಮತ್ತು ಸ್ವಾರ್ಥಕ್ಕಾಗಿ ಅಸೂಕ್ಷ್ಮವಾಗಿ ಕೈಗೆತ್ತಿಕೊಳ್ಳುತ್ತಿರುವ ಬೃಹತ್ ಅಭಿವೃದ್ಧಿ ಯೋಜನೆಗಳು ಕೂಡ ನದಿ, ಜಲಮೂಲಗಳ ಸಾವಿಗೆ ನಾಂದಿ ಹಾಡುತ್ತಿವೆ.

ನೀರಿನಂತೆಯೇ ಮೇಲ್ಮಣ್ಣು ಕೂಡ ಅಮೂಲ್ಯನಿಧಿ. ತೀವ್ರಗತಿಯ ಅರಣ್ಯನಾಶದ ಪರಿಣಾಮ, ಮೇಲ್ಮಣ್ಣು ಸಡಿಲಗೊಂಡು ತೀವ್ರಗತಿಯಲ್ಲಿ ಸವಕಳಿಯಾಗುತ್ತಿದೆ. ಮಳೆಯೊಟ್ಟಿಗೆ ಮೇಲ್ಮಣ್ಣು ಕೊಚ್ಚಿಕೊಂಡು ಹೊಳೆ ಸೇರುತ್ತಿದೆ. ಉಳಿದೆಡೆ ಅಡಿಕೆ ತೋಟ, ಶುಂಠಿ ಹಕ್ಕಲು, ಭತ್ತದ ಗದ್ದೆಗಳಿಗೆ ತಂದು ಸುರಿಯುತ್ತಿರುವ ಲೋಡುಗಟ್ಟಲೆ ರಾಸಾಯನಿಕಗಳಿಂದ ನೆಲದ ಸೂಕ್ಷ್ಮಾಣು ಜೀವಜಂತುಗಳು ಸತ್ತು ಮಣ್ಣಿನ ಅಂತಃಸತ್ವವೇ ನಾಶವಾಗುತ್ತಲಿದೆ. ಮಣ್ಣಿಗೆ ವಿಷವುಣಿಸಿ ಬೆಳೆದ ಹಾನಿಕರ ಪೈರು ಹಣ ತರಬಹುದಾದರೂ ಅಲ್ಲಿ ನಿಸ್ತೇಜಗೊಂಡ ನೆಲ ಮರುಭೂಮೀಕರಣಕ್ಕೆ ದಾರಿ ಮಾಡುವುದಂತೂ ಸತ್ಯ.

ನಮ್ಮದೇ ಆರೋಗ್ಯಕ್ಕೂ ಒಳಿತಿಗೂ ಪೂರಕವಾಗಿರುವ ಹಸಿರನ್ನೂ ಪರಿಸರ ಘಟಕಗಳನ್ನೂ ತಾಜಾ ಆಗಿ ಉಳಿಸಿಕೊಳ್ಳಬೇಕು. ನೆಮ್ಮದಿಯ ಬದುಕಿಗೆ ಭಂಗ ತರುವ ಅಭಿವೃದ್ಧಿ ಯೋಜನೆಗಳನ್ನು ನಿರಾಕರಿಸಿ ಸರಳ ಮತ್ತು ಸಾತ್ವಿಕ ಜೀವನಕ್ರಮವನ್ನು ಬದುಕುವುದು ಮತ್ತು ಬೆಂಬಲಿಸುವುದು ಈಗ ನಮಗುಳಿದಿರುವ ಅನಿವಾರ್ಯ ಆಯ್ಕೆ.

ವಾಚಕರ ವಾಣಿ

ವಿ.ವಿ.ಗಳಿಗೆ ಅನುದಾನ: ವಿಕಸನಕ್ಕೆ ಪೂರಕವಾಗಲಿ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಅನುದಾನದಲ್ಲಿ ಈ ಭಾಗದ ವಿಶ್ವವಿದ್ಯಾಲಯಗಳಿಗೆ ಕನಿಷ್ಠ ಶೇಕಡ 10ರಷ್ಟನ್ನು ಮೀಸಲಿಡುವಂತೆ ಇದೇ ಮೊದಲ ಬಾರಿಗೆ ರಾಜ್ಯಪಾಲರು ನಿರ್ದೇಶನ ನೀಡಿರುವುದು (ಪ್ರ.ವಾ., ಅ. 23) ಸ್ವಾಗತಾರ್ಹ. ಅದರಂತೆ, ಈ ವಿಶ್ವವಿದ್ಯಾಲಯಗಳಿಗೆ ₹ 300 ಕೋಟಿ ಅನುದಾನ ಸಿಗಲಿದೆ. ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಉನ್ನತ ಶಿಕ್ಷಣ ಸುಲಭವಾಗಿ ಲಭ್ಯವಾಗಬೇಕೆಂಬ ಉದ್ದೇಶದಿಂದ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಿವೆ. ಹೆಚ್ಚಿನ ಮಟ್ಟದ ಅನುದಾನ ಸಿಗದೇ ಪರಿಣಾಮಕಾರಿ ಹಾಗೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹಿನ್ನಡೆ ಅನುಭವಿಸುತ್ತಿರುವುದು ವಾಸ್ತವ.

ಜಿಲ್ಲಾಧಿಕಾರಿಗಳ ಮೂಲಕ ಅನುದಾನ ಬಿಡುಗಡೆ ಮಾಡುವುದಕ್ಕೆ ಬದಲಾಗಿ, ನೇರವಾಗಿ ವಿಶ್ವವಿದ್ಯಾಲಯಗಳಿಗೆ ಅನುದಾನ ಬಿಡುಗಡೆ ಮಾಡಬೇಕೆಂಬ ರಾಜ್ಯಪಾಲರ ಆಶಯ ಒಳ್ಳೆಯದು. ಅದಕ್ಕೆ ತಕ್ಕಂತೆ ವಿಶ್ವವಿದ್ಯಾಲಯದ ನಿಯೋಜಕರು, ಸಿಗುವ ಅನುದಾನದಲ್ಲಿ ಉನ್ನತ ಶಿಕ್ಷಣದ ಪ್ರಗತಿಗೆ ಪ್ರಾಮಾಣಿಕವಾಗಿ ದುಡಿಯಬೇಕು. ಹಿಂದುಳಿದ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ, ಭವಿಷ್ಯದ ಬದುಕಿಗೆ ದಾರಿದೀಪವಾಗಬೇಕು.

ಆರ್.ಶಿವರಾಮ್, ಸಂಡೂರು

ಮಾನವತೆಯ ಮಂದಾರ

ನಡೆಯುತ್ತಲೇ ಇವೆ ಮತ್ತೆ ಮತ್ತೆ
ಮರ್ಯಾದೆಗೇಡು ಹತ್ಯೆಗಳು ನಾಡಿನಲಿ
ಜಾತಿಯ ಹಂಗಿಲ್ಲ ಪ್ರೀತಿಗೆ ಎಂದಿಗೂ
ಜಾತಿ ಸಂಕೋಲೆ ಕಳಚುವ ದಾರಿ ಈ ಪ್ರೀತಿ
ಕೆಡವಬೇಕು ಜಾತಿಯ ಅಡ್ಡಗೋಡೆಯ
ಕೀಳಬೇಕು ಮೇಲರಿಮೆ ಕೀಳರಿಮೆಯ ಕಳೆಯ
ನೆಡಬೇಕು ಮಾನವತೆಯ ಮಂದಾರವ
ಎದೆಯಂಗಳದಲಿ
ಆಗಬೇಕು ನೈಜಮಾನವ ವಿಶ್ವಮಾನವ!

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಉಚಿತ ಚುಚ್ಚುಮದ್ದು: ಉತ್ತಮ ಪ್ರಯತ್ನ

ಪಾರ್ಶ್ವವಾಯು ಮತ್ತು ಹೃದಯಾಘಾತಕ್ಕೆ ಒಳಗಾದವರನ್ನು ಪ್ರಾಣಾಪಾಯದಿಂದ ಪಾರು ಮಾಡುವ ಚುಚ್ಚುಮದ್ದುಗಳನ್ನು ಅಗತ್ಯವಿರುವ ಎಲ್ಲರಿಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಒದಗಿಸಲು ಸರ್ಕಾರ ನಿರ್ಧರಿಸಿರುವುದನ್ನು ತಿಳಿದು ತುಂಬಾ ಸಂತೋಷವಾಯಿತು. ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆ ತರುವ ದಿಸೆಯಲ್ಲಿ ಇದು ಉತ್ತಮ ಪ್ರಯತ್ನ. ಜೊತೆಗೆ ಆರೋಗ್ಯ ಕ್ಷೇತ್ರವನ್ನು ಸಂಪೂರ್ಣ ಉಚಿತವಾಗಿಸುವ ಪ್ರಯತ್ನಕ್ಕೆ ಅಡಿಗಲ್ಲು ಹಾಕಿದಂತೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ದಿಸೆಯಲ್ಲಿ ತ್ವರಿತ ಕ್ರಮ ಕೈಗೊಳ್ಳಬೇಕು. ಸದಾಕಾಲ ವೋಟಿಗಾಗಿ ರಾಜಕಾರಣ ಮಾಡಿಕೊಂಡಿರುವುದನ್ನು ಬಿಟ್ಟು, ಇಂತಹ ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಪೂರಕವಾಗಿ ಯೋಚಿಸುವಂತಾಗಲಿ.

ಎಚ್.ಎ.ಪ್ರಮೋದ, ಹಿರೀಸಾವೆ, ಹಾಸನ

ಸವದತ್ತಿಯಲ್ಲಿ ವಸತಿ, ಶೌಚಾಲಯ ವ್ಯವಸ್ಥೆ ಕಲ್ಪಿಸಿ

ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿನ ರೇಣುಕಾ ಎಲ್ಲಮ್ಮ ದೇವಸ್ಥಾನವು ರಾಜ್ಯದ ಪ್ರಮುಖ ಧಾರ್ಮಿಕ ಪ್ರವಾಸಿ ಕೇಂದ್ರವಾಗಿದೆ. ನಾಡಿನಲ್ಲಿಯೇ ಅತಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಶ್ರದ್ಧಾಕೇಂದ್ರವಾಗಿದೆ. ಪ್ರತಿವರ್ಷ ಎರಡು ಕೋಟಿ ಭಕ್ತರು ದೇವಿಯ ದರ್ಶನಕ್ಕೆ ಬರುತ್ತಾರೆ ಎಂದು ರಾಜ್ಯ ಸರ್ಕಾರದ ಅಧ್ಯಯನ ವರದಿಯೊಂದು ಹೇಳಿದೆ. ಈಗ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ವ್ಯವಸ್ಥೆಯಾಗಿರುವುದರಿಂದ ಈ ದೇವಸ್ಥಾನಕ್ಕೆ ಬರುವವರ ಸಂಖ್ಯೆ ದ್ವಿಗುಣಗೊಂಡಿದೆ.

ಪ್ರವಾಸಿಗರಿಗೆ ಮುಖ್ಯವಾಗಿ ಉತ್ತಮ ವಸತಿ ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸುವುದು ಅವಶ್ಯ. ದೇವಿಯ ದರ್ಶನಕ್ಕೆ ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್, ರಾಜಸ್ಥಾನದಿಂದಲೂ ಜನ ಬರುತ್ತಾರೆ. ಪಾದಯಾತ್ರೆ, ಚಕ್ಕಡಿ, ಬಸ್ಸು, ಖಾಸಗಿ ವಾಹನಗಳಲ್ಲಿ ವರ್ಷವಿಡೀ ಬರುವ ಜನರಲ್ಲಿ ಆರ್ಥಿಕ ಅನುಕೂಲ ಇಲ್ಲದವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಶೌಚಾಲಯದ ಕೊರತೆಯಿಂದ ಮಂದಿರದ ಸುತ್ತಮುತ್ತಲಿನ ವಾತಾವರಣ ಬಹಳಷ್ಟು ಕಲುಷಿತಗೊಂಡಿದೆ. ಮೂಗು ಮುಚ್ಚಿಕೊಂಡೇ ಅಲ್ಲಿ ನಡೆದಾಡಬೇಕಾಗುತ್ತದೆ. ಮಂದಿರಕ್ಕೆ ಹೋಗುವ ರಸ್ತೆಯ ಎರಡೂ ಬದಿಯಲ್ಲಿ ಮಲ, ಮೂತ್ರ ವಿಸರ್ಜನೆ ಮಾಡುತ್ತಾರೆ. ಇದರಿಂದ ವಾತಾವರಣ ಕಲುಷಿತಗೊಂಡು ರೋಗ ಹರಡುವ ಭೀತಿ ಇದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ವ್ಯವಸ್ಥೆ ಕಲ್ಪಿಸಬೇಕು.

ಡಾ. ಎಚ್.ಜಿ.ದಡ್ಡಿ, ಜಮಖಂಡಿ

ಮಣ್ಣಿನ ಫಲವತ್ತತೆ: ನಡೆಯಲಿ ಅಭಿಯಾನ

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗ ನಡೆಸಿದ ಮಣ್ಣಿನ ಫಲವತ್ತತೆ ಕುರಿತ ಜಾಗತಿಕ ಸಮೀಕ್ಷಾ ವರದಿ ಪ್ರಕಾರ, ಜಗತ್ತಿನ ಒಟ್ಟು ಕೃಷಿ ಭೂಮಿಯ ಪೈಕಿ ಶೇ 33ರಷ್ಟು ಭೂಮಿ ಫಲವತ್ತತೆ ಕಳೆದುಕೊಂಡಿದ್ದು, ಇದರಲ್ಲಿ ಕರ್ನಾಟಕವೂ ಸೇರಿದೆ ಎಂಬುದು ಆಘಾತಕಾರಿಯಾದ ಸಂಗತಿಯಾಗಿದೆ. ರಾಜ್ಯದ ಕೃಷಿಯಲ್ಲಿ ರಸಗೊಬ್ಬರವನ್ನು ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿ ಬಳಸಲಾಗುತ್ತಿದೆ. ಇದಕ್ಕೆ ಪೂರಕವಾಗುವಂತೆ ಸರ್ಕಾರವು ರಸಗೊಬ್ಬರಕ್ಕೆ ಅಧಿಕ ಉತ್ತೇಜನ ನೀಡುತ್ತಾ ಬಂದಿದೆ. ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳುವ ದಿಸೆಯಲ್ಲಿ ಇದು ಸರಿಯಾದ ಕ್ರಮವಲ್ಲ.

ಹೀಗಾಗಿ, ಸರ್ಕಾರವು ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳುವುದರ ಅಗತ್ಯ ಹಾಗೂ ಸಾವಯವ ಕೃಷಿ ಪದ್ಧತಿಯ ಮಹತ್ವದ ಕುರಿತು ಅಭಿಯಾನ ನಡೆಸಬೇಕು, ರಸಗೊಬ್ಬರದ ಮಿತಿಮೀರಿದ ಬಳಕೆಯಿಂದ ಮುಂದೆ ಬರುವ ಅಪಾಯವನ್ನು ರೈತರಿಗೆ ತಿಳಿಸಿ ಹೇಳುವ ಕಾರ್ಯಕ್ಕೆ ಮುಂದಾಗಬೇಕು. ಮಣ್ಣಿನ ಪರೀಕ್ಷೆಯ ಮಹತ್ವದ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಸಾವಯವ ಕೃಷಿ ಪದ್ಧತಿಗೆ ಸರ್ಕಾರದಿಂದ ಇನ್ನೂ ಹೆಚ್ಚಿನ ಉತ್ತೇಜನ ಸಿಗಬೇಕು.

ಮಡು ಮೂಲಿಮನಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶ್ರೀಮಂತ, ಅಭಿವೃದ್ಧಿ ಹೊಂದಿದ ಮತ್ತು ರಾಜಕೀಯ ಸ್ಥಿರತೆ ಹೊಂದಿರುವ ದೇಶಗಳ ಪೌರತ್ವ ಪಡೆಯುವವರಲ್ಲಿ ಭಾರತೀಯರೇ ಮೊದಲಿಗರು. 2021ರಲ್ಲಿ 1.32 ಲಕ್ಷ ಭಾರತೀಯರು ಇಂತಹ ದೇಶಗಳ ಪೌರತ್ವ ಪಡೆದಿದ್ದಾರೆ. 2021ರಲ್ಲಿ ಯಾವುದೋ ಒಂದು ದೇಶದ ಪ್ರಜೆಗಳು ಬೇರೆ ದೇಶಗಳ ಪೌರತ್ವ ಪಡೆದ ಅತ್ಯಂತ ದೊಡ್ಡ ಸಂಖ್ಯೆ ಇದು. ಉತ್ತಮ ಜೀವನಮಟ್ಟ, ಉದ್ಯಮ ಮತ್ತು ಉದ್ಯೋಗದ ಕಾರಣಕ್ಕೆ ಭಾರತೀಯರು ಶ್ರೀಮಂತ ದೇಶಗಳ ಪೌರತ್ವ ಪಡೆಯುತ್ತಿದ್ದಾರೆ ಎಂದು ವರದಿ ಒಂದರಲ್ಲಿ ವಿಶ್ಲೇಷಿಸಲಾಗಿದೆ

ಸಿರಿವಂತ ದೇಶಗಳತ್ತ ಭಾರತೀಯರ ವಲಸೆ

ಪ್ರಜಾವಾಣಿ ವಾರ್ತೆ



* ಒಇಸಿಡಿ ದೇಶಗಳ ಪೌರತ್ವ ಪಡೆದವರ ಸಂಖ್ಯೆ ಮತ್ತು ಮೂಲ ದೇಶ

ವಿಶ್ವದ ಶ್ರೀಮಂತ ದೇಶಗಳು ಆರ್ಥಿಕ ಚಟುವಟಿಕೆಗಳ ಸಹಕಾರಕ್ಕಾಗಿ ಒಂದು ಸಂಘ ರಚಿಸಿಕೊಂಡಿವೆ. ಆರ್ಥಿಕ, ಸಹಕಾರ ಮತ್ತು ಅಭಿವೃದ್ಧಿ ಸಂಘ (ಒಇಸಿಡಿ) ಎಂಬುದೇ ಅದರ ಹೆಸರು. ಅಮೆರಿಕ, ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ, ಜರ್ಮನಿ... ಹೀಗೆ 38 ದೇಶಗಳು ಈ ಸಂಘದ ಸದಸ್ಯರಾಗಿವೆ. ಅಭಿವೃದ್ಧಿ ಹೊಂದುತ್ತಿರುವ ಮತ್ತು ಹಿಂದುಳಿದ ದೇಶಗಳ ಲಕ್ಷಾಂತರ ಜನರು ಪ್ರತಿ ವರ್ಷ ಈ ಒಇಸಿಡಿ ದೇಶಗಳ ಪೌರತ್ವ ಪಡೆಯುತ್ತಾರೆ.

2021ರಲ್ಲಿ ಈ ರೀತಿ ಒಇಸಿಡಿ ದೇಶಗಳ ಪೌರತ್ವ ಪಡೆದವರ ಸಂಖ್ಯೆ 48 ಲಕ್ಷ. ಅದರಲ್ಲಿ ಭಾರತೀಯರ ಸಂಖ್ಯೆ 1.32 ಲಕ್ಷ. ಈ ರೀತಿ ಅತಿಹೆಚ್ಚು ಪೌರತ್ವ ಪಡೆದವರ ಪಟ್ಟಿಯಲ್ಲಿ ಭಾರತೀಯರದ್ದೇ ಮೊದಲ ಸ್ಥಾನ. 2019ರಲ್ಲಿ ಈ ಸಂಖ್ಯೆ 1.55 ಲಕ್ಷದಷ್ಟಿತ್ತು. 2019ಕ್ಕೆ ಹೋಲಿಸಿದರೆ 2021ರಲ್ಲಿ ಶ್ರೀಮಂತ ದೇಶಗಳ ಪೌರತ್ವ ಪಡೆದ ಭಾರತೀಯರ ಸಂಖ್ಯೆಯಲ್ಲಿ ಶೇ 14.8ರಷ್ಟು ಇಳಿಕೆಯಾಗಿದೆ. ಹೀಗಿದ್ದೂ, ಭಾರತೀಯರು ಮೊದಲ ಸ್ಥಾನ ಕಾಯ್ದುಕೊಂಡಿದ್ದಾರೆ. 2022ರಲ್ಲಿ ಈ ರೀತಿ ಅತಿಹೆಚ್ಚು ಪೌರತ್ವ ಪಡೆದವರ ಪಟ್ಟಿಯಲ್ಲಿ ಭಾರತೀಯರೇ ಮೊದಲಿಗರು ಎಂದು ವರದಿಯಲ್ಲಿ ಹೇಳಲಾಗಿದೆಯಾದರೂ, ನಿಖರ ಅಂಕಿ-ಅಂಶವನ್ನು ವರದಿಯಲ್ಲಿ ನೀಡಿಲ್ಲ.

2021ರಲ್ಲಿ ಒಇಸಿಡಿ ದೇಶಗಳಲ್ಲಿ ಶಾಶ್ವತ ಮತ್ತು ತಾತ್ಕಾಲಿಕ ಪೌರತ್ವ ಪಡೆದವರು ಹಾಗೂ ಆಶ್ರಯ ಪಡೆದ ಭಾರತೀಯರ ಸಂಖ್ಯೆ ನಾಲ್ಕು ಲಕ್ಷ ದಾಟುತ್ತದೆ. ಇವುಗಳಲ್ಲಿ ಉದ್ಯೋಗ, ಶಿಕ್ಷಣದ ಕಾರಣಕ್ಕೆ ವಲಸೆ ಹೋದವರೂ ಸೇರಿದ್ದಾರೆ. ಭಾರತೀಯರು ಸಿರಿವಂತ ದೇಶಗಳಲ್ಲಿ ನೆಲೆಸಲು ಬಯಸುತ್ತಾರೆ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ. 2021ರಲ್ಲಿ 48 ಲಕ್ಷ ಜನರು ಒಇಸಿಡಿ ದೇಶಗಳ ಪೌರತ್ವ ಪಡೆದಿದ್ದರೆ, 2022ರಲ್ಲಿ ಈ ರೀತಿ 62 ಲಕ್ಷಕ್ಕೂ ಹೆಚ್ಚು ಜನರು ಈ ದೇಶಗಳ ಪೌರತ್ವ ಪಡೆದಿದ್ದಾರೆ. 2013ರಿಂದ ಈವರೆಗಿನ ಅತ್ಯಂತ ದೊಡ್ಡ ಸಂಖ್ಯೆ ಇದು. 2022ರಲ್ಲಿ ಉಕ್ರೇನ್-ರಷ್ಯಾ ಯುದ್ಧ, ಶ್ರೀಲಂಕಾ ಮತ್ತು ಪಾಕಿಸ್ತಾನದಲ್ಲಿನ ಆರ್ಥಿಕ ಬಿಕ್ಕಟ್ಟು, ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರಕ್ಕೆ ಬಂದಿದ್ದು, ಇರಾನ್ ಮೇಲಿನ ಆರ್ಥಿಕ ನಿರ್ಬಂಧ, ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಬರದ ಸ್ಥಿತಿ ಇವೆಲ್ಲವೂ ವಲಸೆ ಹೆಚ್ಚಾಗಲು ಕಾರಣವಾಗಿವೆ. ಈ ಪ್ರದೇಶದ ಜನರು ಉದ್ಯೋಗ, ಸುರಕ್ಷಿತ ನೆಲೆಯನ್ನು ಅರಸಿ ಒಇಸಿಡಿ ದೇಶಗಳತ್ತ ವಲಸೆ ಹೋಗಿದ್ದಾರೆ.

2023ರಲ್ಲೂ ವಿಶ್ವದ ಹಲವೆಡೆ ಇಂಥದ್ದೇ ಪರಿಸ್ಥಿತಿ ಇದೆ. 2023ರ ಆರಂಭದಿಂದಲೇ ವಿಶ್ವದ ಎಲ್ಲಾ ದೇಶಗಳು ಆರ್ಥಿಕ ಹಿಂಜರಿತವನ್ನು ಎದುರಿಸುತ್ತಿವೆ. ಉಕ್ರೇನ್-ರಷ್ಯಾದ ಯುದ್ಧ ಮುಂದುವರೆದಿದೆ. ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ತೀವ್ರ ಬರ ಎದುರಾಗಿದೆ. ಇವು ಉದ್ಯೋಗ ಮತ್ತು ನೆಲೆ ಅರಸಿಕೊಂಡು ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗಲು ಕಾರಣವಾಗಲಿದೆ ಎಂದು ವರದಿಯಲ್ಲಿ ಅಂದಾಜಿಸಲಾಗಿದೆ. ಇನ್ನೊಂದೆಡೆ ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ಅಪ್ರಚೋದಿತ ದಾಳಿಗೆ ಪ್ರತೀಕಾರವಾಗಿ ಇಸ್ರೇಲ್ ಯುದ್ಧ ಘೋಷಿಸಿದೆ. ಪರಿಣಾಮವಾಗಿ ಪ್ಯಾಲೆಸ್ಟೀನ್‌ನ ಗಾಜಾಪಟ್ಟಿಯಲ್ಲಿನ 10 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಜತೆಗೆ ಯುದ್ಧವು ಈಗ ಲೆಬನಾನ್‌ಗೂ ವಿಸ್ತರಿಸಿದೆ. ಇವೆಲ್ಲವೂ ನಿರಾಶ್ರಿತರ ಮತ್ತು ಯುದ್ಧಪೀಡಿತರ ವಲಸೆಯನ್ನು ಹೆಚ್ಚಿಸಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಅಮೆರಿಕವೇ ಅಚ್ಚುಮೆಚ್ಚು

ಭಾರತೀಯರು ಅಮೆರಿಕದ ಪೌರತ್ವ ಪಡೆಯಲು ಬಯಸುತ್ತಾರೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. 2021ರಲ್ಲಿ ಒಇಸಿಡಿ ದೇಶಗಳಲ್ಲಿ ಪೌರತ್ವ ಪಡೆದ ಒಟ್ಟು ಭಾರತೀಯರಲ್ಲಿ ಮೂರನೇ ಎರಡಕ್ಕಿಂತಲೂ ಹೆಚ್ಚು ಮಂದಿ, ಅಮೆರಿಕದ ಪೌರತ್ವ ಪಡೆದಿದ್ದಾರೆ. ಹಲವು ವರ್ಷಗಳಿಂದ ಭಾರತೀಯರಿಗೆ ಹೆಚ್ಚು ಪೌರತ್ವ ನೀಡುತ್ತಿರುವ ದೇಶಗಳಲ್ಲಿ ಅಮೆರಿಕವು ಮೊದಲ ಸ್ಥಾನವನ್ನು ಕಾಯ್ದುಕೊಂಡೇ ಬಂದಿದೆ. ಅಮೆರಿಕದ ನಂತರ ಭಾರತೀಯರಿಗೆ ಅತಿಹೆಚ್ಚು ಪೌರತ್ವ ನೀಡುತ್ತಿರುವ ದೇಶ ಆಸ್ಟ್ರೇಲಿಯಾ. 2021ರಲ್ಲಿ 24,000 ಭಾರತೀಯರು ಆಸ್ಟ್ರೇಲಿಯಾದ ಪೌರತ್ವ ಪಡೆದಿದ್ದಾರೆ. ಈ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವುದು ಕೆನಡಾ. 2021ರಲ್ಲಿ 21,000 ಭಾರತೀಯರು ಕೆನಡಾದ ಪೌರತ್ವ ಪಡೆದಿದ್ದಾರೆ. 2022ರಲ್ಲೂ ಗಣನೀಯ ಸಂಖ್ಯೆಯಲ್ಲಿ ಭಾರತೀಯರು ಕೆನಡಾದ ಪೌರತ್ವ ಪಡೆದಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. ಆದರೆ ನಿಖರ ಅಂಕಿ-ಅಂಶವನ್ನು ನೀಡಿಲ್ಲ. ಆದರೆ ಈಗ ಭಾರತ ಮತ್ತು ಕೆನಡಾದ ಮಧ್ಯೆ ರಾಜತಾಂತ್ರಿಕ ಬಿಕ್ಕಟ್ಟು ಉಲ್ಬಣಗೊಂಡಿದೆ. ಈ ಬಿಕ್ಕಟ್ಟು ಭಾರತೀಯರಿಗೆ ಕೆನಡಾದ ಪೌರತ್ವ ದೊರೆಯುವಲ್ಲಿ ತೊಡಕಾಗಬಹುದು ಎಂದು ಅಂದಾಜಿಸಲಾಗಿದೆ.



ವಿದೇಶಗಳಲ್ಲಿ ಆಶ್ರಯ ಮತ್ತು ರಕ್ಷಣೆ ಕೋರಿದ 55,000 ಭಾರತೀಯರು

2022ರಲ್ಲಿ ಒಇಸಿಡಿ ದೇಶಗಳಲ್ಲಿ ಆಶ್ರಯ ಮತ್ತ ರಕ್ಷಣೆ ಕೋರಿ 21 ಲಕ್ಷಕ್ಕೂ ಹೆಚ್ಚು ಜನರು ಅರ್ಜಿ ಸಲ್ಲಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. ವಿಶ್ವ ಸಂಸ್ಥೆ, ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಸಮಿತಿ ಮತ್ತು ಒಇಸಿಡಿ ದೇಶಗಳ ವಲಸೆ ನೀಡಿದ ದತ್ತಾಂಶಗಳನ್ನು ಆಧಾರವಾಗಿ ಇರಿಸಿಕೊಂಡು ಈ ವರದಿಯನ್ನು ಸಿದ್ದಪಡಿಸಲಾಗಿದೆ.

ವಿದೇಶಗಳಲ್ಲಿ ಪೌರತ್ವ ಪಡೆಯುವುದಕ್ಕೂ ಮತ್ತು ಈ ರೀತಿಯ ಆಶ್ರಯ ಪಡೆಯುವುದಕ್ಕೂ ಬಹಳ ವ್ಯತ್ಯಾಸವಿದೆ. ಯುದ್ಧ ಮತ್ತು ಸಂಘರ್ಷಪೀಡಿತ, ಆರ್ಥಿಕ ಬಿಕ್ಕಟ್ಟಿನಲ್ಲಿ ಇರುವ ದೇಶಗಳ ಪ್ರಜೆಗಳು ಸಿರಿವಂತ ದೇಶಗಳಲ್ಲಿ ಆಶ್ರಯ ಮತ್ತು ರಕ್ಷಣೆ ಕೋರುವುದು ಸಾಮಾನ್ಯ. ಆದರೆ, 55,000ಕ್ಕೂ ಹೆಚ್ಚು ಭಾರತೀಯರು ವಿದೇಶಗಳಲ್ಲಿ ಆಶ್ರಯ ಮತ್ತು ರಕ್ಷಣೆ ಕೋರಿದ್ದರ ಬಗ್ಗೆ ಈ ವರದಿಯಲ್ಲಿ ಆಶ್ಚರ್ಯ ವ್ಯಕ್ತಪಡಿಸಲಾಗಿದೆ.

2021ರಲ್ಲಿ ಇಂತಹ ಅರ್ಜಿ ಸಲ್ಲಿಸಿದ್ದ ಭಾರತೀಯರ ಸಂಖ್ಯೆ 11,197ರಷ್ಟು ಇತ್ತು. ಆದರೆ 2022ರಲ್ಲಿ ಆ ಸಂಖ್ಯೆ 55,541ಕ್ಕೆ ಏರಿಕೆಯಾಗಿದೆ. ಅಂತಹ ಅರ್ಜಿದಾರರ ಸಂಖ್ಯೆಯಲ್ಲಿ ನಾಲ್ಕುಪಟ್ಟು ಏರಿಕೆಯಾಗಿದೆ. ಈ ರೀತಿ ಆಶ್ರಯ ಕೋರಿದ ಭಾರತೀಯರ ಸಂಖ್ಯೆಯಲ್ಲಿ ದಿಢೀರ್ ಎಂದು ಭಾರಿ ಪ್ರಮಾಣದ ಏರಿಕೆ ಕಾಣಲು ಕಾರಣವೇನು ಎಂಬುದನ್ನು ವರದಿಯಲ್ಲಿ ವಿವರಿಸಿಲ್ಲ. ಜತೆಗೆ ಯಾವ ಅಂಶದ ಆಧಾರದಲ್ಲಿ ಭಾರತೀಯರು ರಕ್ಷಣೆ ಮತ್ತು ಆಶ್ರಯ ಕೋರಿದ್ದಾರೆ, ಯಾವ ವರ್ಗ ಮತ್ತು ಸಮುದಾಯಕ್ಕೆ ಸೇರಿದ ಜನ ಈ ರೀತಿಯ ಅರ್ಜಿ ಸಲ್ಲಿಸಿದ್ದಾರೆ ಎಂಬ ಮಾಹಿತಿ ಲಭ್ಯವಿಲ್ಲ.



ಭಾರತೀಯರು ಪೌರತ್ವ ಪಡೆಯಲು ಬಯಸುವ ವಿದೇಶಗಳಲ್ಲಿ ಮೊದಲ ಸ್ಥಾನ ಅಮೆರಿಕದ್ದು. ಆದರೆ, ಆಶ್ರಯ ಮತ್ತು ರಕ್ಷಣೆ ಕೋರಿ ಒಬ್ಬ ಭಾರತೀಯನೂ ಅಮೆರಿಕಕ್ಕೆ ಅರ್ಜಿ ಸಲ್ಲಿಸಿಲ್ಲ. ಬದಲಿಗೆ ಆಶ್ರಯ ಮತ್ತು ರಕ್ಷಣೆ ಕೋರಿ ಭಾರತೀಯರಿಂದ ಹೆಚ್ಚು ಅರ್ಜಿ ಸಲ್ಲಿಕೆಯಾದ ದೇಶ ಆಸ್ಟ್ರೇಲಿಯಾ.

ಯಾವ ದೇಶಗಳಿಂದ ಎಷ್ಟು ಅರ್ಜಿ...



ಆಧಾರ: ಒಇಸಿಡಿ ಜಾಗತಿಕ ವಲಸೆ ಮುನ್ನೋಟ ವರದಿ–2023 ಪ್ರಜಾವಾಣಿ ಗ್ರಾಫಿಕ್ಸ್: ಶಶಿಕಿರಣ್ ದೇಸಾಯಿ ಬಿ.

'ಕೆರೆಬೇಟೆ'ಯಲ್ಲಿ ಗೌರಿಶಂಕರ್

ಈ ಹಿಂದೆ 'ಜೋಕಾಲಿ' ಮತ್ತು 'ರಾಜಹಂಸ' ಸಿನಿಮಾಗಳಲ್ಲಿ ನಾಯಕನಾಗಿದ್ದ ಗೌರಿ ಶಂಕರ್ 'ಕೆರೆಬೇಟೆ' ಚಿತ್ರದ ಮೂಲಕ ಮತ್ತೆ ಸ್ಯಾಂಡಲ್‌ವುಡ್‌ನಲ್ಲಿ ಸಕ್ರಿಯರಾಗಿದ್ದು, ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಬಿಡುಗಡೆಗೊಂಡಿದೆ. ಮಲೆನಾಡಿನ ಮೀನುಗಾರಿಕೆ ಕಥೆಯನ್ನು ಹೊಂದಿರುವ ಚಿತ್ರಕ್ಕೆ 10 ವರ್ಷಗಳಿಂದ ಚಿತ್ರರಂಗದಲ್ಲಿ ಸಹ ನಿರ್ದೇಶಕರಾಗಿರುವ ರಾಜ್ ಗುರು ಆ್ಯಕ್ಷನ್ ಕಟ್ ಹೇಳಿದ್ದಾರೆ.

ಜೈ ಶಂಕರ್ ಪಟೇಲ್ ಮತ್ತು ಗೌರಿ ಶಂಕರ್ 'ಜನಮನ ಸಿನಿಮಾ' ಬ್ಯಾನರ್ ಮೂಲಕ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಅಪ್ಪಟ ಮಲೆನಾಡ ಸೊಗಡಿನ ಕಥೆ. ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಮುಂದಿನ ವರ್ಷ ಚಿತ್ರ ತೆರೆಗೆ ಬರಲಿದೆ. ಸಿಗಂದೂರು ಮತ್ತು ಸೊರಬ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ' ಎನ್ನುತ್ತಾರೆ ಗೌರಿಶಂಕರ್.

ಗಗನ್ ಬಡೇರಿಯ ಸಂಗೀತ, ಕೀರ್ತನ್ ಪೂಜಾರಿ ಛಾಯಾಗ್ರಹಣ ಚಿತ್ರಕ್ಕಿದೆ.

ಮೆಲ್ಬರ್ನ್ ಚಿತ್ರೋತ್ಸವದಲ್ಲಿ ಚಿಣ್ಣರ ಚಂದ್ರ

ಚಿತ್ರ ನಿರ್ದೇಶಕ, ಸಾಹಿತಿ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಚಿಣ್ಣರ ಚಂದ್ರ' ಚಿತ್ರ ಮೆಲ್ಬರ್ನ್ ಚಿತ್ರೋತ್ಸವದ ಸ್ಪರ್ಧಾ ವಿಭಾಗದಲ್ಲಿ ಪ್ರವೇಶಪಡೆದು ಅಂತಿಮ ಹಂತಕ್ಕೆ ಆಯ್ಕೆಯಾಗಿದೆ.

ಬರಗೂರು ಅವರ ಮೊಮ್ಮಗ ಆಕಾಂಕ್ಷ ಬರಗೂರು ಈ ಚಿತ್ರದ ಮೂಲಕ ಬೆಳ್ಳಿ ತೆರೆಯಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದಾನೆ. ಇದು ಬರಗೂರು ಅವರದೇ ರಚನೆಯ 'ಅಡಗೂಲಜ್ಜಿ' ಕಾದಂಬರಿ ಆಧರಿತ ಚಿತ್ರ. ಆಕಾಂಕ್ಷ ಜೊತೆ ಬಾಲನಟರಾದ ಈಶಾನ್ ಪಾಟೀಲ್, ನಿಕ್ಷೇಪ್, ಅಭಿನವ್ ನಾಗ್ ನಟಿಸಿದ್ದಾರೆ. ಸುಂದರರಾಜ್, ಸ್ಪರ್ಶ ರೇಖಾ ಕೂಡ ತಾರಾಬಳಗದಲ್ಲಿದ್ದಾರೆ. ಆಕಾಂಕ್ಷ ಈ ಹಿಂದೆ 'ಬಯಲಾಟದ ಭೀಮಣ್ಣ', 'ತಾಯಿ ಕಸ್ತೂರ್ ಗಾಂಧಿ' ಚಿತ್ರಗಳಲ್ಲಿ ನಟಿಸಿದ್ದ.

''ಈ ಚಿತ್ರವು ಮಕ್ಕಳಿಗೆ ಅಗತ್ಯವಾದ ಶಿಕ್ಷಣ, ಕ್ರೀಡೆ ಮುಂತಾದ ಆಶಯಗಳ ಜತೆಗೆ ಸಮಾನತೆ ಮತ್ತು ಸೌಹಾರ್ದ ಸಂದೇಶ ನೀಡುತ್ತದೆ. 'ಅಡಗೂಲಜ್ಜಿ' ಮೂಲಕ ಮಕ್ಕಳಿಗೆ ಜನಪದ ಕಥೆಗಳ ಪರಿಚಯ ಮಾಡಿಕೊಡಲಾಗಿದೆ'' ಎಂದಿದ್ದಾರೆ ಬರಗೂರು. ಜಿಗಣಿ ರಾಜಶೇಖರ್ ಚಿತ್ರದ ನಿರ್ಮಾಪಕರು. ನಾಗರಾಜ್ ಆದವಾನಿ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ ಚಿತ್ರಕ್ಕಿದೆ.

ರಾಧಾ ರಾಮಚಂದ್ರ, ಆಕಾಂಕ್ಷ ಬರಗೂರು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಇಸ್ರೇಲ್‌ನಲ್ಲಿ 40 ಪುಟ್ಟ ಮಕ್ಕಳ ಶಿರಚ್ಛೇದ ಮಾಡಿದ ಹಮಾಸ್ ಉಗ್ರರು. ದಕ್ಷಿಣ ಇಸ್ರೇಲ್‌ನ ಕ್ಫರ್ ಅಜಾದಲ್ಲಿ ಹಮಾಸ್‌ನಿಂದ ಕನಿಷ್ಠ 40 ಶಿಶುಗಳನ್ನು ಹತ್ಯೆ ಮಾಡಲಾಗಿದೆ. ಶಿರಚ್ಛೇದ!!!. ಈ ರಾಕ್ಷಸರ ದೈತ್ಯಾಕಾರದ ದುಷ್ಟ ಕೃತ್ಯಕ್ಕೆ ನನ್ನ ಬಳಿ ಪದಗಳಿಲ್ಲ. ಇಂಥವರಿಗೆ ನಮ್ಮ ಕಾಂಗ್ರೆಸ್ ಬೆಂಬಲ ಘೋಷಿಸಿದೆ' ಎಂಬ ಬರಹ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದೇ ವಿವರ ಸುದ್ದಿಗಳೂ ಭಾರತದ ಪ್ರಮುಖ ಸುದ್ದಿ ಜಾಲತಾಣಗಳಲ್ಲಿ ಪ್ರಕಟವಾಗಿವೆ. ಕೆಲವು ಪತ್ರಿಕೆಗಳಲ್ಲೂ ಇಂಥದ್ದೇ ಸುದ್ದಿ ಪ್ರಕಟವಾಗಿದೆ. ಆದರೆ ಇದು ತಿರುಚಲಾದ ಮಾಹಿತಿ.

ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೆತನ್ಯಾಹು, ಹಮಾಸ್ ಉಗ್ರರು 40 ಶಿಶುಗಳ ಶಿರಚ್ಛೇಧ ಮಾಡಿದ್ದಾರೆ ಎಂದು ಅಕ್ಟೋಬರ್ 10ರಂದು ಹೇಳಿದ್ದರು. ಅಮೆರಿಕದ ಅಧ್ಯಕ್ಷ ಜೋ ಬೈಡನ್ ಸಹ ಇದನ್ನು ದೃಢಪಡಿಸಿದ್ದಾರೆ ಎಂದು ಸಿಎನ್‌ಎನ್, ಇಸ್ರೇಲ್ ಟೈಮ್ಸ್ ಸೇರಿ ವಿಶ್ವದ ಹಲವು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ ಅಕ್ಟೋಬರ್ 12ರಂದು ಈ ಬಗ್ಗೆ ಸ್ಪಷ್ಟನೆ ನೀಡಿದ್ದ ಶ್ವೇತಭವನವು, 'ಹಮಾಸ್ ಉಗ್ರರು 40 ಶಿಶುಗಳ ಶಿರಚ್ಛೇದ ಮಾಡಿದ್ದಾರೆ ಎಂದು ನಮ್ಮ ಅಧ್ಯಕ್ಷರು ಹೇಳಿಲ್ಲ. ಅಂತಹ ವರದಿಯನ್ನು ನೋಡಿದ್ದೇನೆ ಎಂದಷ್ಟೇ ಹೇಳಿದ್ದರು' ಎಂದು ಪ್ರಕಟಣೆ ಹೊರಡಿಸಿತು. ಇಸ್ರೇಲ್ ಸರ್ಕಾರವೂ ಈ ಬಗ್ಗೆ ಅಕ್ಟೋಬರ್ 13ರಂದು ಮಾಹಿತಿ ನೀಡಿ, ಹಮಾಸ್ ಉಗ್ರರು 40 ಶಿಶುಗಳ ಶಿರಚ್ಛೇದ ಮಾಡಿದ್ದಾರೆ ಎಂಬ ಸುದ್ದಿಯನ್ನು ದೃಢಪಡಿಸಲು ಸಾಧ್ಯವಿಲ್ಲ ಎಂದು ಹೇಳಿತ್ತು. ಇಸ್ರೇಲ್ ಸೇನೆ ಸಹ ಈ ಸುದ್ದಿಯನ್ನು ದೃಢಪಡಿಸಿಲ್ಲ. ಇಂತಹ ಸುದ್ದಿಯನ್ನು ಇಸ್ರೇಲ್‌ನ ಯುಟ್ಯೂಬ್ ಸುದ್ದಿವಾಹಿನಿಯೊಂದು ಮೊದಲು ಪ್ರಸಾರ ಮಾಡಿತ್ತು. ಆ ಸುದ್ದಿಗೆ ಯಾವುದೇ ಆಧಾರ, ಚಿತ್ರದ ಪುರಾವೆ ಇರಲಿಲ್ಲ. ಅದನ್ನೇ ಬೇರೆಲ್ಲಾ ಮಾಧ್ಯಮಗಳು ಪ್ರಕಟಿಸಿದವು. ಆದರೆ ಇದು ಸುಳ್ಳು ಸುದ್ದಿ ಎಂದು ಎನ್‌ಬಿಸಿ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಅಕ್ಟೋಬರ್ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ದ್ವಾದಶಿ ಗಂ. 09-45 ನಕ್ಷತ್ರ: ಪೂರ್ವಭಾದ್ರ ಗಂ. 11-27 ಯೋಗ: ಧ್ರುವ ಗಂ 08-50 ನಂತರ ವ್ಯಾಘಾತ ಗಂ. 29-22 ಕರಣ: ಬಾಲವ ಗಂ. 09-45, ತುಲಾ ಮಾಸದ 09 ನೇ ದಿನ, ಮಳೆನಕ್ಷತ್ರ: ಸ್ವಾತಿ 1, ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-26 ಸೂರ್ಯಾಸ್ತ : 06-03
ಮುಸ್ಲಿಂ ದಿನಾಂಕ : 10 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 11, 2

ಮೇಷ: ನೀವು ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿಗೆ ಕಾರಣವಾಗಲಿದೆ. ಮೇಧಾವಿಗಳೊಂದಿಗಿನ ಚರ್ಚೆಯಿಂದಾಗಿ ಅರಿವು ಹೆಚ್ಚಾಗಲಿದೆ. ಅಧಿಕಾರಿಗಳಿಗೆ ನಿಮ್ಮ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ. ಶುಭವಾಗುವುದು.

ವೃಷಭ: ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕವಾಗಬೇಕಾದ ಅವಶ್ಯಕತೆ ಇಲ್ಲ. ತೋಟದ ಕೆಲಸ ಮಾಡಬೇಕಾದ ಸಂದರ್ಭದಲ್ಲಿ ವಿಷಜಂತುಗಳು ಅಥವಾ ಕಾಡುಪ್ರಾಣಿಗಳಿಂದ ತೊಂದರೆ ಆಗಬಹುದು.

ಮಿಥುನ: ಸಹೋದ್ಯೋಗಿಗಳ ಅನಗತ್ಯ ಮಾತಿನಿಂದ ಭಿನ್ನಾಭಿಪ್ರಾಯ ಸೃಷ್ಟಿಯಾಗುತ್ತದೆ. ಮಗನ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಪ್ರಗತಿ. ನಿಮ್ಮ ಮನೋಭಾವಕ್ಕೆ ಕುಟುಂಬ ವರ್ಗದವರು ಸಕಾರಾತ್ಮಕ ಸಹಾಯ ಕಲ್ಪಿಸುತ್ತಾರೆ.

ಕರ್ಕಾಟಕ: ಇಂದು ಅತಿ ಅವಸರ ಮತ್ತು ಅತಿ ಉದ್ವೇಗ ಇವೆರಡು ನಿಮ್ಮನ್ನು ತಲೆ ತಗ್ಗಿಸುವಂತೆ ಮಾಡುತ್ತದೆ. ಈ ದಿನ ಎಂಥ ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮವಾದ ವಿಚಾರ.

ಸಿಂಹ: ಹೆಣ್ಣುಮಕ್ಕಳಿಗೆ ತಂದೆಯವರಿಂದ ವಾಹನ ಅಥವಾ ವಸ್ತ್ರಾಭರಣ ಪ್ರಾಪ್ತಿಯಾಗಲಿದೆ. ಇಂದು ನಿಮ್ಮ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಸಹೋದರರೊಂದಿಗೆ ಕಾಲ ಕಳೆಯುವಿರಿ.

ಕನ್ಯಾ: ಕಾರ್ಯ ನಿಮಿತ್ತವಾಗಿ ಅತ್ತೆ-ಸೊಸೆ ನಡುವೆ ಭಿನ್ನಾಭಿಪ್ರಾಯ ಬಂದರೂ ಇಬ್ಬರೂ ಸಮಾಧಾನವನ್ನು ಕಾಪಾಡಿಕೊಳ್ಳಿ. ಇತರರನ್ನು ಮಾತಿನ ಮೂಲಕ ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಅದನ್ನು ಈ ದಿನ ಬಳಸಿಕೊಳ್ಳಿ.

ತುಲಾ: ವ್ಯವಹಾರದಲ್ಲಿ ನುರಿತವರ ಸಲಹೆ ಸೂಚನೆಗಳನ್ನು ಅಳವಡಿಸಿಕೊಳ್ಳುವುದು ಉತ್ತಮ. ಕೇವಲ ನಿಮ್ಮ ಗುರಿ ಮುಟ್ಟುವ ಬಗ್ಗೆ ನಿಮ್ಮ ಶ್ರಮವಿರಲಿ. ಕುಶಲ ಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯವಿರುವುದು.

ವೃಶ್ಚಿಕ: ಸ್ನೇಹಿತರಿಗೆ ಯಾವುದೇ ರೀತಿಯ ವ್ಯಾವಹಾರಿಕ ಸಲಹೆ ಕೊಡುವುದು ಸರಿಯಲ್ಲ. ಹಂತ ಹಂತವಾಗಿ ಕುಟುಂಬದಲ್ಲಿ ನೆಮ್ಮದಿ ಕಾಣುವಿರಿ. ರಸ ಪದಾರ್ಥಗಳ ವ್ಯಾಪಾರ ವ್ಯವಹಾರದವರಿಗೆ ಅನುಕೂಲಕರವಾದ ದಿನ.

ಧನು: ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ಗುಪ್ತವಾದ ಮಾಹಿತಿಯು ತಿಳಿದು ಅಧ್ಯಯನಕ್ಕೆ ಉಪಯೋಗವಾಗಲಿದೆ. ಮಾನಸಿಕ ಸ್ಥಿತಿ ಏರುಪೇರಾದ ಸಮಯದಲ್ಲಿ ಹಿರಿಯರ ಸಲಹೆ ಸಮಾಧಾನ ತರಲಿದೆ.

ಮಕರ: ಆಕಸ್ಮಿಕ ಪ್ರಯಾಣದಿಂದ ಆರೋಗ್ಯದಲ್ಲಿ ಏರುಪೇರಾದರೂ ಆರ್ಥಿಕ ಬೆಳವಣಿಗೆ ಖಂಡಿತ ಸಾಧ್ಯವಿದೆ. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ದಿನ ನಿತ್ಯದ ಔಷಧ ಸೇವನೆಯನ್ನು ಮರೆಯದಿರಿ.

ಕುಂಭ: ಮುಂದಾಲೋಚನೆ ಇಲ್ಲದೇ ಯಾವುದೇ ಭರವಸೆ ನೀಡಬೇಡಿ, ಏಕೆಂದರೆ ಈ ದಿನ ಆಡಿದ ಮಾತನ್ನು ಉಳಿಸಿಕೊಳ್ಳುವುದು ಕಷ್ಟವಾಗಲಿದೆ. ಪರಿಶ್ರಮದ ಜೊತೆ ಅಧಿಕ ಸಮಯವನ್ನು ವೃತ್ತಿಯ ಕೆಲಸಕ್ಕೆ ಮೀಸಲಿಡಿ.

ಮೀನ: ರಾಜಕೀಯ ವ್ಯಕ್ತಿಗಳಿಗೆ ಅಕ್ಕ-ಪಕ್ಕದವರ ಕುತಂತ್ರದಿಂದಾಗಿ ತೊಂದರೆಗಳು ಉಂಟಾಗಬಹುದು. ಕೌಟುಂಬಿಕ ಸಮಸ್ಯೆಗಳಿಗೆ ಸಿಲುಕದಂತೆ ಜಾಗ್ರತೆ ವಹಿಸಿ. ನಿಮ್ಮಲ್ಲಿರುವ ಆಲಸ್ಯತನವನ್ನು ದೂರಮಾಡಿ.

ನುಡಿ ಬೆಳಗು

ಬದುಕಿಗೆ ಕೃತಜ್ಞರಾಗುವ ಬಗೆ...

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದೂರಲ್ಲಿ ಒಬ್ಬ ರಾಜನಿರುತ್ತಾನೆ. ಒಮ್ಮೆ ಆತನಿಗೆಂದು ಯಾರೋ ವಿಶೇಷವಾದ ಹಣ್ಣೊಂದನ್ನು ತಂದುಕೊಡುತ್ತಾರೆ. ಆತ ತನ್ನ ಅತ್ಯಾಪ್ತನಾದ ಮಂತ್ರಿಗೆ ಈ ಅತ್ಯಪರೂಪದ ಹಣ್ಣನ್ನು ಕೊಡುತ್ತಾನೆ. ಅದನ್ನು ಕತ್ತರಿಸಿ ಸಣ್ಣ ಚೂರೊಂದನ್ನು ತಿಂದ ಮಂತ್ರಿ ಇಷ್ಟು ರುಚಿಯಾದ ಹಣ್ಣನ್ನು ತಾನು ಎಂದಿಗೂ ತಿಂದೇ ಇರಲಿಲ್ಲವೆಂದೂ, ಅಷ್ಟೇ ಏಕೆ ನೋಡಿಯೇ ಇರಲಿಲ್ಲವೆಂದೂ ಹೇಳುತ್ತಾನೆ. ಈ ಮಾತನ್ನು ಕೇಳಿ ರಾಜನ ಬಾಯಲ್ಲಿ ನೀರೂರುತ್ತದೆ. ತನಗೂ ಒಂದು ಚೂರನ್ನು ಕತ್ತರಿಸಿ ಕೊಡುವಂತೆ ಮಂತ್ರಿಗೆ ಹೇಳುತ್ತಾನೆ. ಆದರೆ ಮಂತ್ರಿ ಹಿಂಜರಿಯುತ್ತಾನೆ. ರಾಜನಾದ ತನಗೇ ಒಂದು ಚೂರು ಕೊಡಲು ಈತ ಇಷ್ಟು ಯೋಚನೆ ಮಾಡು ತ್ತಿರಬೇಕಾದರೆ ಹಣ್ಣು ಎಷ್ಟು ರುಚಿಯಿರಬಹುದೆಂದು ಯೋಚಿಸಿದ ರಾಜ ಮತ್ತಷ್ಟು ಒತ್ತಾಯಿಸುತ್ತಾನೆ. ಬಹಳ ಒತ್ತಾಯ ಮಾಡಿದ ಮೇಲೆ ಮಂತ್ರಿ ಹಣ್ಣಿನ ಚೂರೊಂದನ್ನು ನೀಡುತ್ತಾನೆ. ಆದರೆ ಅದನ್ನು ಬಾಯಿಗಿಟ್ಟ ತಕ್ಷಣ ಅದು ತುಂಬ ಕಹಿಯೆಂದು ಗೊತ್ತಾಗಿ ರಾಜ ಅದನ್ನು ಉಗುಳಿಬಿಡುತ್ತಾನೆ. 'ಇಷ್ಟು ಕಹಿಯಾದ ಹಣ್ಣನ್ನು ಹೇಗೆ ತಿಂದೆ, ಕಹಿ ಇದೆ ಎಂದು ಹೇಳಿದರೆ ಏನಾಗುತ್ತಿತ್ತು?' ಎಂದು ಕೇಳಿದ ರಾಜನಿಗೆ ಮಂತ್ರಿ ಉತ್ತರಿಸುತ್ತಾನೆ: 'ದೊರೆಯೇ, ಇದು ಸಿಹಿ ಕಹಿಯ ಪ್ರಶ್ನೆಯಲ್ಲ, ಹಣ್ಣು ಕಹಿ ಎಂದು ಹೇಳುವುದು ಅಂತಹ ದೊಡ್ಡ ಸಂಗತಿಯೂ ಅಲ್ಲ. ಆದರೆ ಇಷ್ಟು ವರ್ಷಗಳ ಕಾಲ ನೀವು ನನಗೆ ಎಷ್ಟೋ ಬೆಲೆಬಾಳುವ ಉಡುಗೊರೆಯನ್ನು ಕೊಟ್ಟಿದ್ದೀರಿ. ನಾನೂ ಸಂತೋಷದಿಂದ ಪಡೆದಿದ್ದೇನೆ. ಆ ಸಿಹಿ ಸಂಗತಿಗಳನ್ನು ಮರೆತು ಈ ಕ್ಷುಲ್ಲಕ ವಿಷಯದ ಬಗ್ಗೆ ಮಾತನಾಡುವುದು ನನಗೆ ಸರಿಯೆನಿಸಲಿಲ್ಲ, ಕ್ಷಮಿಸಿ'

ಇದು ಓಶೋ ತನ್ನ ಶಿಷ್ಯೆಯೊಬ್ಬಳಿಗೆ ಬರೆದ ಪತ್ರದಲ್ಲಿ ಇರುವ ಒಂದು ಕತೆ. ಬದುಕಿಗೆ ಕೃತಜ್ಞರಾಗಿರಲು ನೂರು ಸಕಾರಾತ್ಮಕ ಸಂಗತಿಗಳಿದ್ದರೂ ಒಂದು ಋಣಾತ್ಮಕ ವಿಷಯವನ್ನೇ ದೊಡ್ಡದಾಗಿಸುವುದು ತಪ್ಪು ಎಂಬುದು ಈ ಕಥೆಯ ನೀತಿ. ನಿಜ, ನಾವು ಈ ಸಮಾಜದಿಂದಾಗಲೀ, ಪೋಷಕರಿಂದಾಗಲೀ ಅಥವಾ ಆತ್ಮೀಯರಿಂದಾಗಲೀ ಬಹಳಷ್ಟು ಉಪಕಾರ ಪಡೆದಿರುತ್ತೇವೆ. ನಿಜ, ನಾವೇನೇ ಸಾಧನೆ ಮಾಡಿದ್ದರೂ ಅದರಲ್ಲಿ ನಮ್ಮ ಪ್ರಯತ್ನವೇ ಮುಖ್ಯ. ಆದರೆ ಅದಕ್ಕೆ ಸಮಾಜದ ಕೊಡುಗೆಯೂ ಇದೆ. ಬದುಕಿನಲ್ಲಿ ಒಳ್ಳೆಯ ಸಂಗತಿಗಳು ಘಟಿಸುತ್ತಿರುವಾಗ ಸಂಭ್ರಮಿಸುವ ನಾವು ಒಂದು ಸಂಕಟ ಬಂದೊಡನೇ ನಮಗೇ ಹೀಗೇಕಾಯಿತು ಎಂದು ಗೋಳಾಡುತ್ತೇವೆ. ಕಷ್ಟಸುಖಗಳೆರಡೂ ಬದುಕಿನಲ್ಲಿ ಅತ್ಯಂತ ಸಾಮಾನ್ಯ ಸಂಗತಿಗಳು ಎಂಬುದನ್ನು ಅರ್ಥ ಮಾಡಿಕೊಂಡು ಸಕಾರಾತ್ಮಕ ಸಂಗತಿಗಳಿಗೆ ಕೃತಜ್ಞರಾಗಿ ಋಣಾತ್ಮಕ ವಿಷಯಗಳನ್ನು ದಿಟ್ಟತನದಿಂದ ಎದುರಿಸುವುದು ಇಂದಿನ ತುರ್ತು.

ಪದಬಂಧ 5481

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಹುತಿಯಾಗುವ ಪ್ರಾಣಿ (4)
3.ದಡಿಯ ಹಿಡಿದಿರುವ ಬಿಡಿಗಾಸು (3)
4.ಬೆನ್ನೆಲುಬು ಇರುವ ಪ್ರಾಣಿ (4)
6.ಬಿರುಸಾದುದು ಕರದೊಳಗಿದೆ! (3)
7.ಯಾವ ಕಳಂಕವೂ ಇಲ್ಲದ್ದು (4)
8.ರತಿ ಪತಿಯಿಂದ ಉದಯಿಸಿದ ಆಸೆ (3)
9.ನಡುವೆ ದಾರ ಉಲ್ಟಾ ಹಿಡಿದು ಹೀಗೆ ಪೇಚಾಡು (4)
10.ಉತ್ತರದವರ ಮಂಚ (3)
12.ಕಾಲ ಸೂಚಕ ಯಂತ್ರ (4)
14.ಜೀರ್ಣಾಂಗ ಇಲ್ಲಿದೆ (3)
15.ನಿಯಮದಂತೆ ಕನ್ನಡಿಗ ಮಾಡಿಕೊಂಡ ಎಕ್ಸ್‌ಚೇಂಜ್! (4)

ಮೇಲಿಂದ ಕೆಳಕ್ಕೆ

1.ಬರದಲ್ಲಿಯೂ ತೋರುತ್ತಿರುವ ಡೌಲು (4)
2.ಶುನಕದ ಬಳಿ ಹಾರಿ ಬಂದ ಗಿಣಿ (2)
3.ಹತ್ತರ ಗುಂಪು (3)
5.ಕಲೆಸಿದ ಗೋಧಿ ಹಿಟ್ಟು (3)
7.ಆ ಮನೆ ಹತ್ತಿರವಿರುವ ಗಜ (2)
8.ಕಾದಾಡುತ್ತಲೇ ಪ್ರವೇಶಿಸಿದ ಅರಣ್ಯ (2)
9.ಹೂವಿನ ಹುಡಿಯಿದು (3)
10.ರಾಜ ನಡುವಿದ್ದಾಗಿನ ಸೋಲು (4)
11.ಟಾರ ರಸ್ತೆ ಹತ್ತಿರವಿರುವ ಮೋರಿ (3)
13.ವಿರಮಿಸುತ್ತಿದ್ದಾಗಲೇ ಉದಯಿಸಿದ ನೇಸರ (2)



5480ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಕಲನ 2.ಪ್ರಗತಿ
4.ಕಣಕ 6.ಉದರ
7.ನಾಮಕರಣ 10.ಕಲ್ಯಾಣ
11.ಶರಧಿ 13.ಗರುಡ
14.ತಪರಾಕು

ಮೇಲಿಂದ ಕೆಳಕ್ಕೆ:
1.ಸಂದೂಕ 2.ಪ್ರಚಾರ
3.ತಿಕ್ಕಲು 5.ಕವಿನಾ
6.ಉಪಕರಣ 8.ಣರಶ
9.ಉರಗ 10.ಕನ್ನಡ
12.ಧಿಮಾಕು

ಸುಡೊಕು 5867

		9			3		8	
	4			8				9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9	4	
	3		6		1		7	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5866 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು 523



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,281
ಇಂದಿನ ಅಂತ್ಯ	19,122
▼	159
ದಿನದ ಕನಿಷ್ಠ	19,074

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1570)
ಸೋಯಾ (ರಿಫೈನ್ಡ್)	₹905 (910)
ಸೂರ್ಯಕಾಂತಿ (ರಿಫೈನ್ಡ್)	₹905 (920)
ಪಾಮೋಲಿನ್	₹810 (815)

ವಿನಿಮಯ ದರ

$ ಡಾಲರ್	83.17
£ ಪೌಂಡ್	100.95
€ ಯುರೊ	88.04
¥ ಯೆನ್ (100ಕ್ಕೆ)	55

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8800-8800
ತಿಪಟೂರು	₹8000-9001
ತುರುವೇಕೆರೆ	₹8800-8800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹345-475
ದ್ವಿತಳಿ (ಬಿ.ವಿ)	₹339-588

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

ಆನ್‌ಲೈನ್ ಗೇಮ್: ಜಿಎಸ್‌ಟಿ ನೋಟಿಸ್

ನವದೆಹಲಿ (ಪಿಟಿಐ): ತೆರಿಗೆ ವಂಚನೆಗೆ ಸಂಬಂಧಿಸಿದಂತೆ ಈವರೆಗೆ ಆನ್‌ಲೈನ್ ಗೇಮಿಂಗ್ ಕಂಪನಿಗಳಿಗೆ ಒಟ್ಟು ₹1 ಲಕ್ಷ ಕೋಟಿ ಪಾವತಿಸುವಂತೆ ಜಿಎಸ್‌ಟಿ ಪ್ರಾಧಿಕಾರಗಳು ನೋಟಿಸ್ ನೀಡಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ತೆರಿಗೆ ವಂಚನೆಗೆ ಸಂಬಂಧಿಸಿದಂತೆ ₹40 ಸಾವಿರ ಕೋಟಿ ಪಾವತಿಸುವಂತೆ ನೋಟಿಸ್ ಬಂದಿರುವುದಾಗಿ ಡ್ರೀಮ್11 ಕಂಪನಿ ತಿಳಿಸಿದೆ. ಕ್ಯಾಸಿನೊ ನಡೆಸುವ ಡೆಲ್ಟಾ ಕಾರ್ಪ್ ಕಂಪನಿಗೆ ₹23 ಸಾವಿರ ಕೋಟಿ ಪಾವತಿಸುವಂತೆ ಜಿಎಸ್‌ಟಿ ನೋಟಿಸ್ ನೀಡಲಾಗಿದೆ.

ನೋಟಿಸ್ ವಿರುದ್ಧವಾಗಿ ಆನ್‌ಲೈನ್ ಗೇಮಿಂಗ್ ಕಂಪನಿಗಳು ಕೋರ್ಟ್ ಮೆಟ್ಟಿಲೇರಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗಾಯತ್ರಿ ಶೇಖರ್
ಜನನ: 17.03.1950 – ನಿಧನ: 26.10.2019
ಸದಾ ನಿಮ್ಮ ನೆನಪಿನಲ್ಲಿರುವ:
ಬಿ.ಹೆಚ್.ಚಂದ್ರಶೇಖರ್ ಮತ್ತು ಕುಟುಂಬವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಬಿ ಟಿ ಜಯಲಕ್ಷ್ಮಿ
(ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕಿನ ಸಂಸ್ಥಾಪಕರಾದ ದಿ|| ಶ್ರೀ ಬಿ.ಎಲ್ ಲಕ್ಕೇಗೌಡರ ಧರ್ಮಪತ್ನಿ)
ಇವರು ದಿನಾಂಕ 25.10.2023 ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಅವರ ಸ್ವಗೃಹ ನಂ.286, 36ನೇ ಅಡ್ಡ ರಸ್ತೆ, ಜಯನಗರ 7ನೇ ಬ್ಲಾಕ್, ಬೆಂಗಳೂರು–560082. ಇಲ್ಲಿ ಇಂದು ಬೆಳಿಗ್ಗೆ 8 ಗಂಟೆಯವರೆಗೂ ಇಡಲಾಗುವುದು. ತದನಂತರ ಮೃತರ ಅಂತ್ಯಸಂಸ್ಕಾರವನ್ನು ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಬೆಳಗವಾಡಿ ಗ್ರಾಮದ ತೋಟದ ಮನೆಯಲ್ಲಿ ಬೆಳಿಗ್ಗೆ 10 ಗಂಟೆಯ ನಂತರ ನೆರವೇರಿಸಲಾಗುವುದು.
ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ,
ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಜಯನಗರ, ಬೆಂಗಳೂರು–560011

ಶ್ರದ್ಧಾಂಜಲಿ



ಶ್ರೀ ಗುಂಡುರಾವ್ ಸುಬ್ಬಣ್ಣ
08.09.1926 - 24.10.2023
ಇವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ವಯೋಸಹಜ ಅನಾರೋಗ್ಯದಿಂದಾಗಿ ಇಹಲೋಕ ತ್ಯಜಿಸಿದ್ದಾರೆ. ಇವರು ಮೆಕ್ಯಾನಿಕಲ್ ಮತ್ತು ಕೆಮಿಕಲ್ ಇಂಜಿನಿಯರ್ ಜೋಡಿ ಪದವಿಧರರಾಗಿದ್ದರು ಮತ್ತು ಮುಂಬೈ ಮಹಾನಗರದ ಗೊರೆಗಾಂವ್ ವೆಸ್ಟ್ ಪ್ರದೇಶದಲ್ಲಿರುವ ನಿರ್ಲಾನ್ ಸಿಂಥೆಟಿಕ್ ಫೈಬರ್ಸ್ ಮತ್ತು ಕೆಮಿಕಲ್ಸ್ ಸಂಸ್ಥೆಯಲ್ಲಿ 46 ವರ್ಷಗಳ ಕಾಲ ತಮ್ಮ ಅಮೂಲ್ಯ ಸೇವೆ ಸಲ್ಲಿಸಿರುತ್ತಾರೆ.
ಇವರು ನಿವೃತ್ತಿಯ ಬಳಿಕ, ಪೇಜಾವರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಜಯನಗರ ಮತ್ತು ಮಾರತಹಳ್ಳಿಯಲ್ಲಿ ಸ್ಥಾಪಿಸಿರುವ ಎರಡು ಚಾರಿಟೇಬಲ್ ಆಸ್ಪತ್ರೆಗಳು ಸಾವಿರಾರು ಜನರಿಗೆ ಉಚಿತ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿವೆ. ಭಾರತದಾದ್ಯಂತ ಮತ್ತು ಅಮೇರಿಕಾದಲ್ಲಿ ನೆಲೆಸಿರುವ ಅಪಾರ ಬಂಧುಬಳಗವನ್ನು ಇವರು ಅಗಲಿದ್ದಾರೆ.
ಇಂತಿ ದುಃಖತಪ್ತರು : ಕುಟುಂಬದವರು, ಸ್ನೇಹಿತರು ಮತ್ತು ಬಂಧು ಬಳಗ

LOOKING TO BUILD, BUY OR SELL A PROPERTY
Please refer Classifieds on Sunday

2023–24ನೇ ಸಾಲಿನ ಹಿಂಗಾರು ಹಂಗಾಮು ಅವಧಿಗೆ ಸಂಪುಟ ಒಪ್ಪಿಗೆ

ರಸಗೊಬ್ಬರ ಸಬ್ಸಿಡಿಗೆ ₹22,303 ಕೋಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರತಿ ಕೆ.ಜಿಗೆ ನೀಡುವ ಸಹಾಯಧನ ಇಳಿಕೆ
- ಸಬ್ಸಿಡಿಯಿಂದ 12 ಕೋಟಿಗೂ ಅಧಿಕ ರೈತರಿಗೆ ಪ್ರಯೋಜನ: ಠಾಕೂರ್

ನವದೆಹಲಿ: 2023-24ನೇ ಸಾಲಿನ ಹಿಂಗಾರು ಹಂಗಾಮು ಅವಧಿಗೆ (ಅಕ್ಟೋಬರ್ 1ರಿಂದ ಮಾರ್ಚ್ 31) ಫಾಸ್ಫೇಟ್ ಹಾಗೂ ಪೊಟ್ಯಾಸಿಯಮ್ ಅಂಶವಿರುವ ರಸಗೊಬ್ಬರಗಳಿಗೆ ಪೋಷಕಾಂಶ ಆಧಾರಿತ ಸಬ್ಸಿಡಿಗಾಗಿ ₹22,303 ಕೋಟಿ ನೀಡಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರತಿ ಕೆ.ಜಿ. ಸಾರಜನಕಕ್ಕೆ ₹47.02, ರಂಜಕಕ್ಕೆ ₹20.82 ಮತ್ತು ಪೊಟ್ಯಾಸಿಯಮ್‌ಗೆ ₹2.38 ದರದಲ್ಲಿ ಸರ್ಕಾರ ಸಹಾಯಧನ ನೀಡಲಿದೆ. ಇದು ಮುಂಗಾರು ಹಾಗೂ ಕಳೆದ ವರ್ಷದ ಹಿಂಗಾರು ಹಂಗಾಮಿನಲ್ಲಿ ನೀಡಿರುವ ದರಕ್ಕಿಂತ ತೀವ್ರ ಕಡಿಮೆಯಾಗಿದೆ. 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ಬೆಲೆ ಇಳಿಕೆಯಾಗಿರುವುದರಿಂದ ಸಬ್ಸಿಡಿ ದರ ಕಡಿಮೆಯಾಗಿದೆ' ಎಂದು ಕೇಂದ್ರ ವಾರ್ತಾ ಸಚಿವ ಅನುರಾಗ್ ಠಾಕೂರ್ ಸ್ಪಷ್ಟಪಡಿಸಿದರು.

2023-24ರ ಮುಂಗಾರು ಹಂಗಾಮು ಅವಧಿಯಲ್ಲಿ ಪೋಷಕಾಂಶ ಆಧಾರಿತ ರಸಗೊಬ್ಬರ ಸಬ್ಸಿಡಿಗಾಗಿ ₹38,000 ಕೋಟಿ ನೀಡಲು ಕೇಂದ್ರ ಸಚಿವ ಸಂಪುಟವು ಮೇ ತಿಂಗಳಲ್ಲಿ ಅನುಮೋದನೆ ನೀಡಿತ್ತು. ಖಾರಿಫ್‌ನಲ್ಲಿ ಸಾರಜನಕಕ್ಕೆ ಕೆ.ಜಿ.ಗೆ ₹76 ಹಾಗೂ ರಂಜಕಕ್ಕೆ ₹41 ಸಬ್ಸಿಡಿ ನೀಡಲಾಗಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು, ಹಿಂಗಾರು ಋತುವಿನಲ್ಲಿ ಪೌಷ್ಟಿಕಾಂಶ ಆಧಾರಿತ ಸಬ್ಸಿಡಿ ದರಗಳನ್ನು ನಿಗದಿಪಡಿಸಲು ರಸಗೊಬ್ಬರ ಇಲಾಖೆಯ ಪ್ರಸ್ತಾವನೆಯನ್ನು ಅನುಮೋದಿಸಿತು. ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ ಅನುರಾಗ್ ಠಾಕೂರ್, 'ರೈತರಿಗೆ ಕೈಗೆಟುಕುವ ಬೆಲೆಯಲ್ಲಿ ರಸಗೊಬ್ಬರಗಳ ಸಮರ್ಪಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಬಿಜೆಪಿ ಸರ್ಕಾರ ಬದ್ಧವಾಗಿದೆ. ದೇಶದ 12 ಕೋಟಿಗೂ ಹೆಚ್ಚು ರೈತರು ಇದರಿಂದ ಪ್ರಯೋಜನ ಪಡೆಯಲಿದ್ದಾರೆ' ಎಂದು ಹೇಳಿದರು. ರೈತರಿಗೆ ಡಿಎಪಿಯನ್ನು ಹಳೆಯ ದರದಲ್ಲೇ (50 ಕೆ.ಜಿ.ಗೆ ₹1,350) ಒದಗಿಸಲಾಗುವುದು ಎಂದು ಅವರು ಹೇಳಿದರು.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ-ವೇಗವರ್ಧಿತ ನೀರಾವರಿ ಪ್ರಯೋಜನ ಕಾರ್ಯಕ್ರಮದಡಿ ಉತ್ತರಾಖಂಡ್‌ನ ಜಮ್ರಾಣಿ ಅಣೆಕಟ್ಟೆ ವಿವಿಧೋದ್ದೇಶ ಯೋಜನೆಯ ಸೇರ್ಪಡೆಗೆ ಸಂಪುಟ ಅನುಮೋದನೆ ನೀಡಿದೆ. ಅಂದಾಜು ₹2,584 ಕೋಟಿ ವೆಚ್ಚದ ಯೋಜನೆಯನ್ನು 2028ರ ಮಾರ್ಚ್ ಒಳಗೆ ಪೂರ್ಣಗೊಳಿಸಲು ಉತ್ತರಾಖಂಡಕ್ಕೆ ₹1,557 ಕೋಟಿ ನೆರವನ್ನು ಕೇಂದ್ರ ಸರ್ಕಾರ ನೀಡಲಿದೆ.

ನೈನಿತಾಲ್ ಜಿಲ್ಲೆಯಲ್ಲಿ ರಾಮ್ ಗಂಗಾ ನದಿಯ ಉಪನದಿಯಾದ ಗೋಲಾ ನದಿಗೆ ಅಡ್ಡಲಾಗಿ ಜಮ್ರಾಣಿ ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಟೆಕ್ ಮಹೀಂದ್ರ ಲಾಭ ಶೇ 61 ಇಳಿಕೆ

ನವದೆಹಲಿ (ಪಿಟಿಐ): ಟೆಕ್ ಮಹೀಂದ್ರ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 61ರಷ್ಟು ಇಳಿಕೆ ಕಂಡು ₹505 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಲಾಭವು ₹1,299 ಕೋಟಿಯಷ್ಟು ಇತ್ತು.

ಕಾರ್ಯಾಚರಣಾ ವರಮಾನ ಶೇ 2ರಷ್ಟು ಇಳಿಕೆ ಕಂಡು ₹12,864 ಕೋಟಿಗೆ ತಲುಪಿದೆ. ಹಿಂದಿನ ಅವಧಿಯಲ್ಲಿ ₹13,129 ಕೋಟಿಯಷ್ಟು ಇತ್ತು. ಸಂವಹನ, ಮಾಧ್ಯಮ ಮತ್ತು ಮನರಂಜನೆ ವಿಭಾಗಗಳಲ್ಲಿನ ವಹಿವಾಟು ಶೇ 11.5ರಷ್ಟು ಇಳಿಕೆ ಕಂಡಿದೆ. ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮಾ ವಹಿವಾಟು ಶೇ 6.3ರಷ್ಟು ಇಳಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ. ಒಟ್ಟು ಸಿಬ್ಬಂದಿ ಸಂಖ್ಯೆ 1.63 ಲಕ್ಷದಿಂದ 1.50 ಲಕ್ಷಕ್ಕೆ ಶೇ 81.ರಷ್ಟು ಇಳಿಕೆ ಕಂಡಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು; ಕರಗಿತು ಸಂಪತ್ತು

ಐದು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರಿಗೆ ₹14.60 ಲಕ್ಷ ಕೋಟಿ ನಷ್ಟ

ಮುಖ್ಯಾಂಶಗಳು
- ಸೆನ್ಸೆಕ್ಸ್‌ನಲ್ಲಿ ಇನ್ಫೊಸಿಸ್ ಷೇರು ಮೌಲ್ಯ ಶೇ 2.76ರಷ್ಟು ಗರಿಷ್ಠ ಇಳಿಕೆ
- ವಲಯವಾರು ಟೆಕ್ ಶೇ 1.39ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಐದು ದಿನಗಳಿಂದ ಕರಡಿ ಕುಣಿತ ನಡೆಯುತ್ತಿದೆ. ಇದರಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯದಲ್ಲಿ ₹14.60 ಲಕ್ಷ ಕೋಟಿಯಷ್ಟು ಕರಗಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವುದು ಮತ್ತು ಭಾರತದ ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವ ಕಾರಣಗಳಿಂದಾಗಿ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯುತ್ತಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಐದು ದಿನಗಳ ವಹಿವಾಟಿನಲ್ಲಿ 2,379 ಅಂಶಗಳಷ್ಟು (ಶೇ 3.58) ಕುಸಿತ ಕಂಡಿದೆ. ಇದರಿಂದಾಗಿ ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹14.60 ಲಕ್ಷ ಕೋಟಿಯಷ್ಟು ಕರಗಿದ್ದು, ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯವು ₹309.22 ಲಕ್ಷ ಕೋಟಿಗೆ ತಗ್ಗಿದೆ.

ಬುಧವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 523 ಅಂಶ ಇಳಿಕೆ ಕಂಡು 64,049 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 159 ಅಂಶ ಇಳಿಕೆ ಕಂಡು 19,122 ಅಂಶಗಳಿಗೆ ತಲುಪಿತು.

'ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ದೇಶದಲ್ಲಿ ಬ್ಯಾಂಕಿಂಗ್, ಐ.ಟಿ. ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾದವು. ಹೀಗಾಗಿ ಸತತ ಐದನೇ ವಹಿವಾಟು ಅವಧಿಯಲ್ಲಿಯೂ ಸೆನ್ಸೆಕ್ಸ್ ಇಳಿಕೆ ಕಾಣುವಂತಾಯಿತು' ಎಂದು ಕೋಟಕ್ ಸೆಕ್ಯುರಿಟಿಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಭಾರತದ ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಮಧ್ಯಪ್ರಾಚ್ಯ ಬಿಕ್ಕಟ್ಟು ಹೂಡಿಕೆದಾರರನ್ನು ಷೇರುಪೇಟೆಗಳಿಂದ ದೂರ ಉಳಿಯುವಂತೆ ಮಾಡುತ್ತಿವೆ ಎಂದಿದ್ದಾರೆ.

'ಈವರೆಗೆ ಪ್ರಕಟ ಆಗಿರುವ ಕಾರ್ಪೊರೇಟ್ ವಲಯದ ಸೆಪ್ಟೆಂಬರ್ ತ್ರೈಮಾಸಿಕದ ಫಲಿತಾಂಶವು ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಇದು ಮುಖ್ಯವಾಗಿ ಷೇರುಪೇಟೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಇನ್ನು, ಜಾಗತಿಕ ಮಂದಗತಿಯ ಆರ್ಥಿಕ ಬೆಳವಣಿಗೆ, ಹಣದುಬ್ಬರ ಮತ್ತು ಗರಿಷ್ಠ ಮಟ್ಟದ ಬಡ್ಡಿದರವು ಸಹ ಷೇರುಪೇಟೆ ಮೇಲೆ ಇನ್ನಷ್ಟು ಒತ್ತಡ ಉಂಟುಮಾಡಬಹುದು' ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

'ಉಳಿತಾಯ ಖಾತೆಗಳ ಮೇಲಿನ ಬಡ್ಡಿ ಹೆಚ್ಚಿಸಿ'

ಮುಂಬೈ (ರಾಯಿಟರ್ಸ್): ಗರಿಷ್ಠ ಬಡ್ಡಿದರದ ಪ್ರಯೋಜನವನ್ನು ಉಳಿತಾಯ ಖಾತೆಗಳಿಗೂ ವರ್ಗಾಯಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಎಲ್ಲ ಬ್ಯಾಂಕ್‌ಗಳಿಗೆ ತಾಕೀತು ಮಾಡಿರುವುದಾಗಿ ಮೂಲಗಳು ಹೇಳಿವೆ.

ಬ್ಯಾಂಕ್‌ಗಳು ಗರಿಷ್ಠ ಬಡ್ಡಿದರದ ಪ್ರಯೋಜನವನ್ನು ಉಳಿತಾಯ ಖಾತೆಗಳಿಗೂ ವರ್ಗಾಯಿಸಬೇಕು ಎಂದು ಆರ್‌ಬಿಐ ಬಯಸುತ್ತದೆ. ಆದರೆ, ಬ್ಯಾಂಕ್‌ಗಳು ಹಾಗೆ ಮಾಡದೇ ಲಾಭ ಮಾಡಿಕೊಳ್ಳುವುದರತ್ತ ಗಮನ ಹರಿಸುತ್ತಿವೆ ಎಂದು ಬ್ಯಾಂಕಿಂಗ್ ಮೂಲಗಳು ತಿಳಿಸಿವೆ. ಆದರೆ, ಈ ಕುರಿತು ಆರ್‌ಬಿಐ ಕಡೆಯಿಂದ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಭಾರತದಲ್ಲಿ ಉಳಿತಾಯ ಖಾತೆಗಳಿಗೆ ಅತ್ಯಂತ ಕಡಿಮೆ ಬಡ್ಡಿದರ ನೀಡಲಾಗುತ್ತಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಶೇ 2.70 ರಿಂದ ಶೇ 4ರವರೆಗೆ ಬಡ್ಡಿದರ ನೀಡುತ್ತಿವೆ. ಖಾಸಗಿ ವಲಯದ ಬ್ಯಾಂಕ್‌ಗಳು ಶೇ 3 ರಿಂದ ಶೇ 4.50ರವರೆಗಿನ ಬಡ್ಡಿದರ ನೀಡುತ್ತಿವೆ.

ಆರ್‌ಬಿಐ ರೆಪೊ ದರವನ್ನು ಶೇ 2.50ರಷ್ಟು ಹೆಚ್ಚಳ ಮಾಡಿದ್ದರಿಂದ ರೆಪೊ ದರವು ಶೇ 6.50ಕ್ಕೆ ಏರಿಕೆ ಕಂಡಿದೆ. ಹೀಗಾಗಿ ಇದರ ಪ್ರಯೋಜನವು ಎಲ್ಲರಿಗೂ ಸಿಗಬೇಕು ಎಂದು ಆರ್‌ಬಿಐ ಬಯಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬ್ಯಾಂಕ್‌ಗಳೊಂದಿಗೆ ಪ್ರತಿ ಬಾರಿ ಸಭೆ ನಡೆಸುವಾಗಲೂ ಉಳಿತಾಯ ಖಾತೆಗಳ ಮೇಲಿನ ಬಡ್ಡಿದರ ಹೆಚ್ಚಿಸುವಂತೆ ಆರ್‌ಬಿಐ ತಾಕೀತು ಮಾಡುತ್ತಿರುತ್ತದೆ ಎಂದು ಹೇಳಿವೆ.

ಕೋವಿಂದ್ ಸಮಿತಿ ಜತೆ ಕಾನೂನು ಆಯೋಗ ಚರ್ಚೆ

ನವದೆಹಲಿ (ಪಿಟಿಐ): 'ಒಂದು ದೇಶ, ಒಂದು ಚುನಾವಣೆ'ಯ ಕಾರ್ಯಸಾಧ್ಯತೆ ಬಗ್ಗೆ ಪರಿಶೀಲಿಸಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದಡಿ ರಚಿಸಿರುವ ಉನ್ನತಮಟ್ಟದ ಸಮಿತಿಯ ಜೊತೆ ಬುಧವಾರ ಕಾನೂನು ಆಯೋಗದ ಅಧ್ಯಕ್ಷ ಋತುರಾಜ್ ಅವಸ್ಥಿ ಹಾಗೂ ಸದಸ್ಯರು ಸುದೀರ್ಘವಾಗಿ ಚರ್ಚಿಸಿದರು.

ಲೋಕಸಭೆ, ರಾಜ್ಯ ವಿಧಾನಸಭೆ ಹಾಗೂ ಸ್ಥಳೀಯ ಸರ್ಕಾರಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯ ಮಂಡಿಸುವಂತೆ ಕಾನೂನು ಆಯೋಗಕ್ಕೆ, ಕೋವಿಂದ್ ಸಮಿತಿಯು ಕೋರಿತ್ತು.

ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಅಗತ್ಯ ತಿದ್ದುಪಡಿ ತರುವುದು ಹಾಗೂ ಮಾರ್ಗಸೂಚಿಗಳ ಬಗ್ಗೆ ಆಯೋಗವು ತನ್ನ ಅಭಿಪ್ರಾಯ ತಿಳಿಸಿತು. ಆದರೆ, ಈ ವಿಷಯಕ್ಕೆ ಸಂಬಂಧಿಸಿ ಮತ್ತಷ್ಟು ವಿವರಣೆಯ ಅಗತ್ಯವಿದೆ ಎಂದು ಸಮಿತಿ ಹೇಳಿದೆ. ಹಾಗಾಗಿ, ಮತ್ತೊಮ್ಮೆ ಆಯೋಗವನ್ನು ಚರ್ಚೆಗೆ ಆಹ್ವಾನಿಸುವ ಸಾಧ್ಯತೆ ಇದೆ. ಅಲ್ಲದೇ, 'ಒಂದು ದೇಶ ಒಂದು ಚುನಾವಣೆ' ಸಂಬಂಧ ಆಯೋಗವು ಕೇಂದ್ರ ಸರ್ಕಾರಕ್ಕೂ ವರದಿ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ತಿಂಗಳು ಕೋವಿಂದ್ ಸಮಿತಿಯ ಮೊದಲ ಸಭೆ ನಡೆದಿತ್ತು. ರಾಷ್ಟ್ರೀಯ ಪಕ್ಷಗಳು, ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರುವ ಪ್ರಾದೇಶಿಕ ಪಕ್ಷಗಳು, ಸಂಸತ್‌ನಲ್ಲಿ ಪ್ರಾತಿನಿಧ್ಯ ಹೊಂದಿರುವ ಹಾಗೂ ರಾಜ್ಯಗಳಲ್ಲಿ ಮಾನ್ಯತೆ ಪಡೆದಿರುವ ಪಕ್ಷಗಳ ನಾಯಕರನ್ನು ಆಹ್ವಾನಿಸಿ ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ಸಲಹೆ, ಅಭಿಪ್ರಾಯ ಪಡೆಯಲು ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಅಲ್ಲದೇ, ರಾಜಕೀಯ ಪಕ್ಷಗಳ ಜತೆ ಚರ್ಚಿಸಲು ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸಲು ನಿರ್ಧರಿಸಲಾಗಿದೆ. ಜೊತೆಗೆ, ಪಕ್ಷಗಳಿಗೆ ಮೂರು ತಿಂಗಳೊಳಗೆ ಪತ್ರದ ಮೂಲಕ ತಮ್ಮ ಅಭಿಪ್ರಾಯ ಸಲ್ಲಿಸುವ ಅವಕಾಶವನ್ನೂ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಮಿತಿಯ ಹೆಸರು ಬದಲಾವಣೆ

ಕೋವಿಂದ್ ನೇತೃತ್ವದ ಉನ್ನತಮಟ್ಟದ ಸಮಿತಿಯ ಎರಡನೇ ಸಭೆಯು ಬುಧವಾರ ನಡೆಯಿತು.

ಸಮಿತಿಗೆ 'ಒಂದು ದೇಶ; ಒಂದು ಚುನಾವಣೆಯ ಉನ್ನತಮಟ್ಟದ ಸಮಿತಿ' ಎಂದು ಮರುನಾಮಕರಣ ಮಾಡಲಾಗಿದೆ. ಸೆಪ್ಟೆಂಬರ್ 2ರಂದು ಕೇಂದ್ರ ಸರ್ಕಾರವು ಈ ಸಮಿತಿ ರಚಿಸಿ ಅಧಿಸೂಚನೆ ಹೊರಡಿಸಿತ್ತು.

ಏಕಕಾಲಕ್ಕೆ ಚುನಾವಣೆ ನಡೆದಾಗಲೂ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಎದುರಾಗುವ ಅತಂತ್ರ ಸ್ಥಿತಿ, ಅವಿಶ್ವಾಸ ನಿರ್ಣಯ ಅಥವಾ ಪಕ್ಷಾಂತರ ಸಮಸ್ಯೆ ಕುರಿತು ಸಮಿತಿ ಪರಿಶೀಲನೆ ನಡೆಸಲಿದೆ. ಇದಕ್ಕೆ ಸಂಭಾವ್ಯ ಪರಿಹಾರೋಪಾಯದ ಬಗ್ಗೆಯೂ ಕೇಂದ್ರಕ್ಕೆ ಶಿಫಾರಸು ಮಾಡಲಿದೆ.

ಚೆನ್ನೈ: ರಾಜಭವನದ ಮುಂಭಾಗ ಪೆಟ್ರೋಲ್ ಬಾಂಬ್

ಚೆನ್ನೈ (ಪಿಟಿಐ): ಇಲ್ಲಿನ ರಾಜಭವನದ ಮುಖ್ಯದ್ವಾರದ ಮುಂಭಾಗ ವ್ಯಕ್ತಿಯೊಬ್ಬ ಬುಧವಾರ ಪೆಟ್ರೋಲ್ ಬಾಂಬ್ ಎಸೆದಿದ್ದಾನೆ.

ಆರೋಪಿ ಕರುಕ್ಕ ವಿನೋದ್ (42) ಎಂಬಾತನನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆಗೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತೇನಾಂಪೇಟೆ ನಿವಾಸಿಯಾಗಿರುವ ವಿನೋದ್ ವಿರುದ್ಧ 14 ಕ್ರಿಮಿನಲ್ ಪ್ರಕರಣಗಳಿವೆ. ಈತ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದ ಎಂದು ವಿವರಿಸಿದ್ದಾರೆ. ಕಳೆದ ವರ್ಷ ಬಿಜೆಪಿ ಕಚೇರಿಗೆ ಪೆಟ್ರೋಲ್ ಬಾಂಬ್ ಎಸೆದಿದ್ದ ಪ್ರಕರಣದಲ್ಲೂ ಈತ ಆರೋಪಿಯಾಗಿದ್ದಾನೆ.

ಪೆಟ್ರೋಲ್ ಬಾಂಬ್ ಎಸೆತದಿಂದ ಯಾರಿಗೂ ಗಾಯಗಳಾಗಿಲ್ಲ ಮತ್ತು ಭದ್ರತಾ ಲೋಪವಾಗಿಲ್ಲ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ದಕ್ಷಿಣ) ಪ್ರೇಮ್ ಆನಂದ್ ಸಿನ್ಹಾ ತಿಳಿಸಿದ್ದಾರೆ.

'ಪೆಟ್ರೋಲ್ ಬಾಂಬ್ ಎಸೆತದಿಂದ ಬೆಂಕಿ ಅಥವಾ ಹೊಗೆ ಕಾಣಿಸಿಕೊಂಡಿಲ್ಲ. ಕೇವಲ ಬಾಟಲಿಯಷ್ಟೆ ಒಡೆದಿದೆ. ಆರೋಪಿಯಿಂದ ಇನ್ನಷ್ಟು ಬಾಟಲಿಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದಿದ್ದಾರೆ.

ಚೆನ್ನೈನಲ್ಲಿ ರಾಜಭವನದ ಮುಖ್ಯ ದ್ವಾರದ ಹೊರಗೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು – ಪಿಟಿಐ ಚಿತ್ರ

ಪ್ರಕರಣವನ್ನು ಖಂಡಿಸಿರುವ ವಿರೋಧ ಪಕ್ಷ ಎಐಎಡಿಎಂಕೆ ಮತ್ತು ಬಿಜೆಪಿ, ಆಡಳಿತಾರೂಢ ಡಿಎಂಕೆಯ ವಿರುದ್ಧ ವಾಗ್ದಾಳಿ ನಡೆಸಿವೆ.

'ತಮಿಳುನಾಡಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಈ ಘಟನೆ ಸಾಕ್ಷಿಯಾಗಿದೆ' ಎಂದು ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಹೇಳಿದ್ದಾರೆ.

'ರಾಜಭವನ ಸಹ ಅಭದ್ರತೆಯಲ್ಲಿದೆ ಎಂಬುದಕ್ಕೆ ಈ ಪ್ರಕರಣ ಉದಾಹರಣೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ' ಎಂದು ವಿರೋಧಪಕ್ಷದ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 25-10-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1580)
ಒಂದು ವಾರದ ಡೆಲಿವರಿ	1545 (1575)
ಸೋಯಾ ಕಚ್ಚಾ	860 (855)
ಪಾಮ್ ವಾರದ ಡೆಲಿವರಿ	808 (813)
ಸೂರ್ಯಕಾಂತಿ ಎಣ್ಣೆ ಕಚ್ಚಾ	840 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60,450 (60,200)
ಬೆಳ್ಳಿ ಕೆ.ಜಿ 71,100 (71,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೆನಡಾದಲ್ಲಿ ವೀಸಾ ಸೇವೆ ಮತ್ತೆ ಆರಂಭ

ಟೊರೊಂಟೊ (ಪಿಟಿಐ): ಭಾರತವು ಅಕ್ಟೋಬರ್ 26ರಿಂದ ಕೆನಡಾದಲ್ಲಿ ಕೆಲವು ವೀಸಾ ಸೇವೆಗಳನ್ನು ಮರು ಆರಂಭಿಸಲಿದೆ ಎಂದು ಭಾರತದ ಹೈಕಮಿಷನ್ ಬುಧವಾರ ತಿಳಿಸಿದೆ.

ಪ್ರವೇಶ ವೀಸಾ, ವಾಣಿಜ್ಯ ವೀಸಾ, ವೈದ್ಯಕೀಯ ವೀಸಾ ಮತ್ತು ಕಾನ್ಫರೆನ್ಸ್ ವೀಸಾ ಸೇವೆಯನ್ನು ಮರು ಆರಂಭಿಸಲಿದೆ ಎಂದು 'ಎಕ್ಸ್'ನಲ್ಲಿ ತಿಳಿಸಿದೆ. ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಸೆಪ್ಟೆಂಬರ್‌ನಲ್ಲಿ ಆರೋಪಿಸಿದ್ದರು. ಈ ಆರೋಪವನ್ನು ತಳ್ಳಿಹಾಕಿದ್ದ ಭಾರತ, ಕೆನಡಾ ಪ್ರಜೆಗಳಿಗೆ ವೀಸಾ ವಿತರಿಸುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಘೋಷಿಸಿತ್ತು. ನಂತರದ ಬೆಳವಣಿಗೆಯಿಂದ ಉಭಯ ದೇಶಗಳ ಬಾಂಧವ್ಯ ಹದಗೆಟ್ಟಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹಳೆಚಾಲಿ	39399-40299	ಬಿಳಿಗೋಟು	32718-34899
ಹಳತು	46000-48500	ಹೊಸಚಾಲಿ	37809-40509	ಚಾಲಿ	37839-40239
ಕೋಕ	15000-27500	**ಪುತ್ತೂರು**		ಕೋಕ	30760-33319
ಹೊನ್ನಾವರ		ಕೋಕ	11000-25000	ಕೆಂಪುಗೋಟು	30899-33699
ಹಳೆಚಾಲಿ	36000-39000	ಹೊಸತು	34000-43000	ರಾಶಿ	42169-46189
ಕಾರ್ಕಳ		**ಶಿವಮೊಗ್ಗ**		ತಟ್ಟಿಬೆಟ್ಟೆ	39109-44099
ಹಳತು	30000-48500	ಬೆಟ್ಟೆ	48599-53100	**ಶಿರಸಿ**	
ಕುಮಟ		ಗೊರಬಾಳು	18000-37171	ಬೆಟ್ಟೆ	35561-42609
ಚಿಪ್ಪು	31019-34799	ರಾಶಿ	46269-48021	ಬಿಳಿಗೋಟು	27100-35399
ಕೋಕ	20109-33019	ಸರಕು	52159-80400	ಚಾಲಿ	36509-41221
ಫ್ಯಾಕ್ಟರಿ	10169-25929	**ಸಿದ್ದಾಪುರ**		ರಾಶಿ	45061-46699

ಸಂಕ್ಷಿಪ್ತ ಸುದ್ದಿ

ಬಾವಲಿಗಳಲ್ಲಿ ನಿಪಾ ವೈರಸ್ ಪತ್ತೆ

ತಿರುವನಂತಪುರ: ಕೇರಳದ ವಯನಾಡ್ ಜಿಲ್ಲೆಯ ಬಾವಲಿಗಳಲ್ಲಿ ನಿಪಾ ವೈರಸ್ ಇರುವುದನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಪತ್ತೆಹಚ್ಚಿದೆ.

ವಯನಾಡ್‌ನ ಮಾನಂದವಾಡಿ ಮತ್ತು ಸುಲ್ತಾನ್ ಬತ್ತೇರಿ ಪ್ರದೇಶದಿಂದ ಬಾವಲಿಗಳ ಮಾದರಿ ಸಂಗ್ರಹಿಸಿ ಐಸಿಎಂಆರ್‌ಗೆ ಕಳುಹಿಸಲಾಗಿತ್ತು.

ನಿಪಾ ಸೋಂಕು ಮರುಕಳಿಸಲು ಕಾರಣವೇನು ಎಂಬುದನ್ನು ಪತ್ತೆ ಹಚ್ಚುವ ಸಲುವಾಗಿ ರಾಜ್ಯದ ವಿವಿಧೆಡೆಗಳಿಂದಲೂ ಬಾವಲಿಗಳ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ವಾಘ್ ಬಕ್ರಿ ಟೀ: ಪರಾಗ್ ದೇಸಾಯಿ ನಿಧನ

ಅಹಮದಾಬಾದ್ (ಪಿಟಿಐ): ವಾಘ್ ಬಕ್ರಿ ಟೀ ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕ ಪರಾಗ್ ದೇಸಾಯಿ (50) ಅವರು ಮೆದುಳು ಶಸ್ತ್ರಚಿಕಿತ್ಸೆ ಯಶಸ್ವಿಯಾಗದೆ ಗುಜರಾತ್‌ನ ಶಾಲ್ಬಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾಗಿದ್ದಾರೆ ಎಂದು ಕಂಪನಿ ತಿಳಿಸಿದೆ.

ಅಕ್ಟೋಬರ್ 15ರಂದು ದೇಸಾಯಿ ಅವರು ತಮ್ಮ ಮನೆ ಬಳಿ ಸಂಜೆ ವೇಳೆ ನಡೆದುಕೊಂಡು ಹೋಗುತ್ತಿದ್ದಾಗ ಬೀದಿ ನಾಯಿಗಳ ದಾಳಿಗೆ ಒಳಗಾಗಿದ್ದರು. ನಾಯಿಗಳಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ವೇಳೆ ನೆಲದ ಮೇಲೆ ಬಿದ್ದು, ಪ್ರಜ್ಞಾಹೀನರಾಗಿದ್ದರು. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ಸೇರಿಸಲಾಯಿತು. ಆದರೆ, ಪರಿಸ್ಥಿತಿ ಗಂಭೀರ ಆಗಿದ್ದರಿಂದ ತಕ್ಷಣವೇ ಶಾಲ್ಬಿ ಆಸ್ಪತ್ರೆಗೆ ದಾಖಲಿಸಲಾಯಿತು.

ಅಲ್ಲಿ ಪರೀಕ್ಷೆ ನಡೆಸಿದ ವೈದ್ಯರು ಕೆಳಗೆ ಬಿದ್ದಾಗ ತಲೆಗೆ ತೀವ್ರ ಪೆಟ್ಟಾಗಿ ರಕ್ತಸ್ರಾವ ಆಗಿದ್ದರಿಂದ ಮೆದುಳು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. 72 ಗಂಟೆ ಕಾಲ ತೀವ್ರ ನಿಗಾ ಘಟಕದಲ್ಲಿ ಇಡಲಾಗಿತ್ತು. ಆದರೆ ಭಾನುವಾರ ಸಂಜೆ ಅವರು ಕೊನೆಯುಸಿರೆಳೆದರು. ನಾಯಿ ಕಚ್ಚಿರುವ ಯಾವುದೇ ಗುರುತು ಅವರ ದೇಹದ ಮೇಲಿಲ್ಲ ಎಂದು ವೈದ್ಯರು ತಿಳಿಸಿರುವುದಾಗಿ ಕುಟುಂಬದ ಮೂಲಗಳು ಹೇಳಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

MNC ಕಂಪನಿಗಳಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ರೂಮ್, ESI, PF, OT. 18,500-47,500. SSLC, PUC. 8861041526, 7022121680.

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Multiple Vacancy

REQUIRED EXPERIENCED Telecaller& Field Executive For BankLoan collection. Direct Recruitment to Company Contact:- 7899040499, 9620206756.

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಪ್ರವಾಸ

Travel

16.11.2023 08.01.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 22.11.2023 08.12.2023 13.01.2024 ದುಬೈ,ಅಬುದಾಬಿ 5 ದಿನಗಳು. 06.12.2023 12.01.2024 ನೇಪಾಳ 9 ದಿನಗಳು. 23.12.2023 12.01.2024 ಭೂತಾನ್ 8 ದಿನಗಳು. 17.11.2023 11.12.2023 ಶ್ರೀಲಂಕಾ 6 ದಿನಗಳು. 22.11.2023 06.12.2023 13.01.2024 ರಾಜಸ್ಥಾನ್ 10 ದಿನಗಳು. 12.12.2023 13.01.2024 ಗುಜರಾತ್ 8 ದಿನಗಳು. 27.11.2023 05.01.2024 ಅಸ್ಸಾಂ,ಮೇಘಾಲಯ 9 ದಿನಗಳು. 11.12.2023 04.01.2024 ಕಾಶಿ,ಗಯಾ ಅಲಹಾಬಾದ್ 7 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

★ಶ್ರೇಯಸ್ ಟೂರ್ಸ್★ ವಿ.ವಿ.ಪುರಂ 20.11.2023 8ದಿನಗಳು ಅಹೋಬಲಂ, ಮಹಾನಂದಿ,ಶ್ರೀಶೈಲಂ, ಹೈದರಾಬಾದ್,ಮಂತ್ರಾಲಯ. 27.11.2023 12ದಿನಗಳು ಗುಜರಾತ್ ಮಧ್ಯಪ್ರದೇಶ ರಾಜ್ಯ ಪ್ರವಾಸ. 01.12.2023 14/20ದಿನ ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ.ಅರುಣಾಚಲ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್ (ಹಾರ್ನೋಬಿಲ್). 08.12.2023 14ದಿನಗಳು ಅಖಂಡ ಮಹಾರಾಷ್ಟ್ರ ರಾಜ್ಯ ಪ್ರವಾಸ ಚತುರ್ಥಜ್ಯೋರ್ತಿಲಿಂಗ, ಅಷ್ಟವಿನಾಯಕ,ಮುಂಬಯಿ, ಶಿರಡಿ,ಇತರೆ. 9743351212/ 9206979202/ 6366322639

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಆಸ್ಟ್ರೇಲಿಯಾಕ್ಕೆ 309 ರನ್‌ಗಳ ಭಾರಿ ಜಯ • 40 ಎಸೆತದಲ್ಲಿ ಮ್ಯಾಕ್ಸ್‌ವೆಲ್ ಶತಕ • ಆ್ಯಡಂ ಜಂಪಾಗೆ ನಾಲ್ಕು ವಿಕೆಟ್

ಗ್ಲೆನ್, ವಾರ್ನರ್ ಅಬ್ಬರಕ್ಕೆ ಪೆಚ್ಚಾದ ಡಚ್ಚರು

ನವದೆಹಲಿ (ಎಎಫ್‌ಪಿ): ಗ್ಲೆನ್ಸ್ ಮ್ಯಾಕ್ಸ್‌ವೆಲ್ ಬರೇ 40 ಎಸೆತಗಳಲ್ಲಿ 100 ರನ್ ಗಳಿಸಿ ವಿಶ್ವಕಪ್‌ನ ಅತಿ ವೇಗದ ಶತಕ ದಾಖಲಿಸಿದರು. ಇನ್ನೊಂದೆಡೆ ಡೇವಿಡ್ ವಾರ್ನರ್ 104 ರನ್ ಬಾರಿಸಿ ಟೂರ್ನಿಯ ಎರಡನೇ ಶತಕ ಹೊಡೆದರು. ನೆದರ್ಲೆಂಡ್ಸ್ ತಂಡ ಬುಧವಾರ ನಡೆದ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಆಸ್ಟ್ರೇಲಿಯಾಕ್ಕೆ ಸವಾಲೇ ಆಗಲಿಲ್ಲ. ಆಸ್ಟ್ರೇಲಿಯಾ 309 ರನ್‌ಗಳ ಭಾರಿ ಅಂತರದ ಗೆಲುವು ಸಾಧಿಸಿತು.

ನೆದರ್ಲೆಂಡ್ಸ್ ದಾಳಿಯನ್ನು ಧೂಳೀಪಟ ಮಾಡಿದ ಮ್ಯಾಕ್ಸ್‌ವೆಲ್ 44 ಎಸೆತಗಳಲ್ಲಿ 9 ಬೌಂಡರಿ, ಎಂಟು ಸಿಕ್ಸರ್‌ಗಳಿದ್ದ 106 ರನ್ ಬಾರಿಸಿದರು. ಆಸ್ಟ್ರೇಲಿಯಾ 8 ವಿಕೆಟ್‌ಗೆ 399 ರನ್‌ಗಳ ಭಾರಿ ಮೊತ್ತ ಕಲೆಹಾಕಿತು. ನಂತರ ಆಸ್ಟ್ರೇಲಿಯಾದ ಬೌಲರ್‌ಗಳು 21 ಓವರುಗಳಲ್ಲಿ ಡಚ್ ತಂಡವನ್ನು 90 ರನ್ನಿಗೆ ಉರುಳಿಸಿದರು.

ಭಾರತ, ಇದೇ ವರ್ಷದ ಜನವರಿ 15ರಂದು ಶ್ರೀಲಂಕಾ ತಂಡವನ್ನು ತಿರುವನಂತಪುರದಲ್ಲಿ 317 ರನ್‌ಗಳಿಂದ ಸೋಲಿಸಿದ್ದು ಏಕದಿನ ಕ್ರಿಕೆಟ್ ಅತಿ ದೊಡ್ಡ (ರನ್ ಆಧಾರದ) ಗೆಲುವಾಗಿದೆ. ಅದನ್ನ ಬಿಟ್ಟರೆ ಆಸ್ಟ್ರೇಲಿಯಾದ ಇಂದಿನ ಗೆಲುವೇ ಎರಡನೇ ಅತಿ ದೊಡ್ಡ ಅಂತರದ ಗೆಲುವು ಎನಿಸಿತು. ಆಸ್ಟ್ರೇಲಿಯಾ ಈ ಹಿಂದೆ ಅಫ್ಗಾನಿಸ್ತಾನ ತಂಡವನ್ನು 2015ರ ವಿಶ್ವಕಪ್‌ನಲ್ಲಿ 275 ರನ್‌ಗಳಿಂದ ಸೋಲಿಸಿದ್ದು ಆ ತಂಡದ ಅತಿ ದೊಡ್ಡ ಗೆಲುವು ಎನಿಸಿತ್ತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಇನ್ನೂ ಕೆಲವು ದಾಖಲೆಗಳು ಮೂಡಿದವು. 18 ದಿನಗಳ ಹಿಂದೆ ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ ಶ್ರೀಲಂಕಾ ವಿರುದ್ಧ ಇದೇ ಕ್ರೀಡಾಂಗಣದಲ್ಲಿ 49 ಎಸೆತಗಳಲ್ಲಿ ಶತಕ ಹೊಡೆದಿದ್ದರು. ಮ್ಯಾಕ್ಸ್‌ವೆಲ್ ಬುಧವಾರ ಆ ದಾಖಲೆ ಮುರಿದರು. ಅವರು ಅಂತಿಮ ಓವರ್‌ನಲ್ಲಿ ನಿರ್ಗಮಿಸುವ ಮೊದಲು ಬಾಸ್ ಡಿ ಲೀಡ್ ಅವರ ಓವರ್‌ನ ಸತತ ಎಸೆತಗಳಲ್ಲಿ ಎರಡು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಚಚ್ಚಿದರು.

ಕಳೆದ ವಾರ ಪಾಕಿಸ್ತಾನ ವಿರುದ್ಧ 163 ರನ್ ಹೊಡೆದಿದ್ದ ವಾರ್ನರ್ ಆ ಆಟವನ್ನು ಮುಂದುವರಿಸುವಂತೆ 91 ಎಸೆತಗಳಲ್ಲಿ 11 ಬೌಂಡರಿ, ಮೂರು ಸಿಕ್ಸರ್‌ಗಳಿದ್ದ 104 ರನ್ ಗಳಿಸಿ ತಂಡದ ಪಾರಮ್ಯಕ್ಕೆ ಬುನಾದಿ ಹಾಕಿಕೊಟ್ಟಿದ್ದರು. ವಾರ್ನರ್ ವಿಶ್ವಕಪ್‌ನಲ್ಲಿ ಆರನೇ ಶತಕ ಹೊಡೆಯುವ ಮೂಲಕ ಸಚಿನ್ ತೆಂಡೂಲ್ಕರ್ ಸಾಧನೆ ಸರಿಗಟ್ಟಿದರು. ಈ ಪಟ್ಟಿಯಲ್ಲಿ ರೋಹಿತ್ ಶರ್ಮಾ (7 ಶತಕ) ಇತ್ತೀಚೆಗಷ್ಟೇ ಅಗ್ರಸ್ಥಾನಕ್ಕೆ ಏರಿದ್ದರು.

ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ಆಸ್ಟ್ರೇಲಿಯಾ, ಮಿಚೆಲ್ ಮಾರ್ಷ್ (9) ಅವರನ್ನು ಬೇಗ ಕಳೆದುಕೊಂಡಿತು. ಆದರೆ ಬೇರೂರಿದ ವಾರ್ನರ್, ಸ್ಟೀವ್ ಸ್ಮಿತ್ (71) ಜೊತೆ ಎರಡನೇ ವಿಕೆಟ್‌ಗೆ 132 ರನ್ ಸೇರಿಸಿ ನೆದರ್ಲೆಂಡ್ಸ್ ಉತ್ಸಾಹಕ್ಕೆ ತಣ್ಣೀರೆರಚಿದರು. ವಾರ್ನರ್ ನಂತರ ಲಾಬುಷೇನ್ ಜೊತೆ 84 ರನ್ ಜೊತೆಯಾಟವಾಡಿ ತಂಡದ ಸ್ಥಿತಿ ಭದ್ರಗೊಳಿಸಿದರು. ಐಪಿಎಲ್‌ನಲ್ಲಿ ಸ್ಥಳೀಯ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರೂ ಆಗಿರುವ ಅವರು ಇದೇ ಮೈದಾನದಲ್ಲಿ ತಮ್ಮ 22ನೇ ಏಕದಿನ ಶತಕ ಬಾರಿಸಿದರು. ಲೋಗನ್ ವಾನ್ ಬೀಕ್ ಅವರ ಬೌಲಿಂಗ್‌ನಲ್ಲಿ ಪ್ಯಾಡಲ್ ಸ್ವೀಪ್‌ಗೆ ಯತ್ನಿಸಿದ ವಾರ್ನರ್ ಫೈನ್ ಲೆಗ್‌ನಲ್ಲಿ ಕ್ಯಾಚಿತ್ತರು. ಮ್ಯಾಕ್ಸ್‌ವೆಲ್ ಅಬ್ಬರದ ಶತಕವೇ ನಂತರ ಆಕರ್ಷಣೆಯಾಯಿತು. ಡಿ ಲೀಡ್ ಅವರ ಒಂದೇ ಓವರ್‌ನಲ್ಲಿ 26 ರನ್‌ಗಳನ್ನು ಬಾರಿಸಿ ಅವರು ಶತಕ ದಾಟಿ ಭುಜಬಲ ಮೆರೆದರು. 2 ವಿಕೆಟ್ ಪಡೆದ ಡಿ ಲೀಡ್ 10 ಓವರ್‌ಗಳಲ್ಲಿ 115 ರನ್ ತೆತ್ತಿದ್ದು, ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ನೀಡಿದ ಅನಪೇಕ್ಷಿತ ದಾಖಲೆಗೆ ಒಳಗಾಗಬೇಕಾಯಿತು.

ಡಚ್ ತಂಡ ಈ ಬೆಟ್ಟದಷ್ಟು ಮೊತ್ತದ ಮುಂದೆ ಹೋರಾಟ ತೋರಲೇ ಇಲ್ಲ. 62 ರನ್‌ಗಳಾಗುಷ್ಟರಲ್ಲಿ ಅರ್ಧದಷ್ಟು ಮಂದಿ ಪೆವಿಲಿಯನ್‌ಗೆ ಮರಳಿದ್ದರು. ಆರಂಭ ಆಟಗಾರ ವಿಕ್ರಮ್‌ಜಿತ್ ಸಿಂಗ್ 25 ರನ್ ಗಳಿಸಿ ಮ್ಯಾಕ್ಸ್‌ವೆಲ್ ಅವರ ನೇರ ಥ್ರೋಗೆ ರನೌಟ್ ಆದರು. ಇದೇ ತಂಡದ ಗರಿಷ್ಠ ವೈಯಕ್ತಿಕ ಮೊತ್ತ ಎನಿಸಿತು. ವೇಗದ ಬೌಲರ್‌ಗಳು ಪೆಟ್ಟು ನೀಡಿದ ನಂತರ, ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ಮೂರು ಓವರುಗಳಲ್ಲಿ ಎಂಟು ರನ್ನಿತ್ತು ಕೊನೆಯ ನಾಲ್ಕು ವಿಕೆಟ್ ಕಬಳಿಸಿದರು.

ಎರಡು ಸೋಲುಗಳೊಂದಿಗೆ ಟೂರ್ನಿಯನ್ನು ಆರಂಭಿಸಿದ್ದ ಆಸ್ಟ್ರೇಲಿಯಾ, ಪುಟಿದೆದ್ದು ಸತತ ಮೂರು ಗೆಲುವು ದಾಖಲಿಸಿತಲ್ಲದೇ, ಪಾಯಿಂಟ್ ಪಟ್ಟಿಯಲ್ಲಿ 4ನೇ ಸ್ಥಾನಕ್ಕೆ ಜಿಗಿಯಿತು. ದಕ್ಷಿಣ ಆಫ್ರಿಕಾ ತಂಡಕ್ಕೆ ಅಚ್ಚರಿಯ ಸೋಲುಣಿಸಿದ್ದ ನೆದರ್ಲೆಂಡ್ಸ್ ಈ ದೊಡ್ಡ ಸೋಲಿನೊಡನೆ ಕೊನೆಯ ಸ್ಥಾನಕ್ಕಿಳಿಯಿತು.

ಸ್ಕೋರುಗಳು: ಆಸ್ಟ್ರೇಲಿಯಾ: 50 ಓವರುಗಳಲ್ಲಿ 8 ವಿಕೆಟ್‌ಗೆ 399 (ಡೇವಿಡ್ ವಾರ್ನರ್ 104, ಸ್ಟೀವ್ ಸ್ಮಿತ್ 71, ಲಾಬುಷೇನ್ 62, ಮ್ಯಾಕ್ಸ್‌ವೆಲ್ 106; ಲೋಗನ್ ವಾನ್ ಬೀಕ್ 74ಕ್ಕೆ4, ಬಾಸ್ ಡಿ ಲೀಡ್ 115ಕ್ಕೆ2); **ನೆದರ್ಲೆಂಡ್ಸ್:** 21 ಓವರುಗಳಲ್ಲಿ 90 (ವಿಕ್ರಮಜಿತ್ ಸಿಂಗ್ 25; ಮಿಚೆಲ್ ಮಾರ್ಷ್ 19ಕ್ಕೆ2, ಆ್ಯಡಂ ಜಂಪಾ 8ಕ್ಕೆ4)

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 309 ರನ್‌ಗಳ ಜಯ

ಶತಕ ಗಳಿಸಿದ ಸಂಭ್ರಮದಲ್ಲಿ ಗ್ಲೆನ್ಸ್ ಮ್ಯಾಕ್ಸ್‌ವೆಲ್ (ಎಡ) ಡೇವಿಡ್ ವಾರ್ನರ್ ಬ್ಯಾಟಿಂಗ್ ವೈಖರಿ –ಪಿಟಿಐ/ಎಎಫ್‌ಪಿ ಚಿತ್ರ

ಏಕದಿನ ಕ್ರಿಕೆಟ್: ಗರಿಷ್ಠ ರನ್ ಅಂತರದ ಗೆಲುವು

ಅಂತರ	ಗೆದ್ದ ತಂಡ	ಸೋತ ತಂಡ	ವರ್ಷ
317	ಭಾರತ	ಶ್ರೀಲಂಕಾ	2023
309	ಆಸ್ಟ್ರೇಲಿಯಾ	ನೆದರ್ಲೆಂಡ್ಸ್	2023
304	ಜಿಂಬಾಬ್ವೆ	ಅಮೆರಿಕ	2023
290	ನ್ಯೂಜಿಲೆಂಡ್	ಐರ್ಲೆಂಡ್	2008
275	ಆಸ್ಟ್ರೇಲಿಯಾ	ಅಫ್ಗಾನಿಸ್ತಾನ	2015

ಏಕದಿನ ವಿಶ್ವಕಪ್‌ನಲ್ಲಿ ವೇಗದ ಶತಕ

ಎಸೆತ	ಆಟಗಾರ	ದೇಶ	ಎದುರಾಳಿ
40	ಗ್ಲೆನ್ಸ್ ಮ್ಯಾಕ್ಸ್‌ವೆಲ್	ಆಸ್ಟ್ರೇಲಿಯಾ	ನೆದರ್ಲೆಂಡ್ಸ್
49	ಏಡನ್ ಮರ್ಕರಂ	ದಕ್ಷಿಣ ಆಫ್ರಿಕಾ	ಶ್ರೀಲಂಕಾ
50	ಕೆವಿನ್ ಒಬ್ರಯಾನ್	ಐರ್ಲೆಂಡ್	ಇಂಗ್ಲೆಂಡ್
51	ಗ್ಲೆನ್ಸ್ ಮ್ಯಾಕ್ಸ್‌ವೆಲ್	ಆಸ್ಟ್ರೇಲಿಯಾ	ಶ್ರೀಲಂಕಾ
52	ಎಬಿ ಡಿವಿಲಿಯರ್ಸ್	ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	5	5	0	0	10	1.353
ದಕ್ಷಿಣ ಆಫ್ರಿಕಾ	5	4	1	0	8	2.370
ನ್ಯೂಜಿಲೆಂಡ್	5	4	1	0	8	1.481
ಆಸ್ಟ್ರೇಲಿಯಾ	5	3	2	0	6	1.142
ಪಾಕಿಸ್ತಾನ	5	2	3	0	4	-0.400
ಅಫ್ಗಾನಿಸ್ತಾನ	5	2	3	0	4	-0.969
ಶ್ರೀಲಂಕಾ	4	1	3	0	2	-1.048
ಇಂಗ್ಲೆಂಡ್	4	1	3	0	2	-1.248
ಬಾಂಗ್ಲಾದೇಶ	5	1	4	0	2	-1.253
ನೆದರ್ಲೆಂಡ್ಸ್	5	1	4	0	2	-1.902

ನನ್ನ ಗುರಿ ಸುಧಾರಣೆ ಕಡೆಗಷ್ಟೇ, ಶ್ರೇಷ್ಠತೆಯ ಕಡೆಗಲ್ಲ: ಕೊಹ್ಲಿ

ವಿರಾಟ್ ಕೊಹ್ಲಿ

ಚೆನ್ನೈ (ಪಿಟಿಐ): 'ಪಂದ್ಯದಿಂದ ಪಂದ್ಯಕ್ಕೆ ಬ್ಯಾಟಿಂಗ್ ಸುಧಾರಣೆಯ ಕಡೆಗೇ ನನ್ನ ಗುರಿ ಹೊರತು ಶ್ರೇಷ್ಠತೆಯ ಕಡೆಗಲ್ಲ' ಎಂದು ಹಾಲಿ ವಿಶ್ವಕಪ್‌ನಲ್ಲಿ ಅಮೋಘ ಯಶಸ್ಸಿನ ಓಟ ಕಾಣುತ್ತಿರುವ ಭಾರತ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಕೊಹ್ಲಿ ಅವರು ಪ್ರಸ್ತುತ ಭಾರತ ತಂಡದ ಪರ ಅತ್ಯಧಿಕ ರನ್ ಗಳಿಕೆದಾರ. ಐದು ಪಂದ್ಯಗಳಿಂದ ಅವರು 118ರ ಸರಾಸರಿಯಲ್ಲಿ 354 ರನ್ ಹೊಡೆದಿದ್ದಾರೆ. ಇದರಲ್ಲಿ ಒಂದು ಶತಕ, ಮೂರು ಅರ್ಧಶತಕಗಳು ಒಳಗೊಂಡಿವೆ.

'ಪ್ರತಿಯೊಂದು ಅಭ್ಯಾಸದ ಅವಧಿ, ಪ್ರತಿ ವರ್ಷ, ಪ್ರತಿ ಋತು... ಹೀಗೆ ನಾನು ಹೇಗೆ ಸುಧಾರಣೆ ಕಾಣಬಹುದು ಎಂಬ ಕಡೆಗಷ್ಟೇ ಸದಾ ಶ್ರಮ ಹಾಕುತ್ತೇನೆ. ಇದರಿಂದಾಗಿಯೇ ಇಷ್ಟು ದೀರ್ಘಕಾಲ ಆಡಲು ಮತ್ತು ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಿದೆ' ಎಂದು ಕೊಹ್ಲಿ ಸ್ಟಾರ್ ಸ್ಪೋರ್ಟ್ಸ್ ವಾಹಿನಿಗೆ ತಿಳಿಸಿದ್ದಾರೆ. 'ಇಂಥ ಮನಃಸ್ಥಿತಿ ಹೊಂದಿರದಿದ್ದರೆ, ಸ್ಥಿರ ಪ್ರದರ್ಶನ ನೀಡಲು ಸಾಧ್ಯವಾಗುವುದಿಲ್ಲ' ಎಂದಿದ್ದಾರೆ.

'ಆಟದ ಸುಧಾರಣೆಯ ಕಡೆಗಷ್ಟೇ ನನ್ನ ಗಮನ ಹೊರತು, ಶ್ರೇಷ್ಠತೆಯ ಕಡೆಗಲ್ಲ. ಪ್ರಾಮಾಣಿಕವಾಗಿ ಹೇಳುವುದಾದರೆ ಶ್ರೇಷ್ಠತೆ ವ್ಯಾಖ್ಯಾನವೇ ನನಗೆ ಗೊತ್ತಿಲ್ಲ. ಅದಕ್ಕೆ ಮಿತಿಯಿಲ್ಲ ಅಥವಾ ಅದರ ಮಟ್ಟ ತಲುಪಿದೆವೊ ಎಂಬುದನ್ನು ತಿಳಿಯಲು ಅಳತೆಗೋಲು ನಿಗದಿಪಡಿಸಿಲ್ಲ' ಎಂದು ಕೊಹ್ಲಿ ವಿವರಿಸಿದರು.

ಈ ವಿಶ್ವಕಪ್‌ನಲ್ಲಿ ಕೊಹ್ಲಿ ಅತ್ಯಧಿಕ ರನ್ ಗಳಿಕೆದಾರರಲ್ಲಿ 2ನೇ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್, ಕೊಹ್ಲಿ ಅವರಿಗಿಂತ 53 ರನ್ ಹೆಚ್ಚು ಗಳಿಸಿದ್ದಾರೆ.

ಉಭಯ ತಂಡಗಳಿಗೂ ಗೆಲುವಿನ ಒತ್ತಡ • ಇಬ್ಬರು ವಿಕೆಟ್‌ಕೀಪಿಂಗ್ ನಾಯಕರ ಹಣಾಹಣಿ

ಚಾಂಪಿಯನ್ ಇಂಗ್ಲೆಂಡ್‌ಗೆ ಲಂಕಾ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಮುಖಾಮುಖಿಯಾಗಲಿರುವ ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡಗಳಲ್ಲಿ ಹಲವು ಸಾಮ್ಯತೆಗಳು ಇವೆ.

ಏಕದಿನ ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿ ಎರಡೂ ತಂಡಗಳು ತಲಾ ಒಂದು ಸಲ ಚಾಂಪಿಯನ್ ಆಗಿವೆ. ಈ ಟೂರ್ನಿಯಲ್ಲಿ ಉಭಯ ತಂಡಗಳು ನಾಲ್ಕು ಪಂದ್ಯಗಳನ್ನು ಆಡಿವೆ. ತಲಾ ಒಂದು ಪಂದ್ಯ ಗೆದ್ದು ಉಳಿದಿದ್ದರಲ್ಲಿ ಸೋತಿವೆ. ಎರಡೂ ತಂಡಗಳಿಗೂ ವಿಕೆಟ್‌ಕೀಪರ್‌ಗಳೇ ನಾಯಕರಾಗಿದ್ದಾರೆ. ಆದರೆ, ಅಂಕಪಟ್ಟಿಯಲ್ಲಿ ಲಂಕಾ ಎಂಟನೇ ಸ್ಥಾನದಲ್ಲಿದೆ. ಅದರ ನಂತರದ ಸ್ಥಾನದಲ್ಲಿ ಇಂಗ್ಲೆಂಡ್ ಇದೆ.

ಆದರೆ ಈ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಕನಸು ಜೀವಂತವಾಗಿ ಉಳಿಯಬೇಕಾದರೆ ಉಭಯ ತಂಡಗಳೂ ತಮ್ಮ ಪಾಲಿನ ಇನ್ನುಳಿದ ಪಂದ್ಯಗಳಲ್ಲಿ ಜಯಿಸುವ ಒತ್ತಡದಲ್ಲಿವೆ. ಆದರೆ ಇಲ್ಲಿ ಸೋತರೆ ಮುಂದಿನ ಹಾದಿ ಕಠಿಣವಾಗಲಿದೆ. ಆದ್ದರಿಂದ ಈ ಪಂದ್ಯವು ಕುತೂಹಲ ಕೆರಳಿಸಿದೆ.

ಇಂಗ್ಲೆಂಡ್ ತಂಡವು ಈ ಟೂರ್ನಿಯಲ್ಲಿ ಅಫ್ಗಾನಿಸ್ತಾನದ ಎದುರು ಕೂಡ ಆಘಾತ ಅನುಭವಿಸಿದೆ. ಬಾಂಗ್ಲಾದೇಶದ ವಿರುದ್ಧ ಗೆದ್ದಿತ್ತು. ಆದರೆ, ಬಲಿಷ್ಠ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಎದುರು ದೊಡ್ಡ ಅಂತರದ ಸೋಲುಗಳನ್ನು ಅನುಭವಿಸಿತ್ತು.

ಮುಂಬೈನಲ್ಲಿ ನಡೆದಿದ್ದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಇಂಗ್ಲೆಂಡ್ ಬೌಲರ್‌ಗಳ ಆಟ ಸತ್ವರಹಿತವಾಗಿತ್ತು. ರೀಸ್ ಟಾಪ್ಲಿ ಮೂರು, ಗಸ್ ಅಟ್ಕಿನ್ಸನ್ ಮತ್ತು ಆದಿಲ್ ರಶೀದ್ ತಲಾ ಎರಡು ವಿಕೆಟ್ ಗಳಿಸಿದ್ದರು. ಆದರೆ ಬಹಳಷ್ಟು ರನ್‌ಗಳನ್ನು ಕೊಟ್ಟಿದ್ದರು. ಅದರಲ್ಲೂ ಅನುಭವಿ ಮಾರ್ಕ್ ವುಡ್ ಮತ್ತು ಟಾಪ್ಲಿ ಅವರಿಬ್ಬರೂ 10ರ ಸರಾಸರಿಯಲ್ಲಿ ರನ್ ಕೊಟ್ಟಿದ್ದರು.

ಬ್ಯಾಟಿಂಗ್‌ನಲ್ಲಿಯೂ ಅನುಭವಿ ಆಟಗಾರರಾದ ಜೋ ರೂಟ್, ಜಾನಿ ಬೆಸ್ಟೊ, ಬೆನ್ ಸ್ಟೋಕ್ಸ್, ಹ್ಯಾರಿ ಬ್ರೂಕ್, ನಾಯಕ ಬಟ್ಲರ್, ಮಲಾನ್ ಅವರು ತಲಾ 20 ರನ್‌ಗಳನ್ನೂ ಗಳಿಸಲಿಲ್ಲ. ಆದರೆ, ಕೆಳಕ್ರಮಾಂಕದಲ್ಲಿ ವುಡ್ ಮತ್ತು ಅಟ್ಕಿನ್ಸನ್ ಅವರು ಒಂದಿಷ್ಟು ರನ್‌ಗಳನ್ನು ಹೊಡೆದು ತಂಡದ ಸೋಲಿನ ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನ ಮಾಡಿದ್ದರು. ಆದರೂ ತಂಡವು 229 ರನ್‌ಗಳಿಂದ ಸೋತಿತ್ತು.

ಶ್ರೀಲಂಕಾ ತಂಡವು ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿತ್ತು. ಕಳೆದ ಹಣಾಹಣಿಯಲ್ಲಿ ನೆದರ್ಲೆಂಡ್ಸ್ ವಿರುದ್ಧ ಪ್ರಯಾಸದ ಜಯ ಸಾಧಿಸಿತ್ತು. ಆದರೆ ಎಚ್ಚರಿಕೆಯ ಆಟದ ಮೂಲಕ ತಂಡವು ಎಲ್ಲ ವಿಭಾಗಗಳಲ್ಲಿಯೂ ಸಮಾಧಾನಕರ ಪ್ರದರ್ಶನ ನೀಡಿತ್ತು.

ತಂಡದ ಬೌಲರ್‌ಗಳಾದ ದಿಲ್ಶಾನ್ ಮಧುಶಂಕ ಮತ್ತು ರಜಿತಾ ಅವರು ಚೇತೋಹಾರಿ ಆಟವಾಡಿದ್ದರು. ಆರಂಭಿಕ ಪಥುಮ್ ನಿಸಾಂಕ, ಸದೀರ ಸಮರವಿಕ್ರಮ ಅರ್ಧಶತಕಗಳನ್ನು ಹೊಡೆದು ಲಯಕ್ಕೆ ಮರಳಿದ್ದಾರೆ. ನಾಯಕ ಕುಸಲ ಮೆಂಡಿಸ್ ನಾಲ್ಕು ಪಂದ್ಯಗಳಿಂದ 218 ರನ್ ಗಳಿಸಿದ್ದಾರೆ. ಒಂದು ಶತಕ ಕೂಡ ಹೊಡೆದಿದ್ದಾರೆ. ಅವರು ಕೂಡ ಇಂಗ್ಲೆಂಡ್ ಬೌಲರ್‌ಗಳಿಗೆ ದಿಟ್ಟ ಉತ್ತರ ನೀಡಬಲ್ಲರು. ಆದ್ದರಿಂದ ಕಾಗದದ ಮೇಲೆ ಇಂಗ್ಲೆಂಡ್ ಎಷ್ಟೇ ಬಲಿಷ್ಠ ಎನಿಸಿದರೂ ಲಂಕಾ ತಂಡವನ್ನು ಎದುರಿಸಲು ತನ್ನ ಸಂಪೂರ್ಣ ಸಾಮರ್ಥ್ಯ ವಿನಿಯೋಗಿಸುವುದು ಅನಿವಾರ್ಯವಾಗಲಿದೆ.

ಶ್ರೀಲಂಕಾ ತಂಡದ ಏಂಜೆಲೊ ಮ್ಯಾಥ್ಯೂಸ್

ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಮತ್ತು ಆದಿಲ್ ರಶೀದ್ ಅಭ್ಯಾಸದಲ್ಲಿ ನಿರತರಾಗಿರುವುದು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

> ಶಾಂತಚಿತ್ತದಿಂದ ಇದ್ದು ಪಂದ್ಯದಲ್ಲಿ ಪರಿಸ್ಥಿತಿಗೆ ತಕ್ಕಂತೆ ಆಡಿ ತಂಡಕ್ಕೆ ನೆರವಾಗುವುದೇ ನನ್ನ ಮಂತ್ರ.
>
> **ಏಂಜೆಲೊ ಮ್ಯಾಥ್ಯೂಸ್**
> ಶ್ರೀಲಂಕಾ ಆಟಗಾರ

ತಂಡಗಳು: ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ-ವಿಕೆಟ್‌ಕೀಪರ್), ಜಾನಿ ಬೆಸ್ಟೊ, ಡೇವಿಡ್ ಮಲಾನ್, ಜೋ ರೂಟ್, ಬೆನ್ ಸ್ಟೋಕ್ಸ್, ಹ್ಯಾರಿ ಬ್ರೂಕ್, ಡೇವಿಡ್ ವಿಲಿ, ಆದಿಲ್ ರಶೀದ್, ಕ್ರಿಸ್ ವೋಕ್ಸ್, ಗಸ್ ಅಟ್ಕಿನ್ಸನ್, ಮಾರ್ಕ್ ವುಡ್, ಬ್ರೈಡನ್ ಕೇರ್ಸ್, ಮೋಯಿನ್ ಅಲಿ, ಲಿಯಾಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್.

ಶ್ರೀಲಂಕಾ: ಕುಸಾಲ ಮೆಂಡಿಸ್ (ನಾಯಕ–ವಿಕೆಟ್‌ಕೀಪರ್), ಪಥುಮ್ ನಿಸಾಂಕಾ, ಕುಸಾಲ ಪೆರೆರಾ, ಸದೀರಾ ಸಮರವಿಕ್ರಮ, ಚರಿತಾ ಅಸಲಂಕಾ, ಧನಂಜಯ ಡಿಸಿಲ್ವಾ, ದುಶಾನ್ ಹೇಮಂತ, ಚಾಮಿಕಾ ಕರುಣರತ್ನೆ, ಮಹೀಷ ತೀಕ್ಷಣ, ಕಸುನ್ ರಜಿತಾ, ದಿಲ್ಶಾನ್ ಮಧುಶಂಕ, ಏಂಜೆಲೊ ಮ್ಯಾಥ್ಯೂಸ್, ದಿಮುತ ಕರುಣರತ್ನೆ, ದುಷ್ಮಂತ ಚಮೀರಾ, ಲಾಹಿರು ಕುಮಾರ, ದುನಿತ್ ವೆಲಾಳಗೆ

ಪಂದ್ಯ ಆರಂಭ: ಮಧ್ಯಾಹ್ನ 2

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

ಏಕದಿನ ಕ್ರಿಕೆಟ್ ಬಲಾಬಲ	
ಪಂದ್ಯ	78
ಇಂಗ್ಲೆಂಡ್ ಜಯ	38
ಶ್ರೀಲಂಕಾ ಜಯ	36
ಟೈ	1
ಫಲಿತಾಂಶವಿಲ್ಲ	3

ಪಿಚ್ ಹೇಗಿದೆ?: ಒಂದು ವಾರದ ಹಿಂದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ರನ್‌ಗಳ ಹೊಳೆಯನ್ನೇ ಹರಿಸಿತ್ತು. ಡೇವಿಡ್ ವಾರ್ನರ್ ಮತ್ತು ಮಿಚೆಲ್ ಮಾರ್ಷ್ ಅವರಿಬ್ಬರೂ ಶತಕ ಬಾರಿಸಿದ್ದರು. ಈ ಪಂದ್ಯಕ್ಕೆ ಸಿದ್ಧವಾಗಿರುವ ಪಿಚ್ ಕೂಡ ಏಕಾಗ್ರತೆಯಿಂದ ಆಡುವ ಬ್ಯಾಟರ್‌ಗಳಿಗೆ ಮಣೆ ಹಾಕುವುದು ಖಚಿತ. ಆ ಪಂದ್ಯದಲ್ಲಿ ಸ್ಪಿನ್ನರ್‌ಗಳಿಗೂ ನೆರವು ಸಿಕ್ಕಿತ್ತು. ಆ್ಯಡಂ ಜಂಪಾ ಮಿಂಚಿದ್ದರು. ಅದೇ ರೀತಿ ಇಂಗ್ಲೆಂಡ್ ತಂಡದಲ್ಲಿ ಮೋಯಿನ್ ಅಲಿ ಮತ್ತು ಆದಿಲ್ ರಶೀದ್ ಇದ್ದಾರೆ. ಲಂಕಾ ತಂಡದಲ್ಲಿ ವೆಲಾಳಗೆ ಇದ್ದಾರೆ. ಅವರಿಗೂ ಮಿಂಚುವ ಅವಕಾಶ ಇಲ್ಲಿ ಸಿಗಬಹುದು.

ಇನ್ನೂ ಎರಡು ಪಂದ್ಯಗಳಿಗೆ ಹಾರ್ದಿಕ್ ಪಾಂಡ್ಯ ಅಲಭ್ಯ?

ನವದೆಹಲಿ (ಪಿಟಿಐ): ಪಾದದ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಭಾರತದ ಪ್ರಮುಖ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ವಿಶ್ವಕಪ್‌ನಲ್ಲಿ ಇನ್ನೂ ಎರಡು ಪಂದ್ಯಗಳಿಗೆ ಅಲಭ್ಯರಾಗುವ ಸಾಧ್ಯತೆಯಿದೆ.

ಬಾಂಗ್ಲಾದೇಶ ವಿರುದ್ಧ ಕಳೆದ ವಾರ (ಅ. 19) ಪುಣೆಯಲ್ಲಿ ನಡೆದ ಪಂದ್ಯದ ವೇಳೆ ತಮ್ಮದೇ ಬೌಲಿಂಗ್‌ನಲ್ಲಿ ಚೆಂಡನ್ನು ಕಾಲಿನಿಂದ ತಡೆಯಲು ಹೋದಾಗ ಗಾಯವಾಗಿತ್ತು. ಅವರು ನ್ಯೂಜಿಲೆಂಡ್ ವಿರುದ್ಧ ಭಾನುವಾರ ಧರ್ಮಶಾಲಾದಲ್ಲಿ ನಡೆದ ಪಂದ್ಯದಲ್ಲಿ ಆಡಿರಲಿಲ್ಲ.

ಬೆಂಗಳೂರಿನ ನ್ಯಾಷನಲ್ ಕ್ರಿಕೆಟ್ ಅಕಾಡೆಮಿಯಲ್ಲಿ ಬರೋಡಾದ ಆಟಗಾರ ಚಿಕಿತ್ಸೆಯಲ್ಲಿದ್ದಾರೆ. 'ಹಾರ್ದಿಕ್ ವೈದ್ಯಕೀಯ ನಿಗಾದಲ್ಲಿ ಇದ್ದಾರೆ. ವಾರಾಂತ್ಯದಲ್ಲಿ ಅವರು ಬೌಲಿಂಗ್ ಮಾಡಲು ಆರಂಭಿಸಬಹುದು. ಈಗ ಅವರಿಗೆ ಗುಣಮುಖರಾಗಲು ಅವಕಾಶ ಕೊಡುವುದು ಮುಖ್ಯ' ಎಂದು ಎನ್‌ಸಿಎ ಮೂಲ ಪಿಟಿಐಗೆ ತಿಳಿಸಿದೆ.

ಐದೂ ಪಂದ್ಯಗಳನ್ನು ಜಯಿಸಿರುವ ಭಾರತ ತಂಡದ ಸೆಮಿಫೈನಲ್ ಹಾದಿ ಈಗ ಉಜ್ವಲವಾಗಿರುವ ಕಾರಣ ಅವರಿಗೆ ಮುಂದಿನ ಎರಡು ಪಂದ್ಯಗಳಿಗೆ ಅವರಿಗೆ ವಿಶ್ರಾಂತಿ ನೀಡುವುದು ತಂಡಕ್ಕೆ ಸಮಸ್ಯೆಯಾಗಲಾರದು. ಇದರಿಂದ ಅವರು ಗುಣಮುಖರಾಗಿ ನಾಕೌಟ್ ವೇಳೆ ಲಭ್ಯರಾಗುವ ಅವಕಾಶವಿದೆ.

'ಪಾಂಡ್ಯ ಅವರಿಗೆ ಕಾಲು ಉಳುಕು ತೀವ್ರವಾಗಿತ್ತು. ಅದೃಷ್ಟವಶಾತ್ ಮೂಳೆ ಮುರಿದಿಲ್ಲ. ಬಿಸಿಸಿಐ ವೈದ್ಯಕೀಯ ತಂಡ ಗರಿಷ್ಠ ಮುಂಜಾಗ್ರತೆ ವಹಿಸಿದೆ. ಅವರು ಎರಡು ಪಂದ್ಯಕ್ಕೆ ಅಲಭ್ಯರಾಗಬಹುದು' ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ. ಅವರು ಗುರುವಾರ ಫಿಟ್ನೆಸ್ ಪರೀಕ್ಷೆಗೆ ಒಳಗಾಗುವ ನಿರೀಕ್ಷೆಯಿದೆ. ನಂತರವಷ್ಟೇ ಬಿಸಿಸಿಐ ಅವರ ಪುನರಾಗಮನದ ದಿನಾಂಕ ಪ್ರಕಟಿಸಬಹುದು.

ಮಹಿಳಾ ಕ್ರಿಕೆಟ್ ತಂಡ: ಮಜುಂದಾರ್ ಕೋಚ್

ನವದೆಹಲಿ (ಪಿಟಿಐ): ಮುಂಬೈ ತಂಡದ ಮಾಜಿ ನಾಯಕ ಅಮೋಲ್ ಮಜುಂದಾರ್ ಅವರನ್ನು ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಬುಧವಾರ ನೇಮಕ ಮಾಡಲಾಗಿದೆ. ದೀರ್ಘಕಾಲದಿಂದ ಈ ಹುದ್ದೆಗೆ ನೇಮಕ ಆಗಿರಲಿಲ್ಲ.

ಸುಲಕ್ಷಣಾ ನಾಯಕ್, ಅಶೋಕ ಮಲ್ಹೋತ್ರಾ ಮತ್ತು ಜತಿನ್ ಪರಾಂಜಪೆ ಅವರಿದ್ದ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಕೆಲವು ತಿಂಗಳ ಹಿಂದೆ ಅಂತಿಮಗೊಳಿಸಿದ್ದ ಅಭ್ಯರ್ಥಿಗಳ ಸಂದರ್ಶನ ನಡೆಸಿತ್ತು. ಮಜುಂದಾರ್ ಅವರು ಮುಖ್ಯ ಕೋಚ್ ಹುದ್ದೆಗೆ ನೇಮಕಗೊಳ್ಳುವುದು ಖಚಿತವಾಗಿದ್ದರೂ, ನೇಮಕಕ್ಕೆ ಸ್ಥಿರೀಕರಣ ಪ್ರಕ್ರಿಯೆ ದೀರ್ಘ ಕಾಲ ತೆಗೆದುಕೊಂಡಿತು.

'ದೀರ್ಘ ಸಮಾಲೋಚನೆಯ ನಂತರ ಮೂವರು ಸದಸ್ಯರ ಸಮಿತಿ ಅಮೋಲ್ ಅವರ ಹೆಸರನ್ನು ಈ ಹುದ್ದೆಗೆ ಸರ್ವಾನುಮತದಿಂದ ಶಿಫಾರಸು ಮಾಡಿದೆ' ಎಂದು ಬಿಸಿಸಿಐ ತಿಳಿಸಿದೆ.

ಮಹಿಳಾ ತಂಡಕ್ಕೆ ಈ ಹಿಂದೆ ಕೋಚ್ ಆಗಿದ್ದ ರಮೇಶ್ ಪೊವಾರ್ ಅವರನ್ನು ಬೆಂಗಳೂರು ಕೇಂದ್ರಕ್ಕೆ ಸ್ಪಿನ್ ಕನ್ಸಲ್ಟೆಂಟ್ ಆಗಿ ನೇಮಕ ಮಾಡಿದ ನಂತರ, ಭಾರತ ತಂಡದ ಮಾಜಿ ಬ್ಯಾಟರ್ ಹಾಗೂ ಎನ್‌ಸಿಎ ಸಿಬ್ಬಂದಿ ಹೃಷಿಕೇಶ್ ಕಾನಿಟ್ಕರ್ ಅವರಿಗೆ ತಾತ್ಕಾಲಿಕ ನೆಲೆಯಲ್ಲಿ ಮಹಿಳಾ ತಂಡದ ಕೋಚ್ ಹೊಣೆಯನ್ನು ವಹಿಸಲಾಗಿತ್ತು.

ಮಜುಂದಾರ್ ಅವರು ಸಿಎಸಿ ಮತ್ತು ಬಿಸಿಸಿಐಗೆ ಕೃತಜ್ಞತೆ ಸಲ್ಲಿಸಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿರುವ ಮಜುಂದಾರ್ 21 ವರ್ಷಗಳ ಪ್ರಥಮ ದರ್ಜೆ ಕ್ರಿಕೆಟ್ ಜೀವನದಲ್ಲಿ 171 ಪಂದ್ಯಗಳನ್ನು ಆಡಿದ್ದು, 11,000ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಇವುಗಳಲ್ಲಿ 30 ಶತಕಗಳು ಇವೆ.

ಗೋವಾದಲ್ಲಿ ನಡೆದ 37ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕದ ಮಹಿಳೆಯರ ನೆಟ್‌ಬಾಲ್ ತಂಡ.

ನೆಟ್‌ಬಾಲ್: ಮಹಿಳಾ ತಂಡಕ್ಕೆ ಬೆಳ್ಳಿ

ಬೆಂಗಳೂರು: ಕರ್ನಾಟಕದ ಮಹಿಳೆಯರ ನೆಟ್‌ಬಾಲ್ ತಂಡವು ಗೋವಾದಲ್ಲಿ ನಡೆದ 37ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದಿದೆ.

ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಕರ್ನಾಟಕ ವನಿತೆಯರು ಹರಿಯಾಣ ತಂಡಕ್ಕೆ ತೀವ್ರ ಪೈಪೋಟಿ ನೀಡಿದರು. 52–56ರಿಂದ ಗೆದ್ದ ಹರಿಯಾಣ ಚಿನ್ನದ ಪದಕ ಜಯಿಸಿತು. ನಾಲ್ಕು ಪಾಯಿಂಟ್‌ನಿಂದ ಸೋತ ಕರ್ನಾಟಕ ರನ್ನರ್ ಅಪ್ ಸ್ಥಾನ ಪಡೆಯಿತು.

ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು ತೆಲಂಗಾಣ ತಂಡವನ್ನು 72–26ರಿಂದ ಮಣಿಸಿ ಫೈನಲ್ ಪ್ರವೇಶಿಸಿತ್ತು. ಮಾನಸಾ ನಾಯಕತ್ವದ ತಂಡದಲ್ಲಿ ಗಗನಾ, ನಂದಿನಿ, ಶಿವಲೀಲಾ, ಶಾಲಿನಿ, ಹರ್ಷಿತಾ, ಸುರಭಿ, ರೋಷನಿ, ಸ್ವಾತಿ, ಮನಸ್ವಿ, ದೀಪಾ, ಮೇಘನಾ ಇದ್ದರು.

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ಉತ್ತರ ಪ್ರದೇಶ ತಂಡಕ್ಕೆ ಮಣಿದ ಕರ್ನಾಟಕ

ಡೆಹ್ರಾಡೂನ್: ಉತ್ತರ ಪ್ರದೇಶದ ಅನುಭವಿ ಮಧ್ಯಮವೇಗಿ ಭುವನೇಶ್ವರ್ ಕುಮಾರ್ (16ಕ್ಕೆ5) ಅವರ ಅಮೋಘ ಬೌಲಿಂಗ್ ಮುಂದೆ ಕರ್ನಾಟಕ ತತ್ತರಿಸಿತು.

ಇದರಿಂದಾಗಿ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ನಾಕೌಟ್ ಪ್ರವೇಶದ ಹಾದಿ ಕಠಿಣವಾಯಿತು. ಬುಧವಾರ ನಡೆದ ಇ ಗುಂಪಿನ ಪಂದ್ಯದಲ್ಲಿ ಕರ್ನಾಟಕ 40 ರನ್‌ಗಳಿಂದ ಸೋತಿತು.

ಟೂರ್ನಿಯಲ್ಲಿ ತಂಡಕ್ಕೆ ಇದು ಎರಡನೇ ಸೋಲು. ಕರ್ನಾಟಕದ ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಇನ್ನೆರಡು ಪಂದ್ಯಗಳಲ್ಲಿ ಗೆದ್ದಿತ್ತು. ಇದರಿಂದಾಗಿ ಹತ್ತು ಪಾಯಿಂಟ್‌ಗಳನ್ನು ಕಲೆಹಾಕಿದೆ. ಮಧ್ಯಪ್ರದೇಶ ಮತ್ತು ತಮಿಳುನಾಡು ಕೂಡ ತಲಾ 10 ಅಂಕ ಗಳಿಸಿವೆ. ಉತ್ತಮ ನೆಟ್‌ರನ್ ರೇಟ್ ಇರುವ ಕಾರಣ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಎಲ್ಲ ತಂಡಗಳಿಗೂ ತಲಾ ಒಂದು ಪಂದ್ಯ ಉಳಿದಿದೆ.

ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಉತ್ತರ ಪ್ರದೇಶ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 196 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡಕ್ಕೆ ಮಯಂಕ್ ಅಗರವಾಲ್ (59 ರನ್) ಬಲ ತುಂಬುವ ಯತ್ನ ಮಾಡಿದರು. ಆದರೆ ಉಳಿದ ಬ್ಯಾಟರ್‌ಗಳು ನಿರಾಶೆ ಮೂಡಿಸಿದರು. ಭುವಿಯ ಸ್ವಿಂಗ್ ಎಸೆತಗಳಿಗೆ ಶರಣಾದರು. ತಂಡವು 18.3 ಓವರ್‌ಗಳಲ್ಲಿ 156 ರನ್ ಗಳಿಸಿ ಆಲೌಟ್ ಆಯಿತು.

ಸೇನ್, ಶ್ರೀಕಾಂತ್ ನಿರಾಸೆ

ರೆನ್, ಫ್ರಾನ್ಸ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರರಾದ ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಅವರು ಬುಧವಾರ ಫ್ರೆಂಚ್ ಓಪನ್ ಸೂಪರ್ 750 ಟೂರ್ನಿಯ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಶ್ರೀಕಾಂತ್ 17–21, 15–21ರಿಂದ ಫ್ರಾನ್ಸ್‌ನ ತೋಮಾ ಜೂನಿಯರ್ ಪೊಪೊವ್ ಅವರಿಗೆ ಮಣಿದರೆ, ಲಕ್ಷ್ಯ ಸೇನ್ ಅವರು 15–21, 18–21 ರಿಂದ ಫ್ರಾನ್ಸ್‌ನ ಮತ್ತೊಬ್ಬ ಆಟಗಾರ ಅರ್ನಾಡ್ ಮಾರ್ಕೆಲ್ ಅವರಿಗೆ ಶರಣಾದರು.

ಆರ್ಚರಿ: 29ರಂದು ಟ್ರಯಲ್ಸ್

ಬೆಂಗಳೂರು: ನವೆಂಬರ್‌ನಲ್ಲಿ ನಡೆಯುವ ಎನ್‌ಟಿಪಿಸಿ ಜೂನಿಯರ್ ಮತ್ತು ಸೀನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ಗಾಗಿ ಆಯ್ಕೆ ಟ್ರಯಲ್ಸ್ ಇದೇ 29ರಂದು ಬೆಳಿಗ್ಗೆ 8.30ಕ್ಕೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ಆಯೋಜಿಸಲಾಗಿದೆ.

ನ.15ರಿಂದ 22ರವರೆಗೆ ರಾಜಸ್ಥಾನದ ಭಾರತ್‌ಪುರ್‌ನಲ್ಲಿ 43ನೇ ಎನ್‌ಟಿಪಿಸಿ ಜೂನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್ ಹಾಗೂ ನ.24ರಿಂದ 30ರವರೆಗೆ ಉತ್ತರಪ್ರದೇಶದ ಅಯೋಧ್ಯಾದಲ್ಲಿ 30ನೇ ಎನ್‌ಟಿಪಿಸಿ ಸೀನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸ್ಪರ್ಧಾಳುಗಳು ಅ.27ರ ಮುಂಚಿತವಾಗಿ ಹೆಸರು ನೋಂದಾಯಿಸುವಂತೆ ಕೋರಲಾಗಿದೆ.

ದೂರವಾಣಿ; 22275656.

ಪ್ಯಾರಾ ಏಷ್ಯನ್ ಕ್ರೀಡಾಕೂಟ: ಭಾರತಕ್ಕೆ ಮತ್ತೆ 30 ಪದಕ

ವಿಶ್ವದಾಖಲೆ ಬಲಪಡಿಸಿದ ಸುಮಿತ್

ಹಾಂಗ್‌ಝೌ (ಪಿಟಿಐ): ಹಾಲಿ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಸುಮಿತ್ ಅಂತಿಲ್ ಅವರು ಇಲ್ಲಿ ನಡೆಯುತ್ತಿರುವ ಪ್ಯಾರಾ ಏಷ್ಯನ್ ಕ್ರೀಡಾಕೂಟದ ಜಾವೆಲಿನ್ ಎಸೆತದಲ್ಲಿ ಚಿನ್ನದ ಸಾಧನೆಯ ಜತೆಗೆ ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ಉತ್ತಮಪಡಿಸಿಕೊಂಡರು.

ಕೂಟದ ಮೂರನೇ ದಿನವಾದ ಬುಧವಾರ ಭಾರತದ ಸ್ಪರ್ಧಾಳುಗಳು 30 ಪದಕಗಳನ್ನು ಗೆದ್ದುಕೊಂಡರು. ಅವುಗಳಲ್ಲಿ 6 ಚಿನ್ನ ಸೇರಿದಂತೆ 17 ಪದಕಗಳು ಅಥ್ಲೆಟಿಕ್ಸ್‌ನಿಂದಲೇ ಬಂದವು. ಮೂರು ದಿನಗಳಲ್ಲಿ ಭಾರತವು 15 ಚಿನ್ನ, 20 ಬೆಳ್ಳಿ, 29 ಕಂಚು ಸೇರಿದಂತೆ ಒಟ್ಟು 64 ಪದಕಗಳನ್ನು ಗೆದ್ದುಕೊಂಡು ಪದಕ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ.

ಚೀನಾವು ತನ್ನ ಪಾರಮ್ಯವನ್ನು ಮುಂದುವರಿಸಿದ್ದು, ಈತನಕ 118 ಚಿನ್ನ ಸೇರಿದಂತೆ 300 ಪದಕಗಳನ್ನು ಗೆದ್ದು ಅಗ್ರಸ್ಥಾನದಲ್ಲಿದೆ. ಇರಾನ್ 73 ಮತ್ತು ಜಪಾನ್ 69 ಪದಕಗಳನ್ನು ಗೆದ್ದು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

25 ವರ್ಷದ ಸುಮಿತ್ ಅವರು ಪ್ಯಾರಿಸ್‌ನಲ್ಲಿ ಕಳೆದ ವರ್ಷ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 70.83 ಮೀ. ದೂರ ಜಾವೆಲಿನ್ ಎಸೆದು ವಿಶ್ವದಾಖಲೆ ನಿರ್ಮಿಸಿದ್ದರು. ಈ ಕೂಟದಲ್ಲಿ ಅವರು ಎಫ್ 64 ವಿಭಾಗದ ಸ್ಪರ್ಧೆಯಲ್ಲಿ 73.29 ಮೀ ದೂರ ಎಸೆದು ತಮ್ಮದೇ ದಾಖಲೆಯನ್ನು ಮತ್ತಷ್ಟು ಭದ್ರಗೊಳಿಸಿದರು. ಇದೇ ಸ್ಪರ್ಧೆಯಲ್ಲಿ ಭಾರತದ ಪುಷ್ಪೇಂದ್ರ ಸಿಂಗ್ ಕಂಚಿನ ಪದಕ ಗೆದ್ದರು. ಸುಮಿತ್ ಅವರು 2015ರಲ್ಲಿ ನಡೆದ ಬೈಕ್ ಅಪಘಾತದಲ್ಲಿ ಎಡಗಾಲಿನ ಮೊಣಕಾಲಿನ ಕೆಳಗಿನ ಭಾಗವನ್ನು ಕಳೆದುಕೊಂಡಿದ್ದರು.

ಭಾರತದ ಮತ್ತೊಬ್ಬ ಪ್ಯಾರಾ ಜಾವೆಲಿನ್‌ಪಟು ಸುಂದರ್ ಸಿಂಗ್ ಗುರ್ಜಾರ್ ಪುರುಷರ ಎಫ್ 46 ವಿಭಾಗದಲ್ಲಿ ಜಾವೆಲಿನ್ ಅನ್ನು 68.60 ಮೀ ದೂರ ಎಸೆದು, ಚಿನ್ನ ಗೆಲ್ಲುವ ಜತೆಗೆ ವಿಶ್ವದಾಖಲೆಯನ್ನು ನಿರ್ಮಿಸಿದರು. ಈ ಹಾದಿಯಲ್ಲಿ ಅವರು ಶ್ರೀಲಂಕಾದ ದಿನೇಶ್ ಮುದಿಯನ್ಸೆಲಾಗೆ ಹೆರಾತ್ ಹೆಸರಿನಲ್ಲಿದ್ದ (67.79 ಮೀ) ದಾಖಲೆ ಮುರಿದರು. ಈ ವಿಭಾಗದಲ್ಲಿ ಮೂರು ಪದಕಗಳು ಭಾರತಕ್ಕೆ ದಕ್ಕಿದವು. ರಿಂಕು (67.08 ಮೀ) ಮತ್ತು ಅಜಿತ್ ಸಿಂಗ್ (63.52 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.



ಸುಮಿತ್ ಅಂತಿಲ್

ಅಂಕುರ್ ಧಾಮ ಅವರು ಪುರುಷರ ಟಿ11–1500 ಮೀ. ಓಟದಲ್ಲಿ ಚಿನ್ನದ ಸಾಧನೆ ಮಾಡಿದರು. ಮಂಗಳವಾರ ಅವರು ಪುರುಷರ ಟಿ11– 5000 ಮೀ. ಓಟದಲ್ಲಿ ಬಂಗಾರ ಗೆದ್ದಿದ್ದರು. ಮಹಿಳೆಯರ ಟಿ11–1500 ಮೀ. ಸ್ಪರ್ಧೆಯಲ್ಲಿ ಭಾರತದ ರಕ್ಷಿತಾ ರಾಜು (ಚಿಕ್ಕಮಗಳೂರು) ಮತ್ತು ಕಿಲ್ಲಾಕ ಲಲಿತಾ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪಡೆದರು.

ಪುರುಷರ ಎಫ್ 37/38 ಜಾವೆಲಿನ್ ಎಸೆತದಲ್ಲಿ ಹ್ಯಾನಿ ಮತ್ತು ಮಹಿಳೆಯರ ಟಿ47– ಲಾಂಗ್ ಜಂಪ್‌ನಲ್ಲಿ ನಿಮಿಷಾ ಸುರೇಶ್ ಚಿನ್ನದ ಸಾಧನೆ ಮಾಡಿದರು.

ಕೋಚ್ ರಾಹುಲ್ ಬಾಲಕೃಷ್ಣ ಜೊತೆ ರಕ್ಷಿತಾ ರಾಜು ಸಂಭ್ರಮ

ರಕ್ಷಿತಾ ರಾಜುಗೆ ಚಿನ್ನ

ಕೊಟ್ಟಿಗೆಹಾರ (ಚಿಕ್ಕಮಗಳೂರು): ಜಿಲ್ಲೆಯ ಬಾಳೂರಿನ ಗುಡ್ನಳ್ಳಿ ನಿವಾಸಿ, ಅಂಧ ಓಟಗಾರ್ತಿ ರಕ್ಷಿತಾ ರಾಜು ಅವರು ಪ್ಯಾರಾ ಏಷ್ಯನ್ ಗೇಮ್ಸ್‌ನ ಮಹಿಳೆಯರ 1500 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಬುಧವಾರ ನಡೆದ ಟಿ–11 ವಿಭಾಗದ ಓಟದಲ್ಲಿ ಅವರು 5 ನಿಮಿಷ 21.45 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 5 ನಿಮಿಷ 48.85 ಸೆಕೆಂಡುಗಳಲ್ಲಿ ಓಟ ಪೂರೈಸಿದ ಕಿಲ್ಲಕ ಲಲಿತಾ, ಬೆಳ್ಳಿ ಪದಕ ಗಳಿಸಿ ಭಾರತ ಪಾಳೆಯದಲ್ಲಿ 'ಡಬಲ್' ಸಂಭ್ರಮಕ್ಕೆ ಕಾರಣರಾದರು. ಕಿರ್ಗಿಸ್ತಾನದ ಜುಬೇವಾ ಗುಲ್ನಾಜ್ ತೃತೀಯ ಸ್ಥಾನ ಗಳಿಸಿದರು.

ದೂರವಾಣಿ ಮೂಲಕ 'ಪ್ರಜಾವಾಣಿ' ಜೊತೆ ಮಾತನಾಡಿದ ರಕ್ಷಿತಾ ಅವರ ಕೋಚ್ ರಾಹುಲ್ ಬಾಲಕೃಷ್ಣ ಸಂತಸ ವ್ಯಕ್ತಪಡಿಸಿದರು.

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಬಿಎಫ್‌ಸಿ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಫ್‌ಸಿ ತಂಡವು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡದೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಟೂರ್ನಿಯಲ್ಲಿ ಆಡಿರುವ ಮೂರೂ ಪಂದ್ಯಗಳನ್ನು ಗೆದ್ದು ಆತ್ಮವಿಶ್ವಾಸದಿಂದ ಮೈದಾನಕ್ಕೆ ಇಳಿದಿದ್ದ ಗೋವಾ ತಂಡದ ಆಟಗಾರರು ಆರಂಭದಲ್ಲಿ ಚುರುಕಿನ ಆಟದ ಮೂಲಕ ಗಮನ ಸೆಳೆದರು.

ಕೆಲ ಬದಲಾವಣೆಯೊಂದಿಗೆ ಕಣಕ್ಕೆ ಇಳಿದಿದ್ದ ಆತಿಥೇಯ ತಂಡದಲ್ಲಿ ಸಮನ್ವಯದ ಕೊರತೆ ಎದ್ದು ಕಾಣುತ್ತಿತ್ತು. ಹಾಲಿಚರಣ್ ನರ್ಜಾರಿ ಮತ್ತು ರೋಹಿತ್ ದಾನು ಚೊಚ್ಚಲ ಪಂದ್ಯದಲ್ಲಿ ಹೊಂದಿಕೊಳ್ಳಲು ಸಮಯ ತೆಗೆದುಕೊಂಡರು. ರೋಶನ್ ಸಿಂಗ್ ಮತ್ತು ಸುರೇಶ್ ವಾಂಗ್‌ಜಮ್ ಸೇರ್ಪಡೆ ತಂಡಕ್ಕೆ ಕೊಂಚ ಬಲ ತಂದುಕೊಟ್ಟಿತು.

ಕೊನೆಯ ಹಂತದಲ್ಲಿ ಉಭಯ ತಂಡಗಳ ಆಟಗಾರರು ನಿರ್ಣಾಯಕ ಗೋಲು ಗಳಿಸಲು ಪ್ರಯತ್ನ ನಡೆಸಿದರು. ಆದರೆ, ಅವರ ಪ್ರಯತ್ನ ವಿಫಲವಾದವು. ಹೀಗಾಗಿ, ಎರಡು ತಂಡಗಳು ತಲಾ ಒಂದು ಪಾಯಿಂಟ್‌ಗೆ ತೃಪ್ತಿಪಟ್ಟವು.

ಆಡಿರುವ ಮೂರೂ ಪಂದ್ಯಗಳಲ್ಲಿ ಮೊದಲ ಎರಡು ಪಂದ್ಯಗಳನ್ನು ಸೋತು, ತವರಿನಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಬಿಎಫ್‌ಸಿ ಗೆಲುವು ಸಾಧಿಸಿತ್ತು. ನಾಲ್ಕನೇ ಪಂದ್ಯವನ್ನು ಡ್ರಾ ಸಾಧಿಸಿದ ಬಿಎಫ್‌ಸಿ ಪಾಯಿಂಟ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿ ಮುಂದುವರಿದಿದೆ.

ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿ

ಸೋಲಿನಿಂದ ಪಾರಾದ ರಾಮಕುಮಾರ್

● ಜಿ.ಶಿವಕುಮಾರ

ದಾವಣಗೆರೆ: ಐಟಿಎಫ್ 'ದಾವಣಗೆರೆ ಓಪನ್' ಟೆನಿಸ್ ಟೂರ್ನಿಯಲ್ಲಿ ಬುಧವಾರ ಭಾರತದ ರಾಮಕುಮಾರ್ ರಾಮನಾಥನ್ ಹಾಗೂ ಐಸಾಕ್ ಇಕ್ಬಾಲ್ ನಡುವೆ ನಡೆದ ಸಿಂಗಲ್ಸ್ ಪಂದ್ಯ ರೋಚಕತೆಗೆ ಸಾಕ್ಷಿಯಾಯಿತು.

'ಟೈ ಬ್ರೇಕರ್'ನಲ್ಲಿ ಮೊದಲ ಸೆಟ್ ಕೈಚೆಲ್ಲಿದ ರಾಮಕುಮಾರ್, ಎರಡನೇ ಸೆಟ್‌ನಲ್ಲಿ 2-4ರಿಂದ ಹಿನ್ನಡೆ ಕಂಡರೂ, ಸೋಲನ್ನು ತಪ್ಪಿಸಿಕೊಂಡರು. ಈ ಹಂತದಲ್ಲಿ ಪರಾಕ್ರಮ ಮೆರೆದ ಅವರು 6-7, 7-5, 6-3ರಿಂದ ಸ್ವದೇಶದ ಇಕ್ಬಾಲ್ ವಿರುದ್ಧ ಜಯಿಸಿದರು.

ತಪ್ಪು ನಿರ್ಣಯಗಳನ್ನು ನೀಡುತ್ತಿದ್ದಾರೆಂದು ಆರೋಪಿಸಿ ಪಂದ್ಯದ ಆರಂಭದಿಂದಲೂ ರೆಫರಿ ಜೊತೆ ಜಟಾಪಟಿ ನಡೆಸಿದ ರಾಮಕುಮಾರ್, ಎರಡನೇ ಸೆಟ್‌ನ ಮೊದಲ ಗೇಮ್ ಕೈಚೆಲ್ಲಿದ ಕೂಡಲೇ 'ರ‍್ಯಾಕೆಟ್' ಕೆಳಕ್ಕೆಸೆದು ಪಂದ್ಯದಿಂದ ಹೊರ ನಡೆಯುವುದಾಗಿ ಎಚ್ಚರಿಸಿದರು. ಇಕ್ಬಾಲ್ ಜೊತೆಗೂ ವಾಗ್ವಾದಕ್ಕಿಳಿದರು. ಟೂರ್ನಿಯ ನಿರ್ದೇಶಕರು ಮೈದಾನಕ್ಕೆ ಬಂದು ಇಬ್ಬರನ್ನೂ ಸಮಾಧಾನಪಡಿಸಿದರು. ಇಷ್ಟಾದರೂ ರಾಮಕುಮಾರ್ ಕೋಪ ಶಮನವಾದಂತೆ ಕಾಣಲಿಲ್ಲ.

ಪಂದ್ಯ ಮುಗಿಯುವವರೆಗೂ ರೆಫರಿ ವಿರುದ್ಧ ಅಸಮಾಧಾನ ಹೊರಹಾಕುತ್ತಲೇ ಇದ್ದ ಅವರು, ಗೇಮ್‌ಗಳನ್ನು ಗೆದ್ದಾಗ, 'ಏಸ್'ಗಳನ್ನು ಸಿಡಿಸಿದಾಗ, ಮನಮೋಹಕ ರೀತಿ ಚೆಂಡನ್ನು 'ಡ್ರಾಪ್' ಮಾಡಿದಾಗಲೆಲ್ಲಾ ಜೋರಾಗಿ ಕಿರುಚುತ್ತಾ ಆಕ್ರೋಶ ಹೊರಹಾಕುತ್ತಲೇ ಇದ್ದರು. ರಾಮ್ ಹಾಗೂ ರೆಫರಿ ನಡುವಣ ಈ ತಿಕ್ಕಾಟ, ಬೆರಳೆಣಿಕೆಯಷ್ಟಿದ್ದ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿತು.

57 ನಿಮಿಷಗಳಲ್ಲಿ ಎರಡನೇ ಸೆಟ್ ಜಯಿಸಿದ ಅವರು ನಿರ್ಣಾಯಕ ಎನಿಸಿದ್ದ ಮೂರನೇ ಸೆಟ್‌ನ ನಾಲ್ಕು ಹಾಗೂ ಎಂಟನೇ ಗೇಮ್‌ಗಳಲ್ಲಿ ಇಕ್ಬಾಲ್ ಸರ್ವ್ ಮುರಿದು, 2 ಗಂಟೆ 32 ನಿಮಿಷಗಳಲ್ಲಿ ಗೆಲುವಿನ ನಿಟ್ಟುಸಿರುಬಿಟ್ಟರು. ಅಂಗಳ ತೊರೆಯುವಾಗ 'ದೇವರು ಎಲ್ಲೆಡೆಯೂ ಇದ್ದಾನೆ. ಎಲ್ಲವನ್ನೂ ಗಮನಿಸುತ್ತಿದ್ದಾನೆ' ಎಂದು ಕೂಗುತ್ತಾ ರೆಫರಿಯನ್ನು ಮುಜುಗರಕ್ಕೀಡು ಮಾಡಿದರು.

ಭಾರತದವರ ಪಾರಮ್ಯ: ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಇತರ ಪಂದ್ಯಗಳಲ್ಲೂ ಭಾರತದ ಆಟಗಾರರು ಪಾರಮ್ಯ ಮೆರೆದರು. ವಿಷ್ಣುವರ್ಧನ್ 6-0, 6-1ರಿಂದ ಫೈಸಲ್ ಖಮರ್ ಎದುರೂ, ಎಸ್.ಡಿ. ಪ್ರಜ್ವಲ್ ದೇವ್ 6-3, 6-0ರಿಂದ ಮನೀಷ್ ಗಣೇಶ್ ವಿರುದ್ಧವೂ, ರಿಷಭ್ ಅಗರವಾಲ್ 7-6, 6-4ರಿಂದ ಆಸ್ಟ್ರೇಲಿಯಾದ ಲ್ಯೂಕ್ ಸೊರೆನ್ಸನ್ ಎದುರೂ, ಮನೀಷ್ ಸುರೇಶ್ ಕುಮಾರ್ 6-2, 6-1ರಿಂದ ಅಥರ್ವ ಶರ್ಮಾ ವಿರುದ್ಧವೂ ಗೆದ್ದರು. ಅಗ್ರ ಶ್ರೇಯಾಂಕ ಹೊಂದಿರುವ ಅಮೆರಿಕದ ನಿಕ್ ಚಾಪೆಲ್ 7-6, 6-0ರಿಂದ ವಿರಾಲಿ ಮುರುಗೇಶನ್ ಎದುರು ಜಯಿಸಿದರು.

ರಾಮಕುಮಾರ್ ರಾಮನಾಥನ್ ಸರ್ವ್ ಮಾಡಿದ ರೀತಿ —ಪ್ರಜಾವಾಣಿ ಚಿತ್ರ/ಸತೀಶ ಬಡಿಗೇರ್

ದಿಗ್ವಿಜಯ್ ಛಲದ ಹೋರಾಟ

ಡಬಲ್ಸ್ ಪಂದ್ಯದ ವೇಳೆ ಗಾಯಗೊಂಡಿದ್ದ ದಿಗ್ವಿಜಯ್ ಪ್ರತಾಪ್ ಸಿಂಗ್, ಬಲಗಾಲಿನ ನೋವನ್ನೂ ಲೆಕ್ಕಿಸದೆ ಅಂಗಳಕ್ಕಿಳಿದಿದ್ದರು. ಅವರ ಛಲದ ಹೋರಾಟಕ್ಕೆ ಗೆಲುವು ಒಲಿಯಿತು. ರೋಹನ್ ಮೆಹ್ರಾ ವಿರುದ್ಧದ ಪೈಪೋಟಿಯ ಮೊದಲ ಸೆಟ್‌ನಲ್ಲಿ ಸೋತ ದಿಗ್ವಿಜಯ್, ಬಳಿಕ ಪುಟಿದೆದ್ದರು. ಅತ್ತಿಂದಿತ್ತ ಓಡಾಡುವುದಕ್ಕೂ ಅವರಿಗೆ ಆಗುತ್ತಿರಲಿಲ್ಲ. ಶರವೇಗದ ಸರ್ವ್‌ಗಳ ಮೂಲಕವೇ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದ ಅವರು 4-6, 6-3, 6-2ರಿಂದ ಗೆದ್ದರು.

ರಾಣೆಬೆನ್ನೂರಿನ ಕಾರ್ತಿಕ ಕಾಟೆಗೆ ಮಣಿದ ಇರಾನ್ ಪೈಲ್ವಾನ್

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಪೈಲ್ವಾನ್ ಕಾರ್ತಿಕ ಕಾಟೆ ಅವರು ಕಿತ್ತೂರು ಉತ್ಸವದ ಪ್ರಯುಕ್ತ ಬುಧವಾರ ನಡೆದ ಮುಕ್ತ ವಿಭಾಗದ ಜಂಗಿ ನಿಕಾಲಿ ಕುಸ್ತಿಯಲ್ಲಿ ಇರಾನ್ ದೇಶದ ಪೈಲ್ವಾನ್ ರಿಜಾ ವಿರುದ್ಧ ಗೆಲುವು ಸಾಧಿಸಿದರು.

ವಿಶ್ವ ಕುಸ್ತಿಯಲ್ಲಿ ಪದಕ ಗಳಿಸಿದ 68 ಕೆಜಿ ತೂಕದ ರಿಜಾ ಮತ್ತು 'ಕರ್ನಾಟಕ ಕೇಸರಿ' ಖ್ಯಾತಿಯ 78 ಕೆಜಿ ತೂಕದ ಕಾರ್ತಿಕ ನಡುವಿನ ಕಾಳಗ ಕುತೂಹಲ ಮೂಡಿಸಿತ್ತು. ಆರಂಭದಿಂದಲೂ ಹಿಡಿತ ಸಾಧಿಸಿದ ಕಾರ್ತಿಕ 'ಏಕ್ ಲಂಗಿ ಡಾವ್' ಹಾಕುವ ಮೂಲಕ ಎದುರಾಳಿಯನ್ನು ಮಣಿಸುವಲ್ಲಿ ಯಶಸ್ವಿಯಾದರು.

ಇರಾನ್ ಪೈಲ್ವಾನ್‌ಗೆ ಜಯ: ಇರಾನ್‌ನ ಮತ್ತೊಬ್ಬ ಕುಸ್ತಿಪಟು ಅಹ್ಮದ್ ಮಿರ್ಜಾ ಮತ್ತು ಹರಿಯಾಣದ ಉಮೇಶ್ ಚೌಧರಿ ಮಧ್ಯೆ 50 ನಿಮಿಷ ನೇರ ಹಣಾಹಣಿ ಏರ್ಪಟ್ಟಿತು. ಈ ವೇಳೆ ಉಮೇಶ್ ಭುಜಕ್ಕೆ ಪೆಟ್ಟುಬಿದ್ದು ಅವರು ಸೆಣಸಾಟ ಮುಂದುವರಿಸಲು ನಿರಾಕರಿಸಿದರು. ಹೀಗಾಗಿ ಅಹ್ಮದ್ ವಿಜಯಿ ಎಂದು ಘೋಷಿಸಲಾಯಿತು.

ಮತ್ತೊಂದು ಪಂದ್ಯದಲ್ಲಿ ದೆಹಲಿಯ ಅಮಿತ್ ಕುಮಾರ್ ಅವರು ಬಾಗಲಕೋಟೆ ಜಿಲ್ಲೆಯ ಮುಧೋಳದ ಸುನೀಲ್ ಪಡತರೆ ವಿರುದ್ಧ ಜಯ ಸಾಧಿಸಿದರು. ಮಹಾರಾಷ್ಟ್ರದ ಸಾಂಗ್ಲಿಯ ವಾಸೀಮ್ ಪಠಾಣ ಮತ್ತು ನಾಗರಾಜ ಬಸಿಡೋಣಿ, ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಶಿವಯ್ಯ ಪೂಜಾರಿ ಮತ್ತು ಇಂಗಳಗಿಯ ಶಿವಾನಂದ ದಡ್ಡಿ ಅವರ ಮಧ್ಯದ ಸೆಣಸಾಟ ಸಮಬಲದಲ್ಲಿ ಕೊನೆಗೊಂಡಿತು.

ಮಹಿಳೆಯರ ವಿಭಾಗದಲ್ಲಿ ಮಹಾರಾಷ್ಟ್ರದ ಪೈಲ್ವಾನ್ ಅಪೇಕ್ಷಾ ಪಾಟೀಲ ಮತ್ತು ಹರಿಯಾಣದ ಇಷಾ ಪೂನಿಯಾ ಮಧ್ಯೆ ನಡೆದ ಪಂದ್ಯ ಕುತೂಹಲ ಮೂಡಿಸಿತು. ಇಬ್ಬರು ಜಟ್ಟಿಗಳು ಸಮಬಲದ ಪೈಪೋಟಿ ನೀಡಿದರು. ಕೊನೆಗೆ ಇಷಾ ವಿರುದ್ಧ ಅಪೇಕ್ಷಾ ಗೆದ್ದು ಸಂಭ್ರಮಿಸಿದರು. ಖಾನಾಪುರದ ಖುತುಜಾ ಗಣೇಬೈಲ್, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ವಿದ್ಯಾಶ್ರೀ ಗೆನೆನ್ನವರ ಅವರನ್ನು ಮಣಿಸಿದರೆ, ಧಾರವಾಡದ ಕಾವ್ಯ ದಾನೆನ್ನವರ ಬೆಳಗಾವಿ ತಾಲ್ಲೂಕಿನ ಕಂಗ್ರಾಳಿಯ ಭಕ್ತಿ ಪಾಟೀಲ ವಿರುದ್ಧ ಗೆದ್ದರು.

ಅಪಾರ ಜನ: ಕಳೆದ ವರ್ಷ ಕಿತ್ತೂರು ಉತ್ಸವದಲ್ಲಿ ಪಾಯಿಂಟ್ ಆಧಾರದಲ್ಲಿ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿತ್ತು. ಇದಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಜಂಗಿ ನಿಕಾಲಿ ಕುಸ್ತಿಗೆ ಜಿಲ್ಲಾಡಳಿತ ಮಣೆಹಾಕಿತು. ಇದನ್ನು ವೀಕ್ಷಿಸಲು ರಾಜ್ಯದ ವಿವಿಧೆಡೆಯಿಂದ ಕ್ರೀಡಾಸಕ್ತರ ದಂಡೇ ಹರಿದುಬಂದಿತ್ತು. ಶಿಳ್ಳೆ, ಕೇಕೆಗಳ ಮೂಲಕ ಜಟ್ಟಿಗಳನ್ನು ಹುರಿದುಂಬಿಸಿತು.

ಪುರುಷರ ವಿಭಾಗದಲ್ಲಿ 56 ಹಾಗೂ ಮಹಿಳೆಯರ ವಿಭಾಗದಲ್ಲಿ 5 ಜೋಡಿಗಳು ಸೆಣಸಿದವು. ಕರ್ನಾಟಕ, ಮಹಾರಾಷ್ಟ್ರ ಮತ್ತು ಹರಿಯಾಣದ ಕುಸ್ತಿಪಟುಗಳು ಭಾಗವಹಿಸಿದ್ದರು. ವಿಜೇತರಿಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಶಾಸಕ ಬಾಬಾಸಾಹೇಬ ಪಾಟೀಲ ಪ್ರಶಸ್ತಿ ಪ್ರದಾನ ಮಾಡಿದರು.

ಚನ್ನಮ್ಮನ ಕಿತ್ತೂರಿನಲ್ಲಿ ಉತ್ಸವ ಅಂಗವಾಗಿ ಬುಧವಾರ ನಡೆದ ಜಂಗಿ ನಿಕಾಲಿ ಕುಸ್ತಿ ವೀಕ್ಷಿಸಲು ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು – ಪ್ರಜಾವಾಣಿ ಚಿತ್ರ/ಇಮಾಮ್‌ಹುಸೇನ್ ಗೂಡುನವರ

ಭಾರತ ಪುರುಷರ ಸ್ಕೀಟ್ ತಂಡಕ್ಕೆ ಚಿನ್ನ

ನವದೆಹಲಿ (ಪಿಟಿಐ): ಅನಂತ್ ಜೀತ್ ಸಿಂಗ್ ನರೂಕಾ, ಗುರ್ಜೋತ್ ಖನ್ನುರಾ ಮತ್ತು ಅಂಗದ್ ವೀರ್ ಸಿಂಗ್ ಬಾಜ್ವಾ ಅವರನ್ನು ಒಳಗೊಂಡ ಭಾರತ ತಂಡ, ದಕ್ಷಿಣ ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಸ್ಕೀಟ್ ವಿಭಾಗದ ಚಿನ್ನ ಗೆದ್ದುಕೊಂಡಿತು.

ದಕ್ಷಿಣ ಕೊರಿಯಾ ತಂಡ ಎರಡನೇ ಸ್ಥಾನಕ್ಕೆ ಸರಿದರೆ, ಕಜಕಸ್ತಾನ ತಂಡ ಮೂರನೇ ಸ್ಥಾನ ಪಡೆಯಿತು. ನರೂಕಾ ಮತ್ತು ಖನ್ನುರಾ ಅವರು ವೈಯಕ್ತಿಕ ವಿಭಾಗದ ಫೈನಲ್ ತಲುಪಿದರೂ ಪದಕ ಕೈತಪ್ಪಿತು. ಅವರು ಕ್ರಮವಾಗಿ ನಾಲ್ಕು ಮತ್ತು ಆರನೇ ಸ್ಥಾನ ಪಡೆದರು.

ಸರಬ್ಜೋತ್ ಸಿಂಗ್ ಮತ್ತು ಸುರಭಿ ರಾವ್ ಅವರು 581 ಪಾಯಿಂಟ್ಸ್ ಗಳಿಸಿ ಮಿಕ್ಸೆಡ್ ವಿಭಾಗದಲ್ಲಿ ಭಾರತಕ್ಕೆ ಬೆಳ್ಳಿಯ ಪದಕ ಗೆದ್ದುಕೊಟ್ಟರು. ಜೂನಿಯರ್ ವಿಭಾಗದಲ್ಲಿ ಭಾರತದ ಶುಭಂ ಬಿಸ್ಲಾ ಮತ್ತು ಸೈನ್ಯಂ ಅವರು 10 ಮೀ. ಏರ್‌ಪಿಸ್ತೂಲ್‌ನಲ್ಲಿ ಕಂಚಿನ ಪದಕ ಗಳಿಸಿದರು.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; Website: www.honda2wheelersindia.com; Customer Care: customercare@honda2wheelersindia.com

*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 08025139199, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397, 080-43333330; Haiku Honda - DOMLUR: 49656565, 9342432156; INDIRANAGAR: 9844478636; Dhruvdesh Honda - MEKHRI CIRCLE: 40500700, 9343968413; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 9844502222, 9844726973; BANSHANKARI: 9844502444, 8722279009; R.R. NAGAR: 9964388333, 9071175200; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BG ROAD: 8553004004; KKP ROAD: 8553004002; PUTTENHALLI: 7353251007; GOTTIGERE: 8553004009; BTM: 7353252007; VFM Honda - KR PURAM: 9071858885, 9071858881; HENNUR ROAD: 9108989817, 9108989818; Tansi Honda - HOODI: 7259030091, 9741410101; MARTHAHALLI: 7259030100, 7259030093; VARTHUR RD: 8105597877, 9686573013; GUNJUR: 9606450642, 9606450643; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 9900092115; MULBAGAL: 9008941044; SRINIVASAPUR: 8495956515; BANGARPET - 9980607661; Namma Honda - CHIKKABALLAPUR: 9606060610, 9611996114; CHINTAMANI: 9606060620, 9611996115; BAGEPALLI: 9611596112, 9611596110; Shankar Honda - GOWRIBIDANUR: 9900007422/33; SIDLAGHATTA: 9611596113; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030, 9606036040; KANAKAPURA: 9606036053, 9606036054; CHANNAPATNA: 9606490034, 9035717953; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 7899870207.
For Bulk/Institutional enquiries, please write us at: institutionalsales@honda2wheelersindia.com